ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 2 ಸೋಮವಾರ 2023

ಸಂಪುಟ: 44 | ಸಂಚಿಕೆ: 167 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಿಜೆಪಿ ಜೊತೆ ಮೈತ್ರಿಗೆ ಜೆಡಿಎಸ್ ಶಾಸಕರು ಅಸ್ತು

- ಸಭೆಯಲ್ಲಿ 19 ಶಾಸಕರಲ್ಲಿ 17 ಮಂದಿ ಹಾಜರು
- ಸಭೆಗೆ ಪಕ್ಷದ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಗೈರು
- ಮುಸ್ಲಿಂ ಬಾಂಧವರಿಗೆ ಕುಮಾರಸ್ವಾಮಿ ಕಿವಿಮಾತು
- ಮತ್ತೊಮ್ಮೆ ಕುಮಾರಣ್ಣ ಸಿಎಂ: ಶಾಸಕರ ಪ್ರಮಾಣ

ರಾಮನಗರ: ಬಿಜೆಪಿ ಜೊತೆಗಿನ ಮೈತ್ರಿಗೆ ಜೆಡಿಎಸ್ ಹಾಲಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಸರ್ವಾನುಮತದ ಒಪ್ಪಿಗೆ ಸೂಚಿಸಿದ್ದಾರೆ.

ಬಿಜೆಪಿ–ಜೆಡಿಎಸ್ ಮೈತ್ರಿ ವಿಚಾರವಾಗಿ ಜೆಡಿಎಸ್ ಪಕ್ಷದಲ್ಲಿ ಅಸಮಾಧಾನ ಸ್ಫೋಟಗೊಂಡ ಹಿನ್ನೆಲೆಯಲ್ಲಿ, ಪಕ್ಷದ ಡ್ಯಾಮೇಜ್ ಕಂಟ್ರೋಲ್ ಮಾಡಲು ಖುದ್ದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೇ ಅಖಾಡಕ್ಕಿಳಿದು, ಜೆಡಿಎಸ್ ಹಾಲಿ ಶಾಸಕರು, ವಿಧಾನ ಪರಿಷತ್ ಸದಸ್ಯರ ಸಭೆ ಕರೆದು, ಮೈತ್ರಿಗೆ ಸರ್ವಾನುಮತದಿಂದ ಒಪ್ಪಿಗೆ ಪಡೆದಿದ್ದಾರೆ. ಈ ಮೂಲಕ ಬಿಜೆಪಿ ಜೊತೆಗಿನ ಮೈತ್ರಿಯ ಉದ್ದೇಶ ಕುರಿತು ಪಕ್ಷದ ನಾಯಕರ ಮನವೊಲಿಸುವಲ್ಲಿ ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಸಕ್ಸಸ್ ಆಗಿದ್ದಾರೆ.



ಮುಂಬರುವ ಲೋಕಸಭಾ ಚುನಾವಣೆ ದೃಷ್ಟಿಯಿಂದ ಹೊಂದಾಣಿಕೆ ಮಾಡಿಕೊಂಡಿರುವ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳಿಗೆ ಅಸಮಾಧಾನದ ಬಿಸಿ ತಟ್ಟಿದೆ. ಮೈತ್ರಿಗೆ ಜೆಡಿಎಸ್‌ನ ಕೆಲ ಶಾಸಕರು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಮೈತ್ರಿಯ ಅನಿವಾರ್ಯತೆ ಹಾಗೂ ಪಕ್ಷದಲ್ಲಿನ ಗೊಂದಲ ನಿವಾರಿಸಲು ಖುದ್ದು ದೊಡ್ಡಗೌಡರೇ ಸಭೆ ನಡೆಸಿ, ಶಾಸಕರಿಗೆ ಮೈತ್ರಿಯ ಉದ್ದೇಶ ಮನವರಿಕೆ ಮಾಡಿಕೊಟ್ಟಿದ್ದಾರೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಬಿಡದಿಯ ಕೇತಗಾನಹಳ್ಳಿ ತೋಟದ ಮನೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಸಂಬಂಧ ನಡೆದ ಸಭೆಯಲ್ಲಿ 19 ಶಾಸಕರ ಪೈಕಿ 17 ಜನ ಶಾಸಕರು ಹಾಜರಾಗಿದ್ದರು. ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಅವರ ನೇತೃತ್ವದಲ್ಲಿ ಸಭೆ ನಡೆಯಿತು. ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ, ಹನೂರು ಶಾಸಕ ಮಂಜುನಾಥ್, ಗುರುಮಿಟ್ಕಲ್ ಶಾಸಕ ಶರಣಗೌಡ ಕುಂದಕೂರ್ ಗೈರಾಗಿದ್ದರು. ಅಂತೂ ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರ ▶ 10ನೇ ಪುಟಕ್ಕೆ

ದಸರಾಗೆ ಮುನ್ನವೇ ಮೈಸೂರಲ್ಲಿ ಟ್ರಾಫಿಕ್ ಜಾಮ್

- ಸರಣಿ ರಜೆಯಿಂದ ಮೈಸೂರಿಗೆ ಹರಿದು ಬಂದಿದೆ ಪ್ರವಾಸಿಗರ ದಂಡು
- ಪ್ರಮುಖ ರಸ್ತೆ, ವೃತ್ತಗಳಲ್ಲಿ ಭಾರೀ ಸಂಖ್ಯೆಯ ವಾಹನ ಸಂಚಾರ; ಅಡಿಗಡಿಗೂ ಟ್ರಾಫಿಕ್ ಜಾಮ್
- ಹೈರಾಣಾದ ವಾಹನ ಚಾಲಕರು; ಹರಸಾಹಸಪಟ್ಟ ಪೊಲೀಸರು

ಮೈಸೂರು, ಅ.1(ಎಸ್‌ಬಿಡಿ)– ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಭಾನುವಾರ ಟ್ರಾಫಿಕ್ ಜಾಮ್ ಉಂಟಾಗಿದ್ದರಿಂದ ವಾಹನ ಸವಾರರು ಪರದಾಡುವಂತಾಯ್ತು.



ವಾರಾಂತ್ಯ ದಿನಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ಆದರೆ ಗಾಂಧಿ ಜಯಂತಿ ಹಿನ್ನೆಲೆಯಲ್ಲಿ ಸೋಮವಾರವೂ ಸರ್ಕಾರಿ ರಜಾ ದಿನವಾಗಿರುವುದರಿಂದ ಹೆಚ್ಚಿನ ಪ್ರವಾಸಿಗರು ಮೈಸೂರಿಗೆ ಧಾವಿಸುತ್ತಿದ್ದಾರೆ. ಸ್ವಂತ ಕಾರು, ಕ್ಯಾಬ್, ಮಿನಿ ಬಸ್‌ಗಳಲ್ಲಿ ಆಗಮಿಸಿದ್ದಾರೆ. ಪರಿಣಾಮ ಪ್ರೇಕ್ಷಣೀಯ ಸ್ಥಳಗಳ ಸುತ್ತ ವಾಹನ ದಟ್ಟಣೆ ವಿಪರೀತವಾಗಿತ್ತು.

ಸಾಲು ಸಾಲು ರಜೆ: ಸೆ.28ರಂದು ಈದ್ ಮಿಲಾದ್ ಹಬ್ಬವಿತ್ತು. ಸೆ.29ರಂದು ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಬಹುತೇಕ ಸರ್ಕಾರಿ ಕಚೇರಿಗಳೂ ಮುಚ್ಚಿದ್ದವು. ಇನ್ನು ಇಂದು(ಅ.1) ಮತ್ತು ನಾಳೆ(ಅ.2) ರಜಾ ದಿನ. ಈ ಮಧ್ಯೆ ಸೆ.30ರಂದು ಒಂದು ದಿನ ರಜೆ ಹಾಕಿ ನಾಲ್ಕೈದು ದಿನ ಪ್ರವಾಸ ಯೋಜನೆ ಮಾಡಿದ್ದಾರೆ. ಅಲ್ಲದೆ ಈದ್ ಮಿಲಾದ್ ಹಿನ್ನೆಲೆಯಲ್ಲಿ ನೆರೆ ರಾಜ್ಯ ಕೇರಳದಿಂದಲೂ ಹೆಚ್ಚಿನ ಪ್ರವಾಸಿಗರು ಮೈಸೂರಿಗೆ ಬರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅರಮನೆ, ಮೃಗಾಲಯ ಬಳಿ ಹಾಗೂ ಚಾಮುಂಡಿಬೆಟ್ಟದಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಪಾರ್ಕಿಂಗ್‌ಗೆ ಹೆಣಗಾಟ: ಅರಮನೆ ಸುತ್ತ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಪಾರ್ಕಿಂಗ್ ಸ್ಥಳ ಭರ್ತಿಯಾಗಿದ್ದರಿಂದ ವಾಹನ ನಿಲುಗಡೆಗೆ ಸ್ಥಳವಿಲ್ಲದೆ ಚಾಲಕರು ಪರದಾಡಿದರು. ನಗರಪಾಲಿಕೆ, ಬಸವೇಶ್ವರ ಪುತ್ಥಳಿ ಬಳಿ ಹಾಗೂ ಸಿಕ್ಕ ಸಿಕ್ಕಲ್ಲಿ ವಾಹನ ನಿಲ್ಲಿಸಿಕೊಂಡಿದ್ದರು. ಎಲ್ಲಿಯೂ ಸ್ಥಳಾವಕಾಶ ಸಿಗದವರು ಪ್ರವಾಸಿಗರನ್ನು ಅರಮನೆ ಮುಂಭಾಗ ಇಳಿಸಿ, ಅನಿವಾರ್ಯವಾಗಿ ಅರಮನೆ ▶ 10ನೇ ಪುಟಕ್ಕೆ

ಮುಂದಿನ ಬಜೆಟ್‌ನಲ್ಲಿ ಹಿರಿಯರಿಗೆ ಪಿಂಚಣಿ ಹೆಚ್ಚಳ


ಬೆಂಗಳೂರು,ಅ.1–ಹಿರಿಯ ನಾಗರಿಕರಿಗೆ ನೀಡುತ್ತಿರುವ ಮಾಸಾಶನವನ್ನು ಮುಂದಿನ ಬಜೆಟ್‌ನಲ್ಲಿ ಹೆಚ್ಚಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.





ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ, ಹಿರಿಯ ನಾಗರಿಕರ ಮಾಸಾಶನ ಹೆಚ್ಚಳಕ್ಕೆ ಮನವಿ ಬಂದಿದ್ದು, ಮುಂದಿನ ಬಜೆಟ್‌ನಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಸನ್ಮಾನಿತರಾದ ಪದ್ಮಶ್ರೀ ಪುರಸ್ಕೃತ ಹರೇ ಕಳ ಹಾಜಪ್ಪ, ಹಿರಿಯ ನ್ಯಾಯವಾದಿ ಪಿ.ಎಸ್. ರಾಜಗೋಪಾಲ್, ಯೋಗಪಟು ಡಿ.ನಾಗರಾಜ್, ಸಂಬಾಳ ವಾದಕ ಹಣಮಂತ ಗೋವಿಂದಪ್ಪ ಹೂಗಾರ, ನಿವೃತ್ತ ಕುಲಪತಿ ಆರ್.ಆರ್. ಹಂಚಿನಾಳ, ಸಮಾಜ ಸೇವಕ ವೀರಭದ್ರಪ್ಪ ಶರಣಪ್ಪ ಉಪ್ಪಿನ, ನಿವೃತ್ತ ಶಿಕ್ಷಕರಾದ ಎಚ್.ಎಸ್.ಗಿರಿರಾಜ್ ಎಲ್ಲರೂ ನಮಗೆ ಮಾದರಿ ಮತ್ತು ಮಾರ್ಗದರ್ಶಕರು. ಇವರ ಬದುಕಿನ ಮೌಲ್ಯಗಳು ಸಮಾಜವನ್ನು ಬೆಳಗುತ್ತವೆ ಎಂದು ಮೆಚ್ಚುಗೆ ಸೂಚಿಸಿದರು. ▶ 10ನೇ ಪುಟಕ್ಕೆ

ಇಂದು ಗಾಂಧಿ ಜಯಂತಿ



ಈಶ್ವರ ಅಲ್ಲಾ
ತೇರೆ ನಾಮ್
ಸಬ್ ಕೋ ಸನ್ಮತಿ
ದೇ ಭಗವಾನ್

ಪ್ರತಿ ಮಗುವಿನಲ್ಲೂ ಸಾಧಕ ಶಕ್ತಿ ಇದೆ

● ಉದಯೋನ್ಮುಖ ನಟಿ ನಿಖಿಲಾ ಸಮನ್ ಅಭಿಮತ ● ಮಗುವಿನ ಆಸಕ್ತಿ ಗುರುತಿಸಿ ಉತ್ತೇಜಿಸಬೇಕು ● ನೈಪುಣ್ಯ ದಸರಾ ಚಿತ್ರಕಲಾ ಪ್ರಶಸ್ತಿ ಪ್ರದಾನ



ಮೈಸೂರು,ಅ.1–ಪ್ರತಿ ಮಗುವಿನಲ್ಲೂ ಸಾಧಕ ಶಕ್ತಿ ಇದ್ದೇ ಇರುತ್ತದೆ. ಈ ನಿಟ್ಟಿನಲ್ಲಿ ಮಗುವಿನ ಆಸಕ್ತಿ ವಲಯ ಗುರುತಿಸಿ ಉತ್ತೇಜಿಸುವುದು ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಇದು ಪರಸ್ಪರ ಸಹಕಾರದಿಂದ ಈಡೇರಿದರೆ ಮಾತ್ರ ಅರ್ಥಪೂರ್ಣ, ನೈಜ ಶಿಕ್ಷಣ ಮಗುವಿಗೆ ದೊರಕಿಸಿಕೊಡಲು ಸಾಧ್ಯ ಎಂದು ರಂಗ ಕಲಾವಿದೆಯೂ ಆದ ಉದಯೋನ್ಮುಖ ನಟಿ ನಿಖಿಲಾ ಸುಮನ್ ಹೇಳಿದರು.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿದ್ದ ನೈಪುಣ್ಯ ದಸರಾ ಚಿತ್ರಕಲಾ ಪ್ರಶಸ್ತಿ ಪ್ರದಾನ ಹಾಗೂ ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

ಯಾವುದೇ ಕ್ಷೇತ್ರದಲ್ಲಿ ಸಾಧಿಸಬೇಕಾದರೂ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ ಇರಲೇಬೇಕು. ಆ ಗುಣವನ್ನು ಬೆಳೆಸುವ ಸಾಮರ್ಥ್ಯ ಇರುವುದು ರಂಗಭೂಮಿಗೆ ಮಾತ್ರ. ಪಠ್ಯಕ್ರಮದಲ್ಲಿ ಇರದ ಜ್ಞಾನ, ವಿವೇಕ ಹಾಗೂ ಆತ್ಮಸ್ಥೈರ್ಯ ತುಂಬುವ ರಂಗಭೂಮಿ ಶಿಕ್ಷಣದಲ್ಲಿ ಒಂದು ಭಾಗವಾಗಬೇಕು. ಆಗ ಮಾತ್ರ ಪ್ರತಿ ವಿದ್ಯಾರ್ಥಿಯಲ್ಲಿ ನಾವು ಸಾಧಕನನ್ನು ನೋಡಲು ಸಾಧ್ಯ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಮಾತನಾಡಿ, ನೈಪುಣ್ಯ ಶಾಲೆಯು ಏರ್ಪಡಿಸಿದ್ದ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳು ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಬೇಕು. ಬಹುಮಾನ ಬಾರದ ವಿದ್ಯಾರ್ಥಿಗಳು ಗೆಲುವಿನ ಛಲ ಮೂಡಿಸಿಕೊಳ್ಳಬೇಕು. ಸ್ಪರ್ಧೆಗಳ ಸಾಂಕೇತಿಕ ಭಾಗವಹಿಸುವಿಕೆ ಆತ್ಮವಿಶ್ವಾಸದ ಸಂಕೇತ ಎಂದು ವಿದ್ಯಾರ್ಥಿಗಳನ್ನು ಉತ್ತೇಜಿಸಿದರು. ಸಮಾರಂಭಕ್ಕೂ ಮುನ್ನ ನೈಪುಣ್ಯ ಸ್ಕೂಲ್ ಎಕ್ಸಲೆನ್ಸ್‌ನ ವಿದ್ಯಾರ್ಥಿಗಳು ರಂಗಕರ್ಮಿ ಕೆಆರ್ ಸುಮತಿ ನಿರ್ದೇಶನದಲ್ಲಿ ಪಂಜರ ಶಾಲೆ ನಾಟಕ ಅಭಿನಯಿಸಿ ಪ್ರೇಕ್ಷಕರ ಪ್ರಶಂಸೆಗೆ ಪಾತ್ರರಾದರು. ಸಂಸ್ಥೆ ಅಧ್ಯಕ್ಷ ಆರ್.ರಘು ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲೆ ಶೋಭಿತಾ ಎಸ್.ಆರಾಧ್ಯ ಇನ್ನಿತರರು ಉಪಸ್ಥಿತರಿದ್ದರು.

ಅತಿ ಹೆಚ್ಚು ರಕ್ತದಾನ ಶಿಬಿರ ಆಯೋಜಿಸಿದ್ದ ಸಂಘ ಸಂಸ್ಥೆಗಳ ಮುಖ್ಯಸ್ಥರಿಗೆ ಪ್ರಶಂಸನಾ ಪತ್ರ ವಿತರಣೆ

ರಕ್ತಕ್ಕೆ ಸರಿಸಾಟಿ ರಕ್ತವೇ ಹೊರತು ಪರ್ಯಾಯವಿಲ್ಲ; ಕೆ.ಆರ್.ಆಸ್ಪತ್ರೆ ರಕ್ತನಿಧಿ ಅಧಿಕಾರಿ ಡಾ.ಮಂಜುನಾಥ್ ಅರಿವು



ಅತಿ ಹೆಚ್ಚು ರಕ್ತದಾನ ಶಿಬಿರ ಆಯೋಜಿಸಿದ್ದ ಸಂಘ ಸಂಸ್ಥೆಗಳ ಮುಖ್ಯಸ್ಥರಿಗೆ ಪ್ರಶಂಸನಾ ಪತ್ರ ವಿತರಿಸಲಾಯಿತು.

ಮೈಸೂರು, ಅ.1–ಮೈಸೂರಿನ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ ಅಂಗವಾಗಿ ಅತಿ ಹೆಚ್ಚು ರಕ್ತದಾನ ಶಿಬಿರವನ್ನು ಆಯೋಜಿಸಿದ ಬ್ಲಡ್ ಆನ್ ಕಾಲ್ ಕ್ಲಬ್, ಎಸ್‌ಡಿಎಂ (ಎಂಎಂಕೆ) ಕಾಲೇಜ್, ರೋಟರಿ ಸಂಸ್ಥೆ, ದಿ ಬೆಟರ್ hands, ತೆರಪಂತ್ ಯುವ ಪರಿಷದ್, ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಎಟಿಎಂಇ ಕಾಲೇಜ್ ಆಫ್ ಇಂಜಿನಿಯರಿಂಗ್, ಇನ್ಫೋಸಿಸ್, ಹಿಂದುಸ್ತಾನ್ ಕಾಲೇಜ್, ಭಾರತ್ ಅರ್ಥ್ ಮೂವರ್ಸ್ ಲಿ., ನೆಕ್ಸಾಸ್ ಸೆಂಟರ್ ಸಿಟಿ ಮಾಲ್, ಇಂಟರ್‌ನ್ಯಾಷನಲ್ ಯೂಥ್ ಹಾಸ್ಟೆಲ್ ಸಂಘ ಸಂಸ್ಥೆಯ ಮುಖ್ಯಸ್ಥರಿಗೆ ಪ್ರಶಂಸನಾ ಪತ್ರ ವಿತರಿಸಿ, ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಕೆ.ಆರ್.ಆಸ್ಪತ್ರೆಯ ರಕ್ತನಿಧಿ ವೈದ್ಯಕೀಯ ಅಧಿಕಾರಿ ಡಾ.ಮಂಜುನಾಥ್, ನೀರು, ಆಹಾರ ಸೇರಿದಂತೆ ಪ್ರತಿಯೊಂದಕ್ಕೂ ಪರ್ಯಾಯವಿದೆ. ಆದರೆ, ರಕ್ತಕ್ಕೆ ಮಾತ್ರ ಪರ್ಯಾಯವಿಲ್ಲ. ಅವಶ್ಯ ಇದ್ದಾಗ ರಕ್ತವನ್ನೇ ನೀಡಬೇಕು. ಹೀಗಾಗಿ ಎಲ್ಲರೂ ರಕ್ತದಾನಕ್ಕೆ ಮುಂದಾಗಬೇಕು ಎಂದು ಅಭಿಪ್ರಾಯಪಟ್ಟರು.

ಹಣ, ಭೂಮಿ, ಬಟ್ಟೆ, ಬಂಗಾರವನ್ನು ದಾನವಾಗಿ ನೀಡಿದರೂ, ಜೀವ ಉಳಿಸಿದ ಸಾರ್ಥಕತೆ ಬರುವುದಿಲ್ಲ. ಆದರೆ, ತುರ್ತಾಗಿ ರಕ್ತ ಅವಶ್ಯ ಇರುವವರಿಗೆ ರಕ್ತ ನೀಡುವುದರಿಂದ ಮತ್ತೊಬ್ಬರ ಜೀವ ಉಳಿಸಿದ ತೃಪ್ತಿ ಸಿಗುತ್ತದೆ' ಎಂದು ಹೇಳಿದರು. ನೀವೆಲ್ಲರೂ ಒಂದು ರೀತಿಯಲ್ಲಿ ರೋಲ್‌ಮಾಡೆಲ್‌ಗಳಾಗಿದ್ದೀರಿ. ವಿದ್ಯಾರ್ಥಿಗಳು 18 ವರ್ಷ ಪೂರೈಸಿದ ಬಳಿಕ ರಕ್ತದಾನ ಮಾಡಬೇಕು. ಕುಟುಂಬದವರು ಹಾಗೂ ಸ್ನೇಹಿತರಿಗೂ ರಕ್ತದಾನ ಮಾಡುವಂತೆ ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು.

ಅಪಘಾತಕ್ಕೆ ಒಳಗಾದವರು ಹಾಗೂ ರಕ್ತಹೀನತೆಯಿಂದ ಬಳಲುತ್ತಿರುವವರಿಗೆ ರಕ್ತದ ಅವಶ್ಯಕತೆ ಹೆಚ್ಚಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ರಕ್ತದಾನ ಮಾಡಲು ಹಿಂಜರಿಯಬಾರದು. ಎಷ್ಟೇ ಬಾರಿ ರಕ್ತ ನೀಡಿದರೂ ಹೊಸ ರಕ್ತ ಉತ್ಪಾದನೆ ಆಗುತ್ತಲೇ ಇರುತ್ತದೆ ಎಂದರು. ಇದೇ ಸಂದರ್ಭದಲ್ಲಿ 30ಕ್ಕೂ ಹೆಚ್ಚು ಬಾರಿ ಸ್ವಯಂಪ್ರೇರಿತ ರಕ್ತದಾನ ಮಾಡಿದ 20ಕ್ಕೂ ಹೆಚ್ಚು ರಕ್ತದಾನಿಗಳಿಗೆ ಸನ್ಮಾನಿಸಲಾಯಿತು.

ಇದೇ ವೇಳೆ ಹಾಜರಿದ್ದ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮದ್, ಕೆಆರ್ ಆಸ್ಪತ್ರೆ ರಕ್ತನಿಧಿ ವೈದ್ಯಾಧಿಕಾರಿ ಡಾ.ಮಂಜುನಾಥ್, ರೋಟರಿ ಸಂಸ್ಥೆಯ ಅಧ್ಯಕ್ಷ ಅರುಣ್ ಬೆಳವಾಡಿ, ಆಶಾಕಿರಣ ಚಾರಿಟೆಬಲ್ ಟ್ರಸ್ಟ್‌ನ ಅಧ್ಯಕ್ಷ ಕೆ.ಎಸ್.ಗುರುರಾಜ್, ಲಯನ್ಸ್ ಶ್ರೀನಿವಾಸ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕರಾದ ಗಿರೀಶ್, ಮುತ್ತಣ್ಣ, ರಶ್ಮಿ, ಮಮತಾ, ಸುರೇಶ್ ಇದ್ದರು.

ಖ್ಯಾತ ಫುಟ್ಬಾಲ್ ಆಟಗಾರ ನರಸಿಂಹಯ್ಯರಿಗೆ ಶ್ರದ್ಧಾಂಜಲಿ




ಮೈಸೂರು, ಅ.1–ಮೈಸೂರಿನ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯಲ್ಲಿ ಇತ್ತೀಚೆಗೆ ನಿಧನರಾದ ಅಂತರರಾಷ್ಟ್ರೀಯ ಫುಟ್ಬಾಲ್ ಮಾಜಿ ಆಟಗಾರರಾಗಿದ್ದ ಮೈಸೂರಿನ ದೊಡ್ಡ ಒಕ್ಕಲಗೇರಿ ನಿವಾಸಿ ಪಿ.ನರಸಿಂಹಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಶ್ರದ್ಧಾಂಜಲಿ ಅರ್ಪಿಸಲಾಯಿತು.

ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, 70ರ ದಶಕದಲ್ಲಿ ಫುಟ್ಬಾಲ್ ಆಟಕ್ಕೆ ಮೈಸೂರು ಹೆಸರಾಗಿತ್ತು ನರಸಿಂಹಯ್ಯ ಆಟ ನೋಡಲು ಮೈಸೂರಿನಲ್ಲಿ ಫುಟ್ಬಾಲ್ ಪ್ರಿಯರು ಕಿಕ್ಕಿರಿದು ಸೇರುತ್ತಿದ್ದರು. ಇಂತಹ ಆಟಗಾರನಿಗೆ ಶ್ರದ್ಧಾಂಜಲಿ ಸಲ್ಲಿಸುವುದು ನಮ್ಮ ಕರ್ತವ್ಯ. ಅವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಯುವಂತಹ ಕೆಲಸವಾಗಬೇಕು. ಹಾಗಾಗಿ, ಅವರ ಹೆಸರು ಮೈಸೂರು ನಗರಪಾಲಿಕೆಯು ಯಾವುದಾದರೂ ರಸ್ತೆ, ವೃತ್ತ, ಕ್ರೀಡಾಂಗಣಕ್ಕೆ ನಾಮಕರಣ ಮಾಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮೈಸೂರಿನ ಫುಟ್ಬಾಲ್ ಆಟಗಾರರಾದ ವಕೀಲ ಎಂ.ಬಿ.ಬಾಲಾಜಿ ಸಿಂಗ್, ಜಾ.ದಳ ಮುಖಂಡ ಕೆ.ಉಮಾಶಂಕರ್, ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್ ಕಾರ್ಯದರ್ಶಿ ಎಂ.ಭೈರಪ್ಪ, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುಂದರ್ ಕುಮಾರ್, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, 'ನಮ್ಮೂರು ನಮ್ಮೋರು' ಟ್ರಸ್ಟ್ ಅಧ್ಯಕ್ಷ ಬಿ.ಎಚ್. ಸತೀಶ್‌ಗೌಡ, ಎಂ.ಚಿಕ್ಕವೆಂಕಟು, ಶಿವಕುಮಾರ್‌ಗೌಡ, ಕೇಬಲ್ ಕಿಟ್ಟಿ ಸಿ.ಸಂತೋಷ್, ಸಿ.ಡಿ.ಕುಮಾರ್, ರಾಘವ್ ಎಂ.ಗೌಡ, ಬಿ.ಕುಮಾರ್ ಫಾಲ್ಕನ್ ಮಾದೇಗೌಡ, ಎಂ.ಶಿವಪ್ರಕಾಶ್ ಉಪಸ್ಥಿತರಿದ್ದರು.

ಇಂದು ಕಾಂಗ್ರೆಸ್ ಕಚೇರಿಯಲ್ಲಿ ಗಾಂಧಿ ಜಯಂತಿ



ಮೈಸೂರು, ಅ.1–ಮೈಸೂರು ನಗರ ಕಾಂಗ್ರೆಸ್ ಕಚೇರಿಯಲ್ಲಿ ನಾಳೆ (ಸೋಮವಾರ) ಬೆಳಗ್ಗೆ 10.30ಕ್ಕೆ ಮಹಾತ್ಮ ಗಾಂಧಿ ಜಯಂತಿ ಕಾರ್ಯಕ್ರಮ ಏರ್ಪಡಿಸಿದ್ದು, ಮೈಸೂರು ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವರೂ ಆದ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ನೇತೃತ್ವವನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ವಹಿಸಿದರೆ, ಅಧ್ಯಕ್ಷತೆಯನ್ನು ಆರ್.ಮೂರ್ತಿ ವಹಿಸಲಿದ್ದಾರೆ. ಹಿನ್ನೆಲೆ ಗಾಯಕರಾದ ರಶ್ಮಿ ಚಿಕ್ಕಮಗಳೂರು ಮತ್ತು ತಂಡದಿಂದ ದೇಶಭಕ್ತಿ ಗೀತೆ, ಗಾಂಧಿ ಕನಸಿನ ಭಾರತ ಕುರಿತು ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಮಾತನಾಡಲಿದ್ದಾರೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಅ.1– 2023–24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಹೊಸ ವಿದ್ಯಾರ್ಥಿಗಳಿಗೆ (ಇದುವರೆಗೂ SSP ತಂತ್ರಾಂಶದಲ್ಲಿ ನೋಂದಣಿಯಾಗದ) ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ssp.karnataka.gov.in ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಪೋಷಕರ ವಾರ್ಷಿಕ ಆದಾಯ ಮಿತಿಯು 1ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ರೂ. 6.00 ಲಕ್ಷ ಹಾಗೂ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ 2.5 ಲಕ್ಷ ಒಳಗೊಂಡಿರಬೇಕು. ಅರ್ಜಿ ಸಲ್ಲಿಸಲು ಅ.20 ಕೊನೆಯ ದಿನ. ಮಾಹಿತಿಗಾಗಿ ದೂ.ಸಂ:0821–2520910 ಸಂಪರ್ಕಿಸಬಹುದು.

ಸಂಕಷ್ಟ ಸೂತ್ರ ಜಾರಿಗೊಳಿಸಿ; ನಮ್ಮ ಕಾವೇರಿ ಉಳಿಸಿ

ಪ್ರಧಾನಿ ಮೋದಿಗೆ ರಕ್ತದಲ್ಲಿ ಪತ್ರ ಅಭಿಯಾನ



ಮೈಸೂರು,ಅ.1(ಎಸ್‌ಬಿಡಿ)– 'ಸಂಕಷ್ಟ ಸೂತ್ರ ಜಾರಿಗೊಳಿಸಿ, ಕಾವೇರಿ ಉಳಿಸಿ' ಎಂದು ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ಕಾರ್ಯಕರ್ತರು ರಕ್ತದಲ್ಲಿ ಪ್ರಧಾನಮಂತ್ರಿಗೆ ಪತ್ರ ಕಳುಹಿಸಿದರು.

ಕಾವೇರಿ ಉಳಿವಿಗಾಗಿ ಕರವೇ ಅಧ್ಯಕ್ಷ ಟಿ.ಎ.ನಾರಾಯಣಗೌಡರ ನಿರ್ದೇಶನದಂತೆ ಭಾನುವಾರ ರಾಜ್ಯಾದ್ಯಂತ ರಕ್ತದಲ್ಲಿ ಪತ್ರ ಬರೆದು ಪ್ರಧಾನಿಗೆ ಕಳುಹಿಸುವ ಅಭಿಯಾನ ನಡೆಸಲಾಗಿದ್ದು, ಮೈಸೂರಿನಲ್ಲೂ 20ಕ್ಕೂ ಹೆಚ್ಚು ಕಾರ್ಯಕರ್ತರು ರಕ್ತದಲ್ಲಿ 'ಸಂಕಷ್ಟ ಸೂತ್ರ ಜಾರಿಗೊಳಿಸಿ, ಕಾವೇರಿ ಉಳಿಸಿ' ಎಂದು ಪತ್ರದಲ್ಲಿ ಬರೆದು ಅಶೋಕ ರಸ್ತೆಯ ಪ್ರಧಾನ ಅಂಚೆ ಕಚೇರಿ ಬಳಿ, ಪೋಸ್ಟ್ ಮಾಡಿದರು.

ಕಾವೇರಿ ನದಿ ನೀರು ವಿಚಾರದಲ್ಲಿ ಕರ್ನಾಟಕಕ್ಕೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ನಮ್ಮ ಜನರಿಗೆ ಕುಡಿಯಲು ನೀರಿಲ್ಲದಿದ್ದರೂ, ತಮಿಳುನಾಡಿಗೆ ಬೆಳೆಗಾಗಿ ನೀರು ಹರಿಸಲಾಗುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸೂಕ್ತ ಕ್ರಮದ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಂಕಷ್ಟ ಸೂತ್ರ ಜಾರಿಗೊಳಿಸಬೇಕು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಧ್ಯ ಪ್ರವೇಶಿಸಿ, ಎರಡು ರಾಜ್ಯಗಳ ನಡುವಿನ ಸಮಸ್ಯೆಯನ್ನು ಪರಿಹರಿಸಬೇಕು ಎಂದು ಇದೇ ವೇಳೆ ಆಗ್ರಹಿಸಿದರು. ವೇದಿಕೆಯ ಲೋಕೇಶ್ ಕುಮಾರ್, ಹೇಮಂತ್‌ಗೌಡ, ಶ್ರೀನಿವಾಸ್, ರಫೀಕ್, ಅರುಣ್, ಸದಾ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಿಇಎಂಎಲ್‌ನಲ್ಲಿ ಯಾಂತ್ರೀಕೃತ ಸ್ವಚ್ಛತಾ ಕಾರ್ಯಕ್ರಮ



ಮೈಸೂರು, ಅ.1(ಬಿಎಲ್‌ಯು)– ಮೈಸೂರಿನ ಬಿಇಎಂಎಲ್ ಕಾರ್ಖಾನೆಯಲ್ಲಿ ಭಾನುವಾರ ಸ್ವಚ್ಛತಾ ಹೀ ಸೇವಾ ಅಭಿಯಾನದ ಅಂಗವಾಗಿ ಯಾಂತ್ರೀಕೃತ ಸ್ವಚ್ಛತೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬಿಎಂಎಲ್ ಸಂಕೀರ್ಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಕೇಂದ್ರ ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಉದ್ಘಾಟಿಸಿದರು.

ಲೋಡರ್ ಹಾಗೂ ಸ್ಕ್ರಬ್ಬಿಂಗ್ ಉಪಕರಣಗಳಿಂದ ಎಲೆಕ್ಟ್ರಾನಿಕ್ ವಸ್ತು ಹಾಗೂ ಇತರೆ ತ್ಯಾಜ್ಯಗಳನ್ನು ತ್ವರಿತವಾಗಿ ಹೇಗೆ ತೆರವು ಮಾಡುವ ವಿಧಾನದ ಬಗ್ಗೆ ಗಿರಿಧರ್ ಅರಮನೆ ಅವರಿಗೆ ಬಿಇಎಂಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಈ ವೇಳೆ ಮಾತನಾಡಿದ ಗಿರಿಧರ್ ಅರಮನೆ, ವ್ಯಾಪಕ ಸ್ವಚ್ಛತಾ ಕಾರ್ಯ ಕೈಗೊಳ್ಳಲು ಜಾಗೃತಿ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳುವಂತೆ ಬಿಇಎಂಎಲ್ ನೌಕರರಿಗೆ ಸಲಹೆ ನೀಡಿದರು.

ದೇಶೀಯವಾಗಿ ಉತ್ಪಾದನೆ ಮಾಡುವ ಆತ್ಮ ನಿರ್ಭರ್ ಮಹತ್ವವನ್ನು ತಿಳಿಸಿದ ಅವರು, ರಕ್ಷಣೆ, ಗಣಿಗಾರಿಕೆ ಮತ್ತು ನಿರ್ಮಾಣ ಕ್ಷೇತ್ರಗಳ ಬೇಡಿಕೆಗೆ ತಕ್ಕಂತೆ ಬಿಇಎಂಎಲ್ ವಾಹನ ಮತ್ತು ಯಂತ್ರಗಳನ್ನು ಪೂರೈಸುತ್ತಿರುವ ತಾಂತ್ರಿಕ ಪ್ರಗತಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಬಿಇಎಂಎಲ್ ಅಧ್ಯಕ್ಷರೂ ಆದ ವ್ಯವಸ್ಥಾಪಕ ನಿರ್ದೇಶಕ ಶಾಂತನು ರಾಯ್, ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಬಿಇಎಂಎಲ್ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಕ್ಷಣಾ ವಿಭಾಗದ ನಿರ್ದೇಶಕ ಎ.ಕೆ.ಶ್ರೀವತ್ಸ, ಹಣಕಾಸು ವಿಭಾಗದ ನಿರ್ದೇಶಕ ಅನಿಲ್ ಜರಾತ್ ಇನ್ನಿತರರು ಉಪಸ್ಥಿತರಿದ್ದರು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 98.00 ಅಡಿ	ಇಂದಿನ ಮಟ್ಟ 2,273.85 ಅಡಿ	ಇಂದಿನ ಮಟ್ಟ 2,854.46 ಅಡಿ
ಹಿಂದಿನ ವರ್ಷದ ಮಟ್ಟ 123.56 ಅಡಿ	ಹಿಂದಿನ ವರ್ಷದ ಮಟ್ಟ 2,282.58 ಅಡಿ	ಹಿಂದಿನ ವರ್ಷದ ಮಟ್ಟ 2,855.98 ಅಡಿ
ನಿನ್ನೆಯ ಮಟ್ಟ 97.78 ಅಡಿ	ನಿನ್ನೆಯ ಮಟ್ಟ 2,273.29 ಅಡಿ	ನಿನ್ನೆಯ ಮಟ್ಟ 2,854.02 ಅಡಿ
ಇಂದಿನ ಒಳಹರಿವು 4,156 ಕ್ಯೂಸೆಕ್	ಇಂದಿನ ಒಳಹರಿವು 4,565 ಕ್ಯೂಸೆಕ್	ಇಂದಿನ ಒಳಹರಿವು 3,156 ಕ್ಯೂಸೆಕ್
ಇಂದಿನ ಹೊರಹರಿವು 2,179 ಕ್ಯೂಸೆಕ್	ಇಂದಿನ ಹೊರಹರಿವು 1,000 ಕ್ಯೂಸೆಕ್	ಇಂದಿನ ಹೊರಹರಿವು 1,400 ಕ್ಯೂಸೆಕ್

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಅ.1–ಅ.3ರಂದು ಬೆಳಗ್ಗೆ 10ರಿಂದ ಸಂಜೆ 5.30 ರವರೆಗೆ ರಾಮಾನುಜ ರಸ್ತೆ 1ರಿಂದ 9ನೇ ಕ್ರಾಸ್‌ವರೆಗೆ, ಹೊಸ ಬಂಡಿಕೇರಿ, ಜೆಎಸ್‌ಎಸ್ ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ತ್ಯಾಗರಾಜ ರಸ್ತೆ, ಚಾಮುಂಡಿಬೆಟ್ಟ ಮತ್ತು ಪಾದ, ಗುಂಡೂರಾವ್‌ನಗರ, ದತ್ತನಗರ, ಮುನೇಶ್ವರನಗರ, ಗೌರಿಶಂಕರನಗರ, ನಂಜನಗೂಡು ಟೋಲ್‌ಗೇಟ್, ತಾವರೆಕೆರೆ, ಜಾಕಿ ಕ್ವಾಟ್ರರ್ಸ್, ರೇಸ್‌ಕೋರ್ಸ್ ಹಿಂಭಾಗ, ಸಬರ್ಬನ್ ಬಸ್‌ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯ ಸುತ್ತಮುತ್ತ, ಸರ್ಕಾರಿ ಅತಿಥಿಗೃಹ, ಸುತ್ತಮುತ್ತ ತಾಲೂಕು ಕಚೇರಿ, ಡಿ.ದೇವರಾಜ ಅರಸು ರಸ್ತೆ, ಬಿ.ಎನ್.ರಸ್ತೆ, ಚಾಮುಂಡಿಬೆಟ್ಟ, ಸಿದ್ಧಾರ್ಥ ನಗರ, ಆಲನಹಳ್ಳಿ ಸುತ್ತಮುತ್ತ, ಗಿರಿದರ್ಶಿನಿ ಬಡಾವಣೆ, ಅರಮನೆ ಸುತ್ತಮುತ್ತ, ಶ್ರೀ ಹರ್ಷ ರಸ್ತೆ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಸುತ್ತಮುತ್ತ, ಧನ್ವಂತರಿ ರಸ್ತೆ ಹಾಗೂ ಶಿವರಾಂಪೇಟೆ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಉದಯಗಿರಿ ಠಾಣಾ ವ್ಯಾಪ್ತಿಯಲ್ಲಿ ನಾಲ್ವರು ನಾಪತ್ತೆ

ಮೈಸೂರು, ಅ.1–ಮೈಸೂರಿನ ಉದಯಗಿರಿ ಠಾಣಾ ವ್ಯಾಪ್ತಿಯಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ನಾಲ್ವರು ಕಾಣೆಯಾಗಿರುವ ಬಗ್ಗೆ ವರದಿಯಾಗಿದೆ.



ಅರ್ಬಾಜ್ ಖಾನ್

ಆ. 27ರಂದು ಬೆಳಗ್ಗೆ 8 ಗಂಟೆ ಸಮಯದಲ್ಲಿ ಮನೆಯಿಂದ ಹೊರಗೆ ಹೋದವನು ಇದುವರೆಗೂ ವಾಪಸ್ ಮನೆಗೆ ಬಂದಿಲ್ಲ ಎಂದು ಆತನ ತಂದೆ ದೂರಿನಲ್ಲಿ ತಿಳಿಸಿದ್ದಾರೆ.

ಲಿಂಗಮ್ಮ



ಸೆ. 17 ರಂದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವರು ವಾಪಸ್ಸು ಮನೆಗೆ ಬಂದಿಲ್ಲ ಎಂದು ದೂರು ದಾಖಲಾಗಿದೆ. ಸುಮಾರು 5.2 ಅಡಿ ಎತ್ತರ, ಚೆಕ್ಸ್ ಸೀರೆ, ಕೆಂಪು ಬಣ್ಣದ ರವಿಕೆ ಧರಿಸಿರುತ್ತಾರೆ. ದುಂಡುಮುಖ ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ, ಬಿಳಿ ತಲೆಕೂದಲು, ಕನ್ನಡ ಮಾತನಾಡುತ್ತಾರೆ.



ಸವಿತಾ

ಆ. 28 ರಂದು ಬೆಳಗ್ಗೆ 10.30ರ ಸಮಯದಲ್ಲಿ ಮನೆಯಿಂದ ಹೊರ ಹೋದವರು ವಾಪಸ್ಸು ಮನೆಗೆ ಬಂದಿಲ್ಲ ಎಂದು ಆಕೆಯ ತಾಯಿ ಲಕ್ಷ್ಮಿ ದೂರು ದಾಖಲಿಸಿದ್ದಾರೆ. ಕೆಂಪು ಬಣ್ಣದ ಚೂಡಿದಾರ್ ಧರಿಸಿರುತ್ತಾರೆ. ಕೋಲುಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಬಣ್ಣ ಹೊಂದಿದ್ದು, ಮಾತು ಬರುವುದಿಲ್ಲ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಉದಯಗಿರಿ ಪೊಲೀಸ್ ಠಾಣೆಗೆ ತಿಳಿಸಬೇಕಾಗಿ ಕೋರಲಾಗಿದೆ.

ಟಿ.ಪಿ.ಅನುಷಾ



ಸರಗೂರು ತಾಲೂಕಿನ ತೆರಣಿಮುಂಟಿ ಗ್ರಾಮದ ನಿವಾಸಿ ಪ್ರಭುಸ್ವಾಮಿ ಗೌರಮ್ಮ ಅವರ ಪುತ್ರಿ ಟಿ.ಪಿ.ಅನುಷಾ (21) ಸೆ.9ರಂದು ಬೆಳಗ್ಗೆ 6 ಗಂಟೆ ಸಮಯದಲ್ಲಿ ಮೈಸೂರಿನ ಮಹಾರಾಣಿ ಕಾಲೇಜಿಗೆ ಪರೀಕ್ಷೆಗೆ ಹೋಗಿ ಬರುತ್ತೇನೆಂದು ಹೋದವರು ಇದುವರೆಗೆ ಮನೆಗೆ ವಾಪಸ್ ಬಂದಿಲ್ಲ ಎಂದು ಸರಗೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಠಾಣೆ ದೂ. 08228–265542, 9480805064 ಅನ್ನು ಸಂಪರ್ಕಿಸಲು ಕೋರಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.10.2023 ಸೋಮವಾರ, ಮಳೆ ನಕ್ಷತ್ರ: ಹಸ್ತ, 28.09.2023ರಿಂದ 10.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಘ–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ–ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆಯಿಂದ.

■ **ಜಿಲ್ಲಾಡಳಿತ, ಮೈಸೂರು ಮಹಾನಗರಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ:** ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಗಾಂಧಿ ವೃತ್ತದಲ್ಲಿ ಗಾಂಧೀಜಿ ಪ್ರತಿಮೆಗೆ ಪುಷ್ಪಾರ್ಚನೆ, ಪುರಭವನದಲ್ಲಿ ಪ್ರಾರ್ಥನಾ ಸಭೆ, ಬೆಳಗ್ಗೆ 8 ಗಂಟೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಜ್ಞಾನದೀಪ ಪ್ರಥಮ ದರ್ಜೆ ಕಾಲೇಜು:** 155ನೇ ಗಾಂಧಿ ಜಯಂತಿ ಪ್ರಯುಕ್ತ ವಿಶ್ವ ಅಹಿಂಸಾ ದಿನಾಚರಣೆ ಮತ್ತು 'ಗಾಂಧೀಜಿ ಕನಸಿನ ಭಾರತ' ಕುರಿತು ವಿಶೇಷ ಉಪನ್ಯಾಸ, ಉದ್ಘಾಟನೆ: ಸ್ವಾತಂತ್ರ್ಯ ಹೋರಾಟಗಾರರಾದ ಡಾ. ಎಂ. ಸೋಮಶೇಖರಪ್ಪ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ವಿಶೇಷ ಉಪನ್ಯಾಸ: ತಿ.ನರಸೀಪುರ ತಾಲೂಕು ಬೈರಾಪುರ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಪ್ರಾಧ್ಯಾಪಕರಾದ ಡಾ.ಇಂದಿರಾ ಬಿ.ಸಿ., ಸ್ಥಳ: ಗಾಂಧಿ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು, ಶ್ರೀ ನಟರಾಜ ಪ್ರತಿಷ್ಠಾನ:** ಗಾಂಧಿ ಜಯಂತಿ ಪ್ರಯುಕ್ತ ವಿಶ್ವ ಅಹಿಂಸಾ ದಿನಾಚರಣೆ ಮತ್ತು ಸರ್ವಧರ್ಮ ಪ್ರಾರ್ಥನೆ ಹಾಗೂ ಸ್ವಚ್ಛತಾ ಅಭಿಯಾನ, ಬೆಳಗ್ಗೆ 9ರಿಂದ, ದಿವ್ಯ ಸಾನ್ನಿಧ್ಯ: ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಮಹಾಸ್ವಾಮಿ, ಸ್ವಚ್ಛತಾ ಅಭಿಯಾನ ಉದ್ಘಾಟನೆ: ಶಾಸಕ ಶ್ರೀವತ್ಸ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ, ಸ್ಥಳ: ಹೊಸಮಠದ ಮುಂಭಾಗ, ಬೆಳಗ್ಗೆ 10.30ಕ್ಕೆ ಸಭಾ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಭಾರತೀಯ ವಾಯುಪಡೆ ಏರ್ ಕಮಾಂಡರ್ ವಿ.ರಮೇಶ್, ಅಧ್ಯಕ್ಷತೆ: ವಿಶೇಷಾಧಿಕಾರಿ ಪ್ರೊ.ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ.

■ **ಒಟಿ ಕೇರ್ ಆಸ್ಪತ್ರೆ:** ಉಚಿತ ವಾಕ್ ಮತ್ತು ಶ್ರವಣ ಶಿಬಿರ, ಅಗ್ರಹಾರ, ಬೆಳಗ್ಗೆ 11ರಿಂದ ಮಧ್ಯಾಹ್ನ 3 ಗಂಟೆ.

■ **ಶ್ರೀ ಮಾರುತಿ ಪ್ರಕಾಶನ, ನಿಡಘಟ್ಟ, ಮೈಸೂರು ಮುಕ್ತಕ ಕವಿ ಸಾಹಿತ್ಯ ಪರಿಷತ್ತು, ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ :** ಸಾಹಿತಿ ಎನ್ಕೆಚ ನಿಡಘಟ್ಟ (ಎನ್ಕೆ ಚನ್ನಪ್ಪ) ಅವರ 'ಜಾನಪದ ಹಂಗು' ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ಹಿರಿಯ ನಾಗರಿಕರಾದ ಸಿದ್ದರಾಮಯ್ಯ, ಉದ್ಘಾಟನೆ: ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದ ಅಧ್ಯಕ್ಷ ಎಂ.ಪಿ. ಪ್ರಭುಸ್ವಾಮಿ, ಕೃತಿ ಬಿಡುಗಡೆ ಹಾಗೂ ಕೃತಿ ಕುರಿತು: ಶಿಕ್ಷಣ ಇಲಾಖೆಯ ಎನ್. ರಾಮಯ್ಯ, ಸ್ಥಳ: ಹಿರಿಯರ ಹಗಲು ಯೋಗಕ್ಷೇಮ ಕೇಂದ್ರ, ನಿಮಿಷಾಂಬ ಬಡಾವಣೆ, ಕುವೆಂಪುನಗರ, ಬೆಳಗ್ಗೆ 11 ಗಂಟೆಗೆ.

■ **ಕೆ. ಸ್ಕೂಲ್ (ದಿ ಕೃಷ್ಣಮೂರ್ತಿ ವರ್ಲ್ಡ್ ಸ್ಕೂಲ್) :** ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿ: ಗುರುವೀಂದರ್ ಸಿಂಗ್, ದಿ ಕೃಷ್ಣಮೂರ್ತಿ ಸ್ಟಡಿ ಸೆಂಟರ್, ವ್ಯಾಲಿ ಸ್ಕೂಲ್, ಬೆಂಗಳೂರು, ಉದ್ಘಾಟಕರು: ಶ್ರೀಮತಿ ಗೌರಮ್ಮ, ಅಧ್ಯಕ್ಷರು: ವರುಣ ಗ್ರಾಮ ಪಂಚಾಯಿತಿ; ಗೌರವ ಅತಿಥಿಗಳು: ಎಂ. ವಿವೇಕಾನಂದ, ಬಿಇಓ, ಮೈಸೂರು ಗ್ರಾಮಾಂತರ, ಎನ್.ಎಸ್. ಮುರುಳಿ, ಕೃಷ್ಣಮೂರ್ತಿ ಸ್ಟಡಿ ಸೆಂಟರ್, ಬೆಂಗಳೂರು; ಅಧ್ಯಕ್ಷತೆ: ಪ್ರೊ. ಜಗದೀಶ್ ಪ್ರಕಾಶ್, ವಿಶ್ರಾಂತ ಕುಲಪತಿ (ಹಂಗಾಮಿ), ಬೆಂಗಳೂರು ವಿಶ್ವವಿದ್ಯಾನಿಲಯ, ಎಸ್‌ವಿಪಿ ನಗರ (ಎರಡನೇ ಪೊಲೀಸ್ ಲೇಔಟ್), ಪೂರ್ವಾಹ್ನ 11.30ಕ್ಕೆ.

■ **ಸುಯೋಗ್ ಆಸ್ಪತ್ರೆ:** ಗಾಂಧಿ ಜಯಂತಿ, ಮುಖ್ಯ ಅತಿಥಿ: ಭಾರತದಲ್ಲಿ ನೈಜಿರಿಯಾ ರಾಯಭಾರಿ ಅಹಮದ್ ಸ್ಕೂಲೆ, ಅತಿಥಿಗಳು: ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಗಾಂಧಿ ಪ್ರತಿಷ್ಠಾನದ ಡಾ.ಶಿವರಾಜಪ್ಪ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಮಧ್ಯಾಹ್ನ 12ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿಗಳ ಮಠ :** ಪಂಡಿತ್ ಶ್ರೀ ಬಾದರಾಯಣಾಚಾರ್ಯ ಅವರಿಂದ 'ಭಗವದ್ಗೀತೆ 11ನೇ ಅಧ್ಯಾಯನ'ದ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.


■ **ಶ್ರೀ ಕೃಷ್ಣ ಗಾನಸಭಾ :** ಗಾನ ವಿಶಾರದ ಬಿಡಾರಂ ಕೃಷ್ಣಪ್ಪನವರ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ಸ್ವಾಮೀಜಿ ಶ್ರೀಧರ್ ಎಂ.ಎಲ್.ರಾಜೇಅರಸ್ ಸ್ಮರಣಾರ್ಥ ಕಾರ್ಯಕ್ರಮ, ವಿದ್ವಾನ್ ಬಿ.ಕೆ. ಮನಮೋಹನ್–ಗಾಯನ, ವಿದ್ವಾನ್ ಕೇಶವ ಮೋಹನ್‌ಕುಮಾರ್–ಪಿಟೀಲು, ವಿದ್ವಾನ್ ಅನಿರುದ್ಧ ಎಸ್.ಭಟ್–ಮೃದಂಗ, ವಿದ್ವಾನ್ ಎಸ್.ಮಂಜುನಾಥ್–ಘಟಂ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಪ್ರೊ.ಜಿ.ಅಶ್ವತ್ಥನಾರಾಯಣ, 6.15 ಗೀತಾರಾಧನ, 6.35 ಮತ್ತು 6.10 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಪ್ರಸ್ತುತಿ– ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ, 7.15 ಕರುನಾಡ ಕಲ್ಪವೃಕ್ಷ: ಪ್ರಾಯೋಜಿತ ಕಾರ್ಯಕ್ರಮ ಚಿತ್ರಗೀತೆಗಳು, 9.05 ನೆನಪಿನಂಗಳ ಕನ್ನಡ ಸಾಹಿತ್ಯ ಲೋಕದ ದಿಗ್ಗಜರಾದ ತ.ಸು. ಶ್ಯಾಮರಾಯರಿಂದ ನೆನಪಿನ ಲಹರಿ ಸಂವಾದ, 10.00 ಲಯ ಸಂಭ್ರಮ: ಪರಿಕಲ್ಪನೆ ಹಾಗೂ ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ: ಶಂಕರ್ ಶ್ಯಾನುಭೋಗ್, ಬಾಂಬೆ ಸಹೋದರಿಯರು, 12.45 ನಮ್ಮ ಆರೋಗ್ಯ: ವಿಶ್ವ ಹಿರಿಯ ನಾಗರಿರ ಆರೋಗ್ಯ ರಕ್ಷಣೆ ಕುರಿತು ಮೈಸೂರಿನ ಡಾ.ಕೆ. ನಾಗೇಂದ್ರ ಪ್ರಸಾದ್ ಅವರೊಂದಿಗೆ ಮಾತುಕತೆ, 1.00 ಪ್ರಗತಿಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ, 3.00 ಕಲಾವತಿ ಅವಧೂತ್–ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, 4.45 ಹಿಂದಿ ಪಾಠ: ಶಾಂತಾ ಡಿ.ಕಿಣಿ, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು ಹೊನ್ನು" ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ. **ರಾತ್ರಿ:** 9.30 ಚೀನಾದಲ್ಲಿ ನಡೆಯುತ್ತಿರುವ 19ನೇ ಏಷ್ಯನ್ ಕ್ರೀಡಾಕೂಟದ ದಿನದಾಟದ ವರದಿ, 10.00 ನಾಟಕ "ತಬ್ಬಲಿಗಳು" ರಚನೆ– ಡಾ.ಮಿರ್ಜಾ ಬಶೀರ್, ನಿರ್ಮಾಣ–ಪ್ರಭುಸ್ವಾಮಿ ಮಳೀಮಠ.

ಮೈಸೂರಿನಲ್ಲಿ ಅ.7ರಿಂದ ಬಸವ ಜಯಂತಿ ಕಾರ್ಯಕ್ರಮ



ಮೈಸೂರು,ಅ.1(ಬಿಎಲ್‌ಯು)– ಮೈಸೂರಿನ ಕಲಾಮಂದಿರದಲ್ಲಿ ಅ.7ರಿಂದ 2 ದಿನಗಳ ಬಸವ ಜಯಂತಿ ಕಾರ್ಯಕ್ರಮ ನಡೆಯಲಿದೆ.

ಮೈಸೂರಿನ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟ ಆಯೋಜಿಸಿರುವ ಬಸವ ಜಯಂತಿ ಕಾರ್ಯಕ್ರಮವನ್ನು, ಅ.7ರಂದು ಶಾಸಕ ವಿಜಯೇಂದ್ರ ಯಡಿಯೂರಪ್ಪ ಉದ್ಘಾಟಿಸಲಿದ್ದಾರೆ.

ಮೈಸೂರಿನ ಹೊಸಮಠದ ಶ್ರೀ ಚಿದಾನಂದಸ್ವಾಮಿ, ಕುದೇರು ಮಠದ ಶ್ರೀ ಗುರುಶಾಂತ ಸ್ವಾಮಿ ಸಮ್ಮುಖದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಶರಣಪ್ಪ ವಿ.ಹಲಸೆ, ತಹಶೀಲ್ದಾರ್ ಗಿರೀಶ್, ಮಾಜಿ ಮೇಯರ್ ಸುನಂದಾ ಪಾಲನೇತ್ರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ಉಪಸ್ಥಿತರಿರುವರು. ಅ.8ರಂದು ನಡೆಯುವ ಬಸವ ಜಯಂತಿ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿಯೂ ಆದ ಅರಣ್ಯ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆ ವಹಿಸಲಿದ್ದಾರೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವ ಕಾರ್ಯಕ್ರಮದಲ್ಲಿ ಸಚಿವರು, ಶಾಸಕರು ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.



ಸ್ವಚ್ಛತಾ ಹೀ ಸೇವಾ ಅಭಿಯಾನ 3.0 ಅಡಿಯಲ್ಲಿ ಏಕ್ ತಾರೀಕ್ ಏಕ್ ಘಂಟಾ ಕಾರ್ಯಕ್ರಮದಲ್ಲಿ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ ಮೈಸೂರು ಪ್ರಾದೇಶಿಕ ಕಚೇರಿಯೂ ಭಾಗಿಯಾಗಿತ್ತು. ಚಾಮುಂಡಿಬೆಟ್ಟದಲ್ಲಿ ಭಾನುವಾರ ಬೆಳಗ್ಗೆ ಬೃಹತ್ ಸ್ವಚ್ಛತಾ ಅಭಿಯಾನವನ್ನು ಆರ್‌ಪಿಎಫ್‌ಸಿ 1 ವಿನೀತ್‌ಕುಮಾರ್ ನೇತೃತ್ವ, ಉರಗ ಸಂರಕ್ಷಕ ಸ್ನೇಹ್ ಶ್ಯಾಮ್, ಆರ್‌ಪಿಎಫ್‌ಸಿ 2 ಸುಮನ್ ಸೌರವ್, ಎಪಿಎಫ್‌ಸಿ ಮುರಳೀಧರನ್ ಉಪಸ್ಥಿತಿಯಲ್ಲಿ ಕೈಗೊಳ್ಳಲಾಗಿತ್ತು. ಇದರಲ್ಲಿ ಪ್ರಾದೇಶಿಕ ಕಚೇರಿಯ ಅಧಿಕಾರಿಗಳು, ಸಿಬ್ಬಂದಿಯಲ್ಲದೆ ರಂಗರಾವ್ ಅಂಡ್ ಸನ್ಸ್ ಸಂಸ್ಥೆಯವರು ಪಾಲ್ಗೊಂಡಿದ್ದರು.



ಇತ್ತೀಚೆಗೆ ನಿವೃತ್ತರಾದ ಮೈಸೂರು ಜಯನಗರ ಎಸ್‌ಬಿಐನ ಕ್ಯಾಷಿಯರ್ ವಿ.ಜಿ. ಶೋಭಾರಾಣಿ ಅವರನ್ನು ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಎಲ್.ಅರುಣ್ ಅಭಿನಂದಿಸಿದರು. ಈ ವೇಳೆ ಬ್ಯಾಂಕ್ ಮ್ಯಾನೇಜರ್ ಎಂ.ಎನ್.ಸುಂದರೇಶ್, ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ವೆಂಕಟೇಶ್, ವಿಕ್ರಾಂತ್ ಬದ್ರಿ, ಶಿವಣ್ಣ, ನಳಿನಿ, ಜಯರಾಂ, ಜಯಶೆಟ್ಟಿ ಇದ್ದರು.

ಸೆಪ್ಟೆಂಬರ್‌ನಲ್ಲಿ ಜಿಎಸ್‌ಟಿ ಸಂಗ್ರಹ ಶೇ.10ರಷ್ಟು ಹೆಚ್ಚಳ; 1.60 ಲಕ್ಷ ಕೋಟಿ

ನವದೆಹಲಿ: ತೆರಿಗೆ ಸುಧಾರಣೆ ಕ್ರಮಗಳ ನೆರವಿನೊಂದಿಗೆ ಸೆಪ್ಟೆಂಬರ್ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹದಲ್ಲಿ ಶೇ.10ರಷ್ಟು ಹೆಚ್ಚಳದೊಂದಿಗೆ1. 60 ಲಕ್ಷ ಕೋಟಿ ವರಮಾನ ಬಂದಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ 4ನೇ ಬಾರಿಗೆ ರೂ. 1.6 ಲಕ್ಷ ಕೋಟಿ ದಾಟಿದೆ. ಕಳೆದ ತಿಂಗಳು ಒಟ್ಟಾರೇ ರೂ. 1.62.712 ಕೋಟಿ ರೂ. ಜಿಎಸ್‌ಟಿ ಆದಾಯ ಸಂಗ್ರಹವಾಗಿದೆ. ಇದರಲ್ಲಿ ಕೇಂದ್ರ ಜಿಎಸ್‌ಟಿ ರೂ. 29.818 ಕೋಟಿ, ರಾಜ್ಯ ಜಿಎಸ್‌ಟಿ ರೂ. 37.657 ಕೋಟಿ, ಸಮಗ್ರ ಜಿಎಸ್‌ಟಿ ರೂ.83. 623 ಕೋಟಿ ಹಾಗೂ ಸೆಸ್ ರೂ. 11. 695 ಕೋಟಿ ಒಳಗೊಂಡಿದೆ. 2023ರ ಸೆಪ್ಟೆಂ ಬರ್‌ನಲ್ಲಿನ ಆದಾಯ ಕಳೆದ ವರ್ಷದ ಇದೇ ತಿಂಗಳು ಸಂಗ್ರಹವಾಗಿದ್ದ 1.47 ಲಕ್ಷ ಕೋಟಿಗಿಂತ ಶೇ.10ರಷ್ಟು ಹೆಚ್ಚಾಗಿದೆ ಎಂದು ಹಣಕಾಸು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಉದ್ಭೂರು ಗ್ರಾಮದ ವ್ಯಕ್ತಿ ನಾಪತ್ತೆ



ಜಯಪುರ,ಅ.1– ಜಯಪುರ ಹೋಬಳಿ ಉದ್ಬೂರು ಗ್ರಾಮದ ಚಿಕ್ಕ ನಾಯಕ ಎಂಬವರ ಪುತ್ರ ದೇವಣ್ಣ ಮನೆಯಿಂದ ಕೆಲಸಕ್ಕೆಂದು ಹೋದವರು, ಮರಳಿ ಮನೆಗೆ ಬಂದಿಲ್ಲ. ಅವರ ಪತ್ನಿ ಲಕ್ಷ್ಮಿ ಜಯಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೇವಣ್ಣ, 5.5 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣ, ಸಾಧಾರಣ ಶರೀರ ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಇವರ ಬಗ್ಗೆ ಮಾಹಿತಿ ಸಿಕ್ಕವರು ಜಯಪುರ ಠಾಣೆ ದೂ. ಸಂ.0821–2595781, 9740588257ಗೆ ಸಂಪರ್ಕಿಸಲು ಕೋರಲಾಗಿದೆ.

ಕಿಕ್ಕಿರಿದು ತುಂಬಿದ್ದ ಅಭಿಮಾನಿಗಳ ಹರ್ಷೋದ್ಗಾರದ ನಡುವೆ

ಘೋಸ್ಟ್ ಟ್ರೈಲರ್ ವೀಕ್ಷಿಸಿದ ನಟ ಶಿವರಾಜ್‌ಕುಮಾರ್

ಮೈಸೂರು, ಅ.1 (ಪಿಎಂ)– ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅಭಿನಯದ 'ಘೋಸ್ಟ್' ಸಿನಿಮಾದ ಟ್ರೈಲರ್ ಬಿಡುಗಡೆಯಾಗಿದ್ದು, ಭಾನುವಾರ ಮೈಸೂರಿನಲ್ಲಿ ಕಿಕ್ಕಿರಿದು ತುಂಬಿದ್ದ ಅಭಿಮಾನಿಗಳ ನಡುವೆ ಶಿವರಾಜ್‌ಕುಮಾರ್ ಟ್ರೈಲರ್ ವೀಕ್ಷಿಸಿದರು.

ಕನ್ನಡದ ಖ್ಯಾತ ನಿರ್ಮಾಣ ಸಂಸ್ಥೆ 'ಸಂದೇಶ್ ಪ್ರೊಡಕ್ಷನ್ಸ್'ನ ಬ್ಯಾನರ್ ಅಡಿಯಲ್ಲಿ ಸಂದೇಶ್ ಎನ್. ನಿರ್ಮಿಸಿರುವ ಈ ಸಿನಿಮಾದ ಟ್ರೈಲರ್ ಅನ್ನು ಮೈಸೂರಿನ ಮಾಲ್ ಆಫ್ ಮೈಸೂರ್‌ನ ಐನಾಕ್ಸ್ ಸ್ಕ್ರೀನ್‌ನಲ್ಲಿ ಶಿವರಾಜ್‌ಕುಮಾರ್, ತಮ್ಮ ಅಭಿಮಾನಿಗಳೊಂದಿಗೆ ವೀಕ್ಷಿಸಿದರು.

ತೆರೆ ಮೇಲೆ ಟ್ರೈಲರ್ ಪ್ರಸಾರಗೊಳ್ಳುತ್ತಿದ್ದಂತೆ ಶಿಳ್ಳೆ, ಚಪ್ಪಾಳೆ, ಹರ್ಷೋದ್ಗಾರದೊಂದಿಗೆ ಸಂಭ್ರಮಿಸಿದ ಅಭಿಮಾನಿಗಳು, ಶಿವಣ್ಣ... ಶಿವಣ್ಣ... ಎಂದು ಹರ್ಷೋದ್ಗಾರದ ಮೂಲಕ ಅಭಿಮಾನದ ಹೊಳೆ ಹರಿಸಿದರು. 'ಸಾಮ್ರಾಜ್ಯಗಳನ್ನು ಕಟ್ಟಿದವರ್ನ ಇತಿಹಾಸ ಎಷ್ಟೋ ಬಾರಿ ಮರೆತಿರಬಹುದು, ಆದರೆ ಧ್ವಂಸ ಮಾಡೋ ನನ್ನಂತವನನ್ನು ಎಂದಿಗೂ ಮರೆತಿಲ್ಲ...' ಎಂಬ ಶಿವಣ್ಣ ಸಂಭಾಷಣೆಗೆ ಪ್ರೇಕ್ಷಕರು ಹುಚ್ಚೆದ್ದು ಕುಣಿದು ಕುಪ್ಪಳಿಸಿದರು. ಟ್ರೈಲರ್ ಮುಕ್ತಾಯಗೊಳ್ಳುತ್ತಿದ್ದಂತೆ ಶಿವರಾಜ್‌ಕುಮಾರ್ ಅವರನ್ನು ಸುತ್ತುವರೆದ ಅಭಿಮಾನಿಗಳು ಸೆಲ್ಫಿಗಳ ಮೊರೆ ಹೋದರು. ತಮ್ಮ ನೆಚ್ಚಿನ ನಾಯಕನತ್ತ ಮುಗಿಬಿದ್ದು ಅಭಿಮಾನಿಗಳು ಸಂಭ್ರಮಿಸಿದರು.

ಬಳಿಕ ಇಲ್ಲಿನ ಹೊರಾವರಣದಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಶಿವರಾಜ್‌ಕುಮಾರ್, ಗಾಂಧಿ ಜಯಂತಿ ಹಿಂದಿನ ದಿನ ಟ್ರೈಲರ್ ಬಿಡುಗಡೆ ಮಾಡಬೇಕೆಂದು ನಿಗದಿ ಮಾಡಿದ್ದೆವು. ಅಂತೆಯೇ ಇಂದು ಬಿಡುಗಡೆಯಾಗಿದೆ. ಅಭಿಮಾನಿಗಳು ಅಭೂತಪೂರ್ವ ಬೆಂಬಲ ನೀಡಿದ್ದು, ಅವರಿಗೆ ಎಂದಿಗೂ ಚಿರಋಣಿಯಾಗಿರುತ್ತೇನೆ ಎಂದರು.





ಮೈಸೂರಿನ ಮಾಲ್ ಆಫ್ ಮೈಸೂರ್‌ನ ಐನಾಕ್ಸ್ ಪರದೆಯಲ್ಲಿ ತಮ್ಮ ಅಭಿನಯದ 'ಘೋಸ್ಟ್' ಸಿನಿಮಾದ ಟ್ರೈಲರ್ ವೀಕ್ಷಿಸಿದ ನಟ ಶಿವರಾಜ್‌ಕುಮಾರ್, ಬಳಿಕ ಇಲ್ಲಿನ ಹೊರಾವರಣದಲ್ಲಿ ಸಿನಿಮಾದ ಬಗ್ಗೆ ಮಾಧ್ಯಮದವರಿಗೆ ಮಾಹಿತಿ ನೀಡಿದರು. ಚಿತ್ರ ನಿರ್ದೇಶಕ ಶ್ರೀನಿ, ನಿರ್ಮಾಪಕ ಸಂದೇಶ್ ಎನ್. ಇನ್ನಿತರರಿದ್ದಾರೆ.

ಹಲವು ಭಾಷೆಗಳಲ್ಲಿ ಈ ಸಿನಿಮಾ ತೆರೆ ಕಾಣುತ್ತಿದೆ. ಕಲೆಗೆ ಭಾಷೆಯಿಲ್ಲ. ಬೇರೆ ಭಾಷೆಗಳಲ್ಲಿಯೂ ಸಿನಿಮಾ ಬಿಡುಗಡೆಗೊಳ್ಳುವಂತಹ ಗೌರವ ಈ ಚಿತ್ರಕ್ಕೆ ಸಿಕ್ಕಿರುವುದು ಖುಷಿಯಾಗಿದೆ. ನಿರ್ದೇಶಕ ಶ್ರೀನಿಯವರು ವಿಭಿನ್ನ ರೀತಿಯಲ್ಲಿ ಒಂದು ಒಳ್ಳೆಯ ಚಿತ್ರ ಮಾಡಿದ್ದಾರೆ. ಇಡೀ ತಂಡ ಕಷ್ಟಪಟ್ಟು–ಇಷ್ಟಪಟ್ಟು ಈ ಸಿನಿಮಾ ಮಾಡಿದೆ. ಸಿನಿಮಾವು 2 ಗಂಟೆ 6 ನಿಮಿಷ ಅವಧಿ ಇದೆ. ಸಿನಿಮಾ ಪ್ರೇಕ್ಷಕರ ಮನ ಗೆಲ್ಲುವ ವಿಶ್ವಾಸವಿದೆ. ನೋಡಿ ಆಶೀರ್ವದಿಸಬೇಕೆಂದು ಕೋರಿದರು.

ಅಭಿಮಾನಿಗಳ ಜೊತೆಗೆ ಸಿನಿಮಾ ನೋಡಲು ನನಗೆ ಹೆಚ್ಚು ಖುಷಿಯಾಗುತ್ತದೆ. ಏಕೆಂದರೆ ಆಗ ನಮ್ಮ ತಪ್ಪು ಏನೆಂದು ನಮಗೆ ಮನವರಿಕೆ ಯಾಗಲಿದೆ. ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸಿಕೊಳ್ಳಲು ಅವಕಾಶ ದೊರೆಯುತ್ತದೆ. ಸಿನಿಮಾದ ಟ್ರೈಲರ್ ನೋಡಿದ ಅಭಿಮಾನಿಗಳಲ್ಲಿ ಮಂದಹಾಸ ಕಾಣುತ್ತಿತ್ತು. ಹಾಗಾಗಿ ಈ ಸಿನಿಮಾ ಪ್ರೇಕ್ಷಕರ ಮನ ಗೆಲ್ಲುವ ವಿಶ್ವಾಸವಿದೆ. ತಾಂತ್ರಿಕವಾಗಿ ಅತ್ಯಂತ ಮೌಲ್ಯಯುತವಾದ ಸಿನಿಮಾ ಇದಾಗಿದೆ ಎಂದು ಶಿವರಾಜ್‌ಕುಮಾರ್ ತಿಳಿಸಿದರು.

ಸಿನಿಮಾದ ನಿರ್ದೇಶಕ ಶ್ರೀನಿ ಮಾತನಾಡಿ, ಕನ್ನಡ ಮಾತ್ರವಲ್ಲದೇ, ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ ಈ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಅ.19ರಂದು ಸಿನಿಮಾ ದೇಶಾದ್ಯಂತ ಬಿಡುಗಡೆಗೊಳ್ಳಲಿದೆ. ಅಭಿಮಾನಿಗಳು ನಮ್ಮ ಈ ಸಿನಿಮಾಗೆ ಬೆಂಬಲ ನೀಡುವ ಮೂಲಕ ತಮ್ಮ ಪ್ರೀತಿ ವಿಶ್ವಾಸ ನೀಡಬೇಕೆಂದು ಕೋರಿದರು.

ಘೋಸ್ಟ್ ಚಿತ್ರದ ನಿರ್ಮಾಪಕ ಸಂದೇಶ್ ಎನ್. ಮಾತನಾಡಿ, ಸಂದೇಶ್ ಪ್ರೊಡಕ್ಷನ್ಸ್‌ನಲ್ಲಿ ಶಿವಣ್ಣನವರ ಮೂರನೇ ಸಿನಿಮಾ ಇದಾಗಿದೆ. 'ಅಸುರ' ಮತ್ತು 'ಚಂದ್ರೋದಯ' ಸಿನಿಮಾಗಳನ್ನು ನಮ್ಮ ತಂದೆ ಸಂದೇಶ್ ನಾಗರಾಜ್ ನಿರ್ಮಿಸಿದ್ದಾರೆ. ಈ ಎರಡೂ ಬ್ಲಾಕ್ ಬಸ್ಟರ್ ಸಿನಿಮಾಗಳು. ಆ ಸಿನಿಮಾಗಳಿಗೆ ಪ್ರೇಕ್ಷಕ ಪ್ರಭುಗಳು ಅಭೂತಪೂರ್ವ ಬೆಂಬಲ ನೀಡಿ, ಆಶೀರ್ವಾದ ಮಾಡಿದ್ದರು. ಅಂತೆಯೇ 'ಘೋಸ್ಟ್' ಚಿತ್ರಕ್ಕೂ ಅದೇ ರೀತಿಯ ಮನ್ನಣೆ ದೊರೆಯುವ ಆಶಾಭಾವ ಹೊಂದಿದ್ದೇನೆ. ಈ ಸಿನಿಮಾದ ಟ್ರೈಲರ್, ಟೀಸರ್‌ಗೆ ನೀಡಿದ ಯಶಸ್ಸನ್ನು ಸಿನಿಮಾಗೂ ನೀಡಬೇಕೆಂದು ಪ್ರೇಕ್ಷಕರಲ್ಲಿ ಮನವಿ ಮಾಡಿದರು.

ಶಿವಣ್ಣನವರ ಬಗ್ಗೆ ಹೇಳಬೇಕೆಂದರೆ ಇಷ್ಟಪಟ್ಟು–ಕಷ್ಟಪಟ್ಟು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಪ್ರಾರಂಭದಿಂದಲೂ ಚಿತ್ರೀಕರಣದಲ್ಲಿ ಕ್ರಿಯಾ ಶೀಲವಾಗಿ ತೊಡಗಿಸಿಕೊಂಡರು. ನಿರ್ದೇಶಕ ಶ್ರೀನಿ ಅವರದ್ದು ಯುವ ತಂಡವಾಗಿದ್ದು, ಹೆಚ್ಚು ಶ್ರಮ ವಹಿಸಿದೆ. ಪ್ರೇಕ್ಷಕರು ಚಿತ್ರಮಂದಿರಕ್ಕೆ ಬಂದು ಸಿನಿಮಾ ನೋಡಿ ಪ್ರೋತ್ಸಾಹಿಸಬೇಕೆಂದು ಕೋರಿದರು. ಸಿನಿಮಾದ ಛಾಯಾಗ್ರಾಹಕ ಮಹೇಂದ್ರ ಸಿಂಹ, ಸಂದೇಶ್ ಎನ್. ಅವರ ಸಹೋದರ ಎನ್.ಮಂಜೇಶ್ ಮತ್ತಿತರರು ಹಾಜರಿದ್ದರು.

ಮೈಸೂರು ಮಹಾನಗರಪಾಲಿಕೆಯಿಂದ ಸ್ವಚ್ಛತಾ ಹಿ ಸೇವಾ ಯಶಸ್ವಿ ಅಭಿಯಾನ

● 65 ವಾರ್ಡ್‌ಗಳಿಂದ ಹೆಚ್ಚುವರಿ 30 ಟನ್ ಕಸ ಸಂಗ್ರಹ ● ಪ್ರವಾಸಿ ತಾಣ, ಪ್ರಮುಖ ವೃತ್ತ, ರಸ್ತೆಗಳಲ್ಲಿ ಸ್ವಚ್ಛತೆ

ಮೈಸೂರು,ಅ.1(ಎಂಟಿವೈ)–ದೇಶದಾದ್ಯಂತ ನಡೆದ 'ಸ್ವಚ್ಛತಾ ಹಿ ಸೇವಾ' ಅಭಿಯಾನದ ಅಂಗವಾಗಿ ಮೈಸೂರು ನಗರಪಾಲಿಕೆ ವತಿಯಿಂದ ಎಲ್ಲಾ 65 ವಾರ್ಡ್‌ಗಳಲ್ಲಿ ನಡೆಸಿದ ಸ್ವಚ್ಛತಾ ಅಭಿಯಾನದಲ್ಲಿ 30 ಟನ್ ಹೆಚ್ಚುವರಿ ತ್ಯಾಜ್ಯ ಸಂಗ್ರಹಿಸಲಾಗಿದೆ.

ಮಹಾನಗರಪಾಲಿಕೆ ವಿವಿಧ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಭಾನುವಾರ ನಡೆದ ಅಭಿಯಾನದಡಿ ಪಾಲಿಕೆಯ ವಾರ್ಡ್‌ವೊಂದರಲ್ಲಿ ತಲಾ ಎರಡು ಕಾರ್ಯಕ್ರಮದಂತೆ 65 ವಾರ್ಡ್‌ಗಳಲ್ಲಿ 135 ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಂಡು, ಒಟ್ಟು 580 ಟನ್ ತ್ಯಾಜ್ಯ ಸಂಗ್ರಹಿಸಲಾಯಿತು. ಸಾಮಾನ್ಯ ದಿನಗಳಲ್ಲಿ ದಿನಕ್ಕೆ 550 ಟನ್ ತ್ಯಾಜ್ಯ ಸಂಗ್ರಹವಾಗುತ್ತಿತ್ತು. ಇಂದು ಹೆಚ್ಚುವರಿಯಾಗಿ 30 ಟನ್ ಕಸ ಸಂಗ್ರಹಿಸಲಾಗಿದೆ.

ಮೈಸೂರಿನ ಪುರಭವನದ ಆವರಣದಲ್ಲಿ ಭಾನುವಾರ ಬೆಳಗ್ಗೆ ಸ್ವಚ್ಛತಾ ಅಭಿಯಾನಕ್ಕೆ ಮೇಯರ್ ಶಿವಕುಮಾರ್ ಹಾಗೂ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಚಾಲನೆ ನೀಡಿದರು.



ದಸರಾ ಉತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪ್ರತೀ ವರ್ಷದಂತೆ ವಿಶೇಷ ಸ್ವಚ್ಛತೆ ಒಳಗೊಂಡಂತೆ ಇಂದು ನಡೆಸಿದ ಅಭಿಯಾನದಲ್ಲಿ 65 ಜೆಸಿಬಿ, 8 ಬುಲ್‌ಡೋಜರ್, 27 ಟಿಪ್ಪರ್, 15 ಟ್ರಾಕ್ಟರ್ ಹಾಗೂ ಎಲ್ಲಾ ವಾರ್ಡ್‌ಗಳಲ್ಲಿ ದೈನಂದಿನ ಸ್ವಚ್ಛತೆಗೆ ಬಳಸುವ ವಾಹನ ಮತ್ತು ಪೌರಕಾರ್ಮಿಕರನ್ನು ಬಳಸಿಕೊಳ್ಳಲಾಯಿತು. ಪ್ರತಿ ವಾರ್ಡ್‌ನಲ್ಲಿ ಆಯ್ದ ಎರಡು ಸ್ಥಳದಲ್ಲಿ ಕಾರ್ಯ ಕ್ರಮ ಆಯೋಜಿಸಿ, ಕೆಲ ಸಂಘ–ಸಂಸ್ಥೆ ಸದಸ್ಯರ ಸಹಕಾರ ಪಡೆಯಲಾಯಿತು.


ದಸರಾ ಸಮೀಪಿಸುತ್ತಿದ್ದು, ಮೈಸೂರಿಗೆ ಆಗಮಿಸುತ್ತಿರುವ ಪ್ರವಾಸಿಗರ ಸಂಖ್ಯೆ ಈಗಾಗಲೇ ಏರಿಕೆಯಾಗುತ್ತಿದೆ. ಹಾಗಾಗಿ ಇಂದು ನಡೆದ ಸ್ವಚ್ಛತಾ ಅಭಿಯಾನದಲ್ಲಿ ಪ್ರಮುಖವಾಗಿ ಪ್ರವಾಸಿ ತಾಣಗಳ ಸುತ್ತಮುತ್ತಲಿನ ಪ್ರದೇಶಕ್ಕೆ ಆದ್ಯತೆ ನೀಡಲಾಗಿತ್ತು. ಅರಮನೆ ಸುತ್ತಮುತ್ತಲಿನ ಪ್ರದೇಶ, ರಸ್ತೆಗಳು, ಜಗನ್ಮೋಹನ ಅರಮನೆ, ಚಿಕ್ಕಗಡಿಯಾರ, ದೊಡ್ಡಗಡಿಯಾರ, ಪುರಭವನ, ಕುಕ್ಕರಹಳ್ಳಿ, ಕಾರಂಜಿಕೆರೆ ಸೇರಿದಂತೆ ಇನ್ನಿತರ ಸ್ಥಳಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ಇದರೊಂದಿಗೆ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಜೋತು ಬಿದ್ದಿರುವ ಮರದ ರೆಂಬೆಗಳ ತೆರವು, ಪ್ರವಾಸೋದ್ಯಮ ಇಲಾಖೆಯ ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ಸಂಚರಿಸುವ ಮಾರ್ಗದಲ್ಲೂ ಬಾಗಿದ ರೆಂಬೆಗಳ ತೆರವು ಕಾರ್ಯಾಚರಣೆ ನಡೆಸಲಾಯಿತು.

ಸ್ವಚ್ಛತಾ ಅಭಿಯಾನದಲ್ಲಿ ಸ್ವಚ್ಛತಾ ರಾಯಭಾರಿ ರಂಗಕರ್ಮಿ ಮಂಡ್ಯ ರಮೇಶ್, ಪಾಲಿಕೆ ಸದಸ್ಯರು, ನಗರಪಾಲಿಕೆ ವಲಯ ಕಚೇರಿ ಆಯುಕ್ತರು, ಎಇಇ, ಇಇ, ಡಿಓ, ಪರಿಸರ ಅಭಿಯಂತರರು, ಸ್ವಚ್ಛತಾ ಸಿಬ್ಬಂದಿ, ಸೆಕ್ಷನ್ ಹೆಡ್‌ಗಳು, ಕ್ಲೀನ್ ಮೈಸೂರು ಫೌಂಡೇಷನ್, ಎನ್‌ಸಿಸಿ ಕೆಡೆಟ್‌ಗಳು, ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಇನ್ನಿತರರು ಪಾಲ್ಗೊಂಡಿದ್ದರು.

ಅ.17, ದಸರಾ ಚಿತ್ರಕಲಾ ಸ್ಪರ್ಧೆ

ಮೈಸೂರು,ಅ.1–ಮೈಸೂರು ದಸರಾ ಮಹೋತ್ಸವದ ಪ್ರಯುಕ್ತ ದಸರಾ ಲಲಿತಕಲೆ ಮತ್ತು ಕರಕುಶಲ ಉಪಸಮಿತಿಯಿಂದ ಅ.17ರಂದು ಬೆಳಗ್ಗೆ 11 ಗಂಟೆಗೆ ಕಲಾ ಮಂದಿರದಲ್ಲಿ 1ರಿಂದ 4ನೇ ತರಗತಿ ವಿದ್ಯಾರ್ಥಿಗಳಿಗೆ ಪರಿಸರ, ಪ್ರಾಣಿ, ಪಕ್ಷಿಗಳು, ಮೈಸೂರು ದಸರಾ, 5ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಭಾರತದ ಮೈಲುಗಲ್ಲು ಹಾಗೂ 8ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಕರ್ನಾಟಕದ ವಿಶ್ವಪಾರಂಪರಿಕ ತಾಣಗಳು ಈ ವಿಷಯಗಳ ಮೇಲೆ ಮೂರು ವಿಭಾಗಗಳಲ್ಲಿ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿದೆ. ಭಾಗವಹಿಸಲು ಇಚ್ಛಿಸುವ ಶಾಲಾ ಮಕ್ಕಳು, ಅ.4ರಿಂದ ಸುಚಿತ್ರಾ ಕಲಾ ಗ್ಯಾಲರಿಯಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ ಲಲಿತಕಲೆ ಮತ್ತು ಕರಕುಶಲ ಉಪಸಮಿತಿ, ಆನಂದ ದೂ.ಸಂ: 9844240251, ರಕ್ಷಿತ್ ದೂ.ಸಂ: 7795547801 ಅನ್ನು ಸಂಪರ್ಕಿಸಬಹುದು.



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕರೆಯ ಮೇರೆಗೆ ಮಹಾತ್ಮಾ ಗಾಂಧೀಜಿ ಅವರ ಜಯಂತಿ ಅಂಗವಾಗಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬೋಗಾದಿ ಗ್ರಾಮದ ವೀರಶೈವ ಸ್ಮಶಾನದಲ್ಲಿ ಭಾನುವಾರ ಸ್ವಚ್ಛತಾ ಅಭಿಯಾನಕ್ಕೆ ಸಂಸದ ಪ್ರತಾಪ್ ಸಿಂಹ ಪಕ್ಷದ ಮುಖಂಡರೊಂದಿಗೆ ಶ್ರಮದಾನದ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಕವೀಶ್‌ಗೌಡ, ಹಿರಿಯ ಮುಖಂಡರಾದ ಶ್ರೀನಿವಾಸ್, ಮಹೇಂದ್ರ, ರಾಜಕುಮಾರ್, ಅರುಣ್‌ಕುಮಾರ್‌ಗೌಡ, ನಂದೀಶ್, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ದೇವರಾಜ್, ಪ್ರಧಾನ ಕಾರ್ಯದರ್ಶಿ ಪೈ.ಟಿ.ರವಿ, ಈರಪ್ಪ, ಪಾಪಣ್ಣ, ಗೋಪಾಲ್, ಮರಿಸ್ವಾಮಿ ನಾಯಕ್, ಗಣೇಶ್, ಜಿಲ್ಲಾ ಕಾರ್ಯದರ್ಶಿ ಭಾಗ್ಯಶ್ರೀ, ಭಟ್, ರಾಧಾ, ಯುವ ಮೋರ್ಚಾ ಅಧ್ಯಕ್ಷ ಚೇತನ್ ಹಿಂದುಳಿದ ವರ್ಗ ಮೋರ್ಚಾ ಅಧ್ಯಕ್ಷ ನಾರಾಯಣಚಾರ್, ರವಿ, ಸೋಮಶೇಖರ್, ಕೃಷ್ಣ ಮಾದೇಗೌಡ, ಚಂದ್ರಶೇಖರ್ ಪಟೇಲ್, ರಾಜು, ನಾರಾಯಣ್, ನಿಂಗರಾಜು, ಮಂಜು ಇನ್ನಿತರರು ಉಪಸ್ಥಿತರಿದ್ದರು.

ಸ್ವಚ್ಛತಾ ಆಂದೋಲನಕ್ಕೆ ಎಡಿಸಿ ಚಾಲನೆ

ಮೈಸೂರು, ಅ.1–ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಮಾರ್ಗದರ್ಶನದಲ್ಲಿ ಭಾನುವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಚಾಲನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಪ್ರಾಂಗಣದಲ್ಲಿ ಶ್ರಮದಾನ ಮಾಡಲಾಯಿತು. ನಂತರ ಮಾತನಾಡಿದ ಅವರು, ಎಲ್ಲಾ ಸರ್ಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ತಮ್ಮ ತಮ್ಮ ಕಚೇರಿಗಳಲ್ಲಿ ಸ್ವಚ್ಛತೆ ಕಾಪಾಡಿ ಸಾರ್ವಜನಿಕರಿಗೆ ಅರಿವು ಮೂಡಿಸಲಿ ಎನ್ನುವ ಉದ್ದೇಶದೊಂದಿಗೆ ಶ್ರಮದಾನ ಮಾಡುತ್ತಿದ್ದೇವೆ ಎಂದರು. ನಮ್ಮ ಮನೆ, ಕಚೇರಿ ಸುತ್ತಮುತ್ತ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಹೀಗೆ ಪ್ರತಿಯೊಬ್ಬರು ಪರಿಸರ ಸ್ವಚ್ಛವಾಗಿಟ್ಟುಕೊಂಡರೆ ಇಡೀ ಜಗತ್ತೆ ಸ್ವಚ್ಛವಾಗುತ್ತದೆ ಎಂದರು. ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ವಚ್ಛತಾ ಕಾರ್ಯದಲ್ಲಿ ಕೈಜೋಡಿಸಿದರು.



ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಕಾವು+ಏರಿ= ಕಾವೇರಿ, ಇದು ಯಾವ ಸಂಧಿ?

ಗುಂಡ : ತಮಿಳುನಾಡಿಗೆ ಆಗಮ ಸಂಧಿ, ಕರ್ನಾಟಕಕ್ಕೆ ಲೋಪ ಸಂಧಿ, ಸುಪ್ರೀಂಕೋರ್ಟಿಗೆ ಆದೇಶ ಸಂಧಿ.

ಮೈಸೂರು ಮಿತ್ರ

ಸೋಮವಾರ, 2 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜೀವನದಲ್ಲಿ ಅತೀ ಕಠಿಣ ಸಂದರ್ಭಗಳು ಎದುರಾದಾಗ, ಮನಸ್ಥಿತಿಯು ಯಾವುದೋ ಮೂಲೆಯಲ್ಲಿ ಎಲ್ಲವೂ ಒಳ್ಳೆಯದಾಗುತ್ತದೆ ಎಂಬ ಧ್ವನಿ ಬರುತ್ತದೆ, ಆ ಧ್ವನಿಯ ಮೂಲ ಸ್ವಯಂ ಭಗವಂತನೇ ಆಗಿರುತ್ತಾನೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಶಕ್ತಿಗಿಂತ ಯುಕ್ತಿ ಮೇಲು.

ನಿಮ್ಮ ಪತ್ರಗಳು

ಮಿತ್ರನ 'ನಿಮ್ಮ ಪತ್ರ'ಕ್ಕೆ ಸ್ಪಂದನೆ

ಮಾನ್ಯರೆ,

ಕಳೆದ ನಾಲ್ಕು ದಿನಗಳ ಹಿಂದೆ ನಿಮ್ಮ ಪತ್ರಿಕೆ 'ನಿಮ್ಮ ಪತ್ರಗಳು' ವಿಭಾಗದಲ್ಲಿ ತಾವು ಪ್ರಕಟಿಸಿದ ಪತ್ರ ಕುವೆಂಪುನಗರದ ಆದಿಚುಂಚನಗಿರಿ ಮುಖ್ಯ ರಸ್ತೆಯ ಅಗರವಾಲ್ 'ಐ' ಆಸ್ಪತ್ರೆಯಿಂದ ಮಹದೇಶ್ವರ ದೇವಸ್ಥಾನದ ರಸ್ತೆಯಲ್ಲಿ ಒಳಚರಂಡಿಗೆ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಕುಂಟುತ್ತಾ ಸಾಗಿದೆ. ಈ ರಸ್ತೆಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಿ ಸಾರ್ವಜನಿಕರು ಮತ್ತು ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡುವಂತೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಈ ಭಾಗದ ಜನಪ್ರತಿನಿಧಿಗಳಿಗೆ ಮೂರು ಬಾರಿ ಮನವಿ ಮಾಡಿದ್ದು ಸರಿಯಷ್ಟೆ.

ಈ ಪತ್ರಕ್ಕೆ ಸ್ಪಂದಿಸಿದ ಜನಪ್ರತಿನಿಧಿಗಳು, ಪತ್ರಿಕೆಯಲ್ಲಿ ಪ್ರಕಟವಾದ ಮೂರೇ ದಿನಗಳಲ್ಲಿ ಈ ರಸ್ತೆಯನ್ನು ಸಂಪೂರ್ಣ ಡಾಂಬರೀಕರಣ ಮಾಡಿರುವುದು ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ನಿಮ್ಮ ಪತ್ರಿಕೆಗೆ ಅಭಿನಂದನೆಗಳು.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು. ಮೊ.: 9448026186

ಕುಸ್ತಿ ಕ್ರೀಡಾಂಗಣಕ್ಕೆ ಚಾವಣಿ ಅಳವಡಿಸಿ

ಮಾನ್ಯರೆ,

ಮೈಸೂರು ದಸರಾ ಹಾಗೂ ಕುಸ್ತಿಗೂ ಅವಿನಾಭಾವ ಸಂಬಂಧ ಮಹಾರಾಜರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಲು ರಾಜ್ಯದ ವಿವಿಧ ಭಾಗಗಳಿಂದ ಪೈಲ್ವಾನರು ಬರುವುದುಂಟು.

ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ನಾಡ ಕುಸ್ತಿ, ಮಹಿಳಾ ಕುಸ್ತಿ, ಹಾಗೂ ಕಿಶೋರ ಪ್ರಶಸ್ತಿ, ಕುಮಾರ್ ಪ್ರಶಸ್ತಿ, ಕೇಸರಿ ಪ್ರಶಸ್ತಿ, ಕಂಠೀರವ ಪ್ರಶಸ್ತಿ ಒಳಗೊಂಡಂತೆ ನಡೆಸುವ ಈ ಪಂದ್ಯಾವಳಿಯನ್ನು ನೋಡಲು ರಾಜ್ಯದ ವಿವಿಧ ಭಾಗಗಳಿಂದ ಸಾವಿರಾರು ಜನರು ಬರುತ್ತಾರೆ. ಆದರೆ ಕುಸ್ತಿ ಪ್ರೇಮಿಗಳು ಕುಸ್ತಿಯನ್ನು ವೀಕ್ಷಿಸಲು ಕೂರಲು ಕಲ್ಲಿನ ಆಸನ (ಗ್ಯಾಲರಿ) ಇರುತ್ತದೆ. ಆದರೆ ಮಳೆ ಬಂದರೆ ಚಾವಣಿ ಇಲ್ಲದೆ ಮಳೆಯಲ್ಲಿಯೇ ಕುಸ್ತಿಯನ್ನು ವೀಕ್ಷಿಸಬೇಕಾಗುತ್ತದೆ. ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳು ಈ ಬಾರಿ ದಸರಾ ಕುಸ್ತಿಗಾದರೂ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣಕ್ಕೆ ಚಾವಣಿಯನ್ನು ಅಳವಡಿಸಬೇಕೆಂದು ಮನವಿ.

– ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಗ್ರಂಥಾಲಯಗಳಿಗೆ ಮೂಲ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಇತ್ತೀಚೆಗೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ಓದುಗರ ಸಂಖ್ಯೆಯು ಹೆಚ್ಚಾಗಿದ್ದು ರಾಜ್ಯದಾದ್ಯಂತ ಸಾರ್ವಜನಿಕ ಗ್ರಂಥಾಲಯಗಳನ್ನು ಬಳಕೆ ಮಾಡಲಾಗುತ್ತಿದೆ. ನಗರ ಪ್ರದೇಶದಲ್ಲಿರುವ ಕೆಲವು ಸಾರ್ವಜನಿಕ ಗ್ರಂಥಾಲಯಗಳಿಗಷ್ಟೆ ಡಿಜಿಟಲ್ ಗ್ರಂಥಾಲಯಗಳ ಸೌಲಭ್ಯಗಳನ್ನು ಕಲ್ಪಿಸಿ, ಇತರ ಸೌಲಭ್ಯಗಳನ್ನು ಒದಗಿಸಿದ್ದು, ಇನ್ನುಳಿದ ಕೆಲವು ನಗರ ಪ್ರದೇಶದ ಸಾರ್ವಜನಿಕ ಗ್ರಂಥಾಲಯ ಒಳಗೊಂಡಂತೆ ಗ್ರಾಮೀಣ ಭಾಗದ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಮೂಲ ಸೌಕರ್ಯಗಳಾದ ಕುಡಿಯುವ ನೀರಿನ ಸೌಲಭ್ಯ, ಪ್ರತ್ಯೇಕ ಶೌಚಾಲಯಗಳಿಲ್ಲದೆ ಮಹಿಳಾ, ಪುರುಷ ಓದುಗರು ಸೇರಿ ಗ್ರಂಥಾಲಯಕ್ಕೆ ಬರುವವರಿಗೆ ಕೊರತೆ ಕಾಣುತ್ತಿರುವುದರಿಂದ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ. ಜೊತೆಗೆ ಕೆಲವು ಗ್ರಂಥಾಲಯಗಳಲ್ಲಿ ಬಹಳ ಹಿಂದಿನ ಹಳೆಯ ಪುಸ್ತಕಗಳು ಹೆಚ್ಚಾಗಿದ್ದು, ಹೊಸ ಪುಸ್ತಕಗಳನ್ನು ಕಾಣದೆ ಇರುವಂತಾಗಿದೆ. ಕೂಡಲೇ ಇದಕ್ಕೆ ಸಂಬಂಧಪಟ್ಟ ಇಲಾಖೆಯ ಸಚಿವರು ವಿಶೇಷ ಸೌಲಭ್ಯದ ಅನುದಾನವನ್ನು ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆಗೊಳಿಸಿ, ಅಭಿವೃದ್ಧಿಪಡಿಸುವುದರ ಮೂಲಕ ಗ್ರಾಮೀಣ ಭಾಗದ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಡಿಜಿಟಲ್ ಗ್ರಂಥಾಲಯ ಬಳಸಲು ಸಾರ್ವಜನಿಕ ಗ್ರಂಥಾಲಯಕ್ಕೆ ಬರುವ ಎಲ್ಲ ವರ್ಗದ ಜನರಿಗೆ ಸೌಲಭ್ಯ ಒದಗಿಸಿದರೆ ಮತ್ತಷ್ಟು ಓದುಗರು ಸಾರ್ವಜನಿಕ ಗ್ರಂಥಾಲಯದಲ್ಲಿ ಹೆಚ್ಚಿನ ಅಧ್ಯಯನದ ಉಪಯೋಗ ಪಡೆಯಲು ಸೂಕ್ತವಾಗಿರುತ್ತದೆ. ಹೀಗಾಗಿ ಸರ್ಕಾರ ರಾಜ್ಯದ ಸಾರ್ವಜನಿಕ ಗ್ರಂಥಾಲಯಗಳ ಬಳಸುವ ಕೀರ್ತಿಯು ಹೆಚ್ಚಾಗಲು ಅಭಿವೃದ್ಧಿ ಪಡಿಸಲು ಮುಂದಾಗಬೇಕು.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ರಾಜ್ಯ ಸರ್ಕಾರ ತಮಿಳುನಾಡು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಿ

ಮಾನ್ಯರೆ,

ದಶಕಗಳಿಂದಲೂ ಕರ್ನಾಟಕದ ಗಂಗೆ ಕಾವೇರಿ ನದಿ ನೀರು ಹಂಚಿಕೆ ಕುರಿತು ವಿವಾದ ಸೃಷ್ಟಿಯಾಗುತ್ತಲೇ ಇದೆ. ಕಾವೇರಿ ನೀರು ಕರ್ನಾಟಕದ ಲಕ್ಷಾಂತರ ರೈತರಿಗೆ, ನಗರ, ಪಟ್ಟಣಗಳ ಜನರಿಗೆ, ಕಾರ್ಖಾನೆಗಳಿಗೆ ವರದಾನವಾಗಿದೆ. ವರ್ಷಗಳು ಕಳೆದ ಹಾಗೆ ಮಳೆ ಕ್ಷೀಣಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಅರಣ್ಯ ಒತ್ತುವರಿ. ಮೊದಲಿನ ಹಾಗೆ ರೈತರಲ್ಲಿ ಪ್ರತಿಭಟಿಸುವ ಉತ್ಸಾಹ ಇಲ್ಲ. ಕೆಲವು ಸಂಘಟನೆಗಳು ಮಾತ್ರ ಪ್ರತಿಭಟನೆ ನಡೆಸುತ್ತಿವೆ.

ರಾಜ್ಯ ಸರ್ಕಾರ ರಾಜಕೀಯ ಲಾಭಕ್ಕಾಗಿ ತಮಿಳುನಾಡು ಮುಖ್ಯಮಂತ್ರಿಗಳೊಂದಿಗೆ ಮಾತನಾಡುತ್ತದೆ. ಆದರೆ, ಕಾವೇರಿ ನೀರು ವಿಚಾರವಾಗಿ ಮಾತ್ರ ಮಾತನಾಡುವುದಿಲ್ಲ. ಏನು ಇದರ ಅರ್ಥ. ರಾಜ್ಯದ ಅಣೆಕಟ್ಟುಗಳು ನೀರಿಲ್ಲದೆ ಭಣಗುಡುತ್ತಿದೆ. ರಾಜ್ಯ ಸರ್ಕಾರವು ಕಾವೇರಿ ವಿಚಾರವಾಗಿ ತಮಿಳುನಾಡಿನ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಕೂಡಲೇ ಇದಕ್ಕೆ ಪರಿಹಾರ ಕಂಡುಕೊಂಡು ರೈತರಿಗೆ, ರೈತ ಸಂಘಟನೆಗಳಿಗೆ, ನಿಸ್ವಾರ್ಥ ಹೋರಾಟಗಾರರಿಗೆ ಹಾಗೂ ಜನತೆಗೆ ನ್ಯಾಯ ಒದಗಿಸಬೇಕಾಗಿ ವಿನಂತಿ.

– ಸಂತೋಷ, ಮೈಸೂರು.

ಪೊಲೀಸ್ ಆಯುಕ್ತರಲ್ಲಿ ಮನವಿ

ಮಾನ್ಯರೆ,

ಇತ್ತೀಚೆಗೆ ಮೈಸೂರು ನಗರ ಪೊಲೀಸರು ಅನೇಕ ಪ್ರಕರಣಗಳನ್ನು ತ್ವರಿತ ಗತಿಯಲ್ಲಿ ಭೇದಿಸಿ, ಕಾರ್ಯ ದಕ್ಷತೆಯನ್ನು ಮೆರೆದಿದ್ದಾರೆ. ಇನ್ನೇನು 2023ರ ವಿಶ್ವಕಪ್ ಕ್ರಿಕೆಟ್ ಜ್ವರ ಕಾವೇರುತ್ತಿದೆ. ಸುಣ್ಣದಕೇರಿ ಭಾಗದಲ್ಲಿ ಕ್ರಿಕೆಟ್ ಬೆಟ್ಟಿಂಗ್ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ಯುವ ಜನಾಂಗ ಕ್ರಿಕೆಟ್ ಬೆಟ್ಟಿಂಗ್‌ಗೆ ದಾಸರಾಗಿ ತಮ್ಮ ಅಮೂಲ್ಯ ಹಣ, ಜೀವನ ಹಾಳು ಮಾಡಿಕೊಂಡು ಸರಗಳ್ಳತನ, ಮೊಬೈಲ್ ಕಳ್ಳತನ, ದ್ವಿಚಕ್ರ ವಾಹನ ಕಳ್ಳತನಗಳಲ್ಲಿ ಭಾಗಿಯಾಗಿ ಸಮಾಜಕ್ಕೆ ಕಂಟಕರಾಗುತ್ತಿದ್ದಾರೆ. ದಕ್ಷ ಪ್ರಾಮಾಣಿಕ ಮೈಸೂರು ನಗರ ಪೊಲೀಸ್ ಆಯುಕ್ತರು ಕ್ರಿಕೆಟ್ ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕಿ ಸಮಾಜದಲ್ಲಿ ಶಾಂತಿ ಮತ್ತು ನೆಮ್ಮದಿಯಾಗಿ ಜನ ಬದುಕುವಂತೆ ಅವಕಾಶ ಕಲ್ಪಿಸಲು ಮನವಿ.

–ನೊಂದ ನಾಗರಿಕರು, ಸುಣ್ಣದಕೇರಿ, ಮೈಸೂರು.




ಜಿ.ಎಲ್. ತ್ರಿಪುರಾಂತಕ

ಮೊಬೈಲ್ ನಂ.: 96866-77284

ಬೆರಗು

ಸರಳತೆಯ ಬಹದ್ದೂರ್ ಶಾಸ್ತ್ರೀಜಿ

ಅಕ್ಟೋಬರ್ 2 ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜನ್ಮದಿನಾಚರಣೆ



ಗಾಂಧೀಜಿಯವರ ತತ್ವ ಅಷ್ಟೇ ಅಲ್ಲ ಅವರ ಜನ್ಮದಿನವನ್ನು ಹಂಚಿಕೊಂಡ ಅಪೂರ್ವ ಜನನಾಯಕ ಲಾಲ್ ಬಹದ್ದೂರ್ ಶಾಸ್ತ್ರಿ ಅವರು. ಕಾಯದಲ್ಲಿ ವಾಮನಮೂರ್ತಿಯಾದರೂ ಕಾಯಕದಲ್ಲಿ ಅಜಾನುಬಾಹು ಎಂದು ನಿರೂಪಿಸಿದ ನಮ್ಮ ದೇಶ ಕಂಡ ಅಪರೂಪದ ಪ್ರಧಾನಿ ಶಾಸ್ತ್ರಿ ಅವರು. ವಿರಳಾತಿ ವಿರಳ ಸಜ್ಜನ ರಾಜಕಾರಣಿ, ಅಜಾತಶತ್ರು, ಸರಳತೆಯ ಸಾಕಾರಮೂರ್ತಿ, ದೇಶದ ಹಿತಕ್ಕಾಗಿ ವೈಯಕ್ತಿಕ ಹಿತ ಮರೆತ ತ್ಯಾಗಮಯಿ ಶಾಸ್ತ್ರೀಜಿ ಅವರು. 1964 ಜೂನ್‌ನಿಂದ 1964 ಜನವರಿವರೆವಿಗೆ ದೇಶದ ಎರಡನೇ ಪ್ರಧಾನಿಯಾಗಿ ಸೇವೆ ಸಲ್ಲಿಸಿ ತಮ್ಮ ದೂರದರ್ಶಿತ್ವದಿಂದ ಇಡೀ ವಿಶ್ವವೇ ನಮ್ಮ ದೇಶದೆಡೆಗೆ ತಿರುಗಿ ನೋಡುವಂತೆ ಮಾಡಿದ ಅಪ್ರತಿಮ ವೀರ ಅವರು. ಮಹಾತ್ಮ ಗಾಂಧೀಜಿಯವರ ಅನುಯಾಯಿಯಾಗಿ ಅವರ ತತ್ತ್ವಗಳನ್ನು ಅಕ್ಷರಶಃ ಪಾಲಿಸಿದ ಹಿರಿಮೆ ಶಾಸ್ತ್ರೀಜಿ ಅವರದ್ದು. ಶಾಸ್ತ್ರೀಜಿ ಅವರ ಜೀವನ ಚರಿತ್ರೆಯನ್ನು ಓದಿದರೆ ಇಂತಹ ಮಹಾತ್ಮರು ನಮ್ಮ ದೇಶದಲ್ಲಿ ಇದ್ದುದು ನಮ್ಮ ಪುಣ್ಯ ಎಂದೆನಿಸದೆ ಇರದು. ಹಾಗೆಯೆ ಇಂತಹ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಬಹುದೇ ಎಂದು ಆಶ್ಚರ್ಯವಾಗಬಹುದು. ಚಾರಿತ್ರ್ಯ ಎಂದರೆ ಏನು ಎಂದು ಎಂಬುದನ್ನು ಇವರ ಜೀವನ ಸಾಧನೆ ನೋಡಿ ತಿಳಿಯಬಹುದು. ಶಾಸ್ತ್ರೀಜಿಯವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದ ಹಲವು ತತ್ವಗಳಲ್ಲಿ ಒಂದು ತತ್ತ್ವವನ್ನಾದರೂ ಓದುಗರು ಅನುಸರಿಸಿದರೆ ಅವರನ್ನು ಇಂದು ಸ್ಮರಿಸಿದ್ದಕ್ಕೆ ಸಾರ್ಥಕವಾಗುತ್ತದೆ.

ಲಾಲ್ ಬಹದ್ದೂರು ಶಾಸ್ತ್ರೀ ಅವರು ಉತ್ತರ ಪ್ರದೇಶ ರಾಜ್ಯದ ವಾರಣಾಸಿಯ ಹತ್ತಿರದಲ್ಲಿರುವ ಮೊಘಲಸರೈ ಗ್ರಾಮದಲ್ಲಿ ಮುನ್ಷಿ ಶಾರದ ಪ್ರಸಾದ್ ಹಾಗೂ ರಾಮ್ ದುಲಾರಿ ದಂಪತಿಗೆ 1904ರ ಅಕ್ಟೋಬರ್ 2ರಂದು ಜನಿಸುತ್ತಾರೆ. ಒಂದುವರೆ ವರ್ಷವಿದ್ದಾಗ ತಂದೆಯನ್ನು ಕಳೆದುಕೊಂಡರೂ ತಾಯಿಯ ಮಡಿಲಲ್ಲೇ ಬೆಳೆದು ಮುಂದೆ ಸಾಧಕರಾದವರು. ವಾರಣಾಸಿಯಲ್ಲಿ ವಿದ್ಯಾಭ್ಯಾಸ ಪೂರೈಸುತ್ತಾರೆ. ಒಮ್ಮೆ ನದಿ ದಾಟಲು ದೋಣಿಯವನಿಗೆ ನೀಡಲು ಹಣವಿಲ್ಲದೆ ಈಜಿಕೊಂಡೇ ನದಿಯನ್ನು ದಾಟಿದ ಧೈರ್ಯಶಾಲಿ. ಶಾಸ್ತ್ರಿ ಎಂಬುದು ಅವರ ಕುಟುಂಬದ ಹೆಸರಿನೊಂದಿಗೆ ಬಂದ ಸರ್‌ನೇಮ್ ಅಲ್ಲ, ಅವರಿಗೆ ಕಾಶಿ ವಿದ್ಯಾಪೀಠದಿಂದ ಬಂದ ಬಿರುದಾಗಿದೆ. ಮಹಾತ್ಮ ಗಾಂಧೀಜಿ ಹುಟ್ಟಿದ 35 ವರ್ಷಗಳ ನಂತರ ಹುಟ್ಟಿದರೂ ಅವರ ತತ್ವಗಳಿಂದ ಪ್ರೇರೇಪಿತರಾಗಿ ತಮ್ಮ 16ನೇ ವಯಸ್ಸಿನಲ್ಲಿ ಮಹಾತ್ಮ ಗಾಂಧೀಜಿಯವರ ಅಸಹಕಾರ ಚಳುವಳಿ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟಕ್ಕೆ ನೇರವಾಗಿ ಧುಮುಕಿದರು. ಶಾಸ್ತ್ರೀಜಿ ಅವರು ಲಲಿತಾದೇವಿಯವರನ್ನು 1928 ಮೇ 16ರಂದು ವಿವಾಹವಾಗುತ್ತಾರೆ. ಆದರ್ಶ ದಂಪತಿಗಳಾಗಿದ್ದ ಅವರು 4 ಗಂಡು ಮಕ್ಕಳು ಹಾಗೂ 2 ಹೆಣ್ಣು ಮಕ್ಕಳನ್ನು ಪಡೆಯುತ್ತಾರೆ.

1920ರಲ್ಲಿ ಸ್ವಾತಂತ್ರ್ಯದ ಸಂಗ್ರಾಮಕ್ಕೆ ಸಕ್ರಿಯವಾಗಿ ಸೇರಿದ ಶಾಸ್ತ್ರೀಜಿಯವರದು ನಿತ್ಯ ಹೋರಾಟದ ಬದುಕಾಗಿರುತ್ತದೆ. ಹಲವಾರು ಬಾರಿ ಜೈಲು ಸೇರಬೇಕಾದ ಪ್ರಸಂಗ ಒದಗಿ ಬಂದರೂ ಎದೆಗುಂದದೆ ಮುನ್ನಡೆಯುತ್ತಾರೆ. ಸ್ವಾವಲಂಬನೆಯಿಂದ ಮಾತ್ರ ದೇಶದ ಉದ್ಧಾರ ಸಾಧ್ಯ ಎಂಬ ನಂಬಿಕೆಯನ್ನು ಹೊಂದಿರುತ್ತಾರೆ. 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ ಅಂದಿನ ಪ್ರಧಾನಿ ನೆಹರು ಅವರ ಸಚಿವ ಸಂಪುಟದಲ್ಲಿ ಶಾಸ್ತ್ರೀಜಿ ಅವರು ಸಾರಿಗೆ ಹಾಗೂ ಗೃಹ ಖಾತೆ ನೀಡಲಾಗಿರುತ್ತದೆ. ಅಂದಿನ ಕಾಲದಲ್ಲಿಯೇ ಮಹಿಳಾ ನಿರ್ವಾಹಕಿಯರನ್ನು ಸಾರ್ವಜನಿಕ ಬಸ್‌ಗಳಿಗೆ ನೇಮಿಸಿದ ಕೀರ್ತಿ ಅವರಿಗೆ ಸಲ್ಲಬೇಕು. ತಮ್ಮ ಸಚಿವಾಲಯವನ್ನು ಉತ್ತಮ ರೀತಿಯಲ್ಲಿ ಮುನ್ನಡೆಸುತ್ತಾರೆ. 1952ರಲ್ಲಿ ಅವರಿಗೆ ರೈಲ್ವೆ ಸಚಿವಾಲಯವನ್ನು ನೀಡಲಾಗುತ್ತದೆ. ಒಮ್ಮೆ ರೈಲ್ವೆ ಅಪಘಾತವಾಗಿ ಸಾವು ನೋವುಗಳಾದಾಗ ನೈತಿಕ ಹೊಣೆ ಹೊತ್ತು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ.

1964 ಜೂನ್ 9 ರಂದು ದೇಶದ ಎರಡನೇ ಪ್ರಧಾನಿಯಾಗಿ ಆಯ್ಕೆಯಾಗುತ್ತಾರೆ. ಅಂದು ಕಾಂಗ್ರೆಸ್‌ನಲ್ಲಿ ಘಟಾನುಘಟಿಗಳೇ ಇದ್ದರೂ ಈ ವಾಮನ ಮೂರ್ತಿಯ ಶಕ್ತಿಯ ಮೇಲೆ ಎಲ್ಲರಿಗೂ ನಂಬಿಕೆ ಇರುತ್ತದೆ. ಅಂದು ದೇಶ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುತ್ತದೆ. ಪ್ರಮುಖವಾಗಿ ಆಹಾರ ಸಮಸ್ಯೆ ಹೆಚ್ಚಾಗಿರುತ್ತದೆ. ದೇಶದ ಬೆನ್ನೆಲುಬಾದ ಗ್ರಾಮಗಳು ಸ್ವಾವಲಂಬಿಯಾದರೆ ಮಾತ್ರ ದೇಶ ಸುಭದ್ರವಾಗಿರಲು ಸಾಧ್ಯ ಎಂದು ನಂಬಿದ ಅವರು ಕ್ಷೀರ ಕ್ರಾಂತಿಗೆ ಕರೆ ಕೊಡುತ್ತಾರೆ. ಇದರಿಂದ ಹಳ್ಳಿಗರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆ. ಹಾಗೆಯೇ ಹಸಿರು ಕ್ರಾಂತಿಯ ಕುರಿತು ಚಿಂತನೆ ನಡೆಸಿದ ಕೀರ್ತಿ ಅವರಿಗೇ ಸಲ್ಲಬೇಕು. ಅವರ ಅಧಿಕಾರವಧಿಯಲ್ಲಿ ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಅದರಲ್ಲಿ ಪಾಕಿಸ್ತಾನ 1965ರಲ್ಲಿ ಘೋಷಿಸಿದ ಯುದ್ಧವೂ ಒಂದು. ಅಂದಿನ ಪಾಕಿಸ್ತಾನದ ಪ್ರಧಾನಿ ಅಯೂಬ್ ಖಾನ್‌ರವರು ಶಾಸ್ತ್ರೀಜಿಯವರನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸಿರಲಿಲ್ಲ. 1962ರ ಚೀನಾ ಯುದ್ಧದಲ್ಲಿ ಹಿನ್ನಡೆಯಾಗಿದ್ದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಭಾರತವನ್ನು ದುರ್ಬಲ ದೇಶ ಎಂದು ಪರಿಗಣಿಸಿ ಖಾನ್ ಅವರು ಯುದ್ಧ ಘೋಷಿಸಿರುತ್ತಾರೆ. ಆದರೆ ಶಾಸ್ತ್ರೀಜಿ ಸೈನ್ಯಕ್ಕೆ ಆತ್ಮಬಲ ತುಂಬಿ ತಾವೇ ಖುದ್ದು ನೇತೃತ್ವ ವಹಿಸಿ 'ಜೈ ಜವಾನ್ ಜೈ ಕಿಸಾನ್' ಘೋಷಣೆಯೊಂದಿಗೆ ಪಾಕಿಸ್ತಾನದ ಸೈನ್ಯವನ್ನು ಲಾಹೋರ್ ಹತ್ತಿರದವರೆವಿಗೆ ಹಿಮ್ಮೆಟ್ಟಿಸುತ್ತಾರೆ. ಅಮೆರಿಕಾ ದೇಶದಿಂದ ಒತ್ತಡವೊಂದು ಬರುತ್ತದೆ. ಪಾಕಿಸ್ತಾನದ ಜೊತೆಗಿನ ಯುದ್ಧದಿಂದ ಹಿಂದೆ ಸರಿಯದಿದ್ದರೆ ಭಾರತಕ್ಕೆ ಸರಬರಾಜು ಮಾಡುತ್ತಿದ್ದ ಗೋಧಿಯನ್ನು ಸ್ಥಗಿತಗೊಳಿಸುವುದಾಗಿ ಎಚ್ಚರಿಕೆ ಬಂದಾಗಲೂ ಶಾಸ್ತ್ರೀಜಿ ಅವರು ಧೃತಿಗೆಡುವುದಿಲ್ಲ.

ಇಡೀ ದೇಶಕ್ಕೆ ಒಂದು ಕರೆ ನೀಡುತ್ತಾರೆ. ವಾರದಲ್ಲಿ ಒಂದು ದಿನ ಒಂದು ಹೊತ್ತು ಉಪವಾಸವಿದ್ದರೆ ನಾವು ಆಹಾರಕ್ಕೋಸ್ಕರ ಪರಾವಲಂಭಿಗಳಾಗುವುದು ತಪ್ಪುತ್ತದೆ. ಆಗ ಪಾಕಿಸ್ತಾನವನ್ನು ಸುಲಭವಾಗಿ ಸೋಲಿಸಬಹುದು ಎಂಬುದಾಗಿರುತ್ತದೆ. ಇಡೀ ದೇಶ ಅವರ ಕರೆಗೆ ಓಗೊಡುತ್ತದೆ. ಯುದ್ಧದಲ್ಲಿ ಜಯ ಸಾಧಿಸಲಾಗುತ್ತದೆ. ಇದರಿಂದ ಇಡೀ ವಿಶ್ವವೇ ಭಾರತದೆಡೆಗೆ ನೋಡುವಂತಾಗುತ್ತದೆ. ಚೀನಾ ಯುದ್ಧಾನಂತರ ಭಾರತದ ಕುರಿತು ಭರವಸೆ ಕಳೆದುಕೊಂಡಿದ್ದ ರಾಷ್ಟ್ರಗಳು ಈ ಯುದ್ಧದ ವಿಜಯದಿಂದ ಹೆಮ್ಮೆಪಡುವಂತಾಗುತ್ತದೆ. ನಾಡು, ನುಡಿ, ದೇಶ, ಗಡಿ ಎಂಬ ವಿಷಯ ಬಂದಾಗ ಶಾಸ್ತ್ರೀಜಿಯವರು ಕಠಿಣ ನಿರ್ಧಾರಗಳನ್ನು ತೆಗೆದುಕೊಂಡು ಅವರೊಬ್ಬ ಮಹಾನಾಯಕರಾಗಿ ಹೊರಹೊಮ್ಮುತ್ತಾರೆ. ಇಡೀ ದೇಶವೇ ಕೊಂಡಾಡುವ ಮಹಾಚೇತನವಾಗುತ್ತಾರೆ. ಪಾಕಿಸ್ತಾನದೊಂದಿಗಿನ ಮಾತುಕತೆಗೆ ಸೋವಿಯತ್ ರಷ್ಯಾಕ್ಕೆ ತೆರಳಿದ್ದ ಶಾಸ್ತ್ರೀಜಿಯವರು 1966 ಜನವರಿ 11 ರಂದು ಅಕಾಲಿಕವಾಗಿ ನಿಧನ ಹೊಂದುತ್ತಾರೆ. ಅವರ ಸಾವು ಇಂದಿಗೂ ನಿಗೂಢವಾಗಿಯೇ ಉಳಿದಿದೆ.

ಬಡತನ, ನಿರುದ್ಯೋಗ ಸಮಸ್ಯೆಯನ್ನು ನಿಭಾಯಿಸಲು ದೂರದೃಷ್ಟಿ ಹೊಂದಿದ್ದರು. ಇಡೀ ದೇಶದ ಜನಕ್ಕೆ ಆತ್ಮಸ್ಥೈರ್ಯವನ್ನು ತುಂಬಿದ, ದೇಶಪ್ರೇಮವನ್ನು ಹೆಚ್ಚಿಸಿದ ಅದಮ್ಯ ಚೇತನ ಅವರಾಗಿದ್ದರು. ರೈತ ಹಾಗೂ ಸೈನಿಕರ ಮಹತ್ವವನ್ನು ಅರಿತು ಅವರ ಕುರಿತು ಅಪಾರ ಗೌರವವನ್ನು ಹೊಂದಿದ್ದರು. ಇಂತಹ ನಾಯಕ ಎಲ್ಲಾ ಕಾಲಕ್ಕೂ ಪ್ರಸ್ತುತ ಎನಿಸುವುದು ಅವರ ನಡೆ ನುಡಿಯಿಂದಲೇ ಎನ್ನಬಹುದು. ಒಂದು ಅವಧಿಯ ಪೂರ್ಣ ಪ್ರಧಾನಿಯಾಗಿದ್ದರೆ ದೇಶದ ಇಂದಿನ ಚಿತ್ರಣ ಸಮಗ್ರವಾಗಿ ಇನ್ನೂ ಬದಲಾಗುತ್ತಿತ್ತೋ ಏನೋ? 1966ರಲ್ಲಿ ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿಯನ್ನು ಭಾರತ ಸರ್ಕಾರ ನೀಡುತ್ತದೆ. ಇದರಿಂದ ಪ್ರಶಸ್ತಿಯ ಘನತೆ ಹೆಚ್ಚಿದಂತಾಯಿತು ಅಷ್ಟೆ. ಅವರ ವೈಯಕ್ತಿಕ ಬದುಕಿನ ಕೆಲವು ಸಂಗತಿಗಳನ್ನು ಎಂತಹವರು ಹುಬ್ಬೇರಿಸುವಂತೆ ಆಗುತ್ತದೆ. ಬಡತನವನ್ನು ಅನುಭವಿಸಿ ಬಂದಿದ್ದ ಶಾಸ್ತ್ರೀಜಿ ಅವರು ತಮಗೆ ರಾಜಕೀಯ ಅಧಿಕಾರ ಸಿಕ್ಕಾಕ್ಷಣ ಅದರಿಂದ ಸಿಗುವ ಪರೋಕ್ಷ ಲಾಭಗಳನ್ನು ಪಡೆಯುವುದಿಲ್ಲ. ತನ್ನೊಟ್ಟಿಗಿನ ಸಚಿವ ಸಹೋದ್ಯೋಗಿಗಳು ಐಷಾರಾಮದ ಜೀವನ ನಡೆಸುತ್ತಿದ್ದರೂ, ಅವರು ಮಾತ್ರ ಸರಳ ಜೀವನಕ್ಕೆ ಅಂಟಿಕೊಂಡು ಅವರು ತಮ್ಮ ಕುಟುಂಬವನ್ನು ಅದಕ್ಕೆ ಒಗ್ಗಿಸಿರುತ್ತಾರೆ. ಅವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಮಕ್ಕಳನ್ನು ಜಟಕಾ ಬಂಡಿಯಲ್ಲಿ ಶಾಲೆಗೆ ಕಳುಹಿಸುತ್ತಿರುತ್ತಾರೆ. ಅವರ ಮಗ ಶಾಸ್ತ್ರೀಜಿ ಅವರಿಗೆ 'ನಿಮ್ಮ ಸಹೋದ್ಯೋಗಿ ಸಚಿವರ ಮಕ್ಕಳು ಕಾರಿನಲ್ಲಿ ಶಾಲೆಗೆ ಬರುತ್ತಿದ್ದು, ನಮಗೂ ಕಾರ್ ವ್ಯವಸ್ಥೆ ಮಾಡಿ ಎಂದು ಕೇಳಿದಾಗ', ಪ್ರಧಾನಿ ಹುದ್ದೆ ಎಂಬುದು ಸರ್ಕಾರಿ ನೌಕರಿ ಥರ ಬಹುಕಾಲದ ಹುದ್ದೆಯಲ್ಲ, ಸದ್ಯ ಕಾರಿನಲ್ಲಿ ಹೋಗಿಬರಲು ಹೇಗೋ ವ್ಯವಸ್ಥೆ ಮಾಡಬಹುದು, ಆದರೆ ಪ್ರಧಾನಿ ಹುದ್ದೆ ಹೋದ ನಂತರ ಮತ್ತೆ ಜಟಕಾ ಬಂಡಿಯಲ್ಲೇ ತೆರಳಬೇಕಾಗುತ್ತದೆ, ಯೋಚಿಸು' ಎಂದು ಹೇಳಿದಾಗ ಅವರ ಮಗ ಅಪ್ಪನ ಮಾತಿಗೆ ಬೆಲೆ ಕೊಟ್ಟು ಕಾರಿನ ವ್ಯವಸ್ಥೆ ನಿರಾಕರಿಸಿ ಜಟಕಾ ಬಂಡಿಯಲ್ಲೇ ತೆರಳುವುದಾಗಿ ಒಪ್ಪುತ್ತಾನೆ. ಅವರ ದೂರದರ್ಶಿತ್ವದ ತತ್ವಕ್ಕೆ ಇದಕ್ಕಿಂತ ದೊಡ್ಡ ನಿದರ್ಶನ ಬೇಕೆ ?

ಇಂದಿನ ರಾಜಕಾರಣಿಗಳಿಗೆ ಹಣ ಎಷ್ಟು ಕೊಟ್ಟರೂ, ಸಿಕ್ಕರೂ ಸಾಲದು. ಮೂರು ತಲೆಮಾರು ಕುಳಿತು ತಿನ್ನುವಂತೆ ಸಂಪಾದಿಸುವ ಇರಾದೆ ಹೊಂದಿರುತ್ತಾರೆ. ಒಮ್ಮೆ ಶಾಸ್ತ್ರೀಜಿಯವರ ಪತ್ನಿ ಲಲಿತಾದೇವಿಯವರು ಸಂಬಳದ ಲೆಕ್ಕ ಬರೆಯುವಾಗ ಈ ತಿಂಗಳು ಹತ್ತು ರೂಪಾಯಿ ಉಳಿದಿದೆ ಎಂದು ಖುಷಿಯಾಗಿ ಹೇಳುತ್ತಾರೆ. ತಕ್ಷಣವೇ ಶಾಸ್ತ್ರೀಜಿಯವರು ನನ್ನ ಕುಟುಂಬದ ಜೀವನ ನಿರ್ವಹಣೆಗೆ ಈಗ ಬರುತ್ತಿರುವ ಸಂಬಳದಲ್ಲಿ ಹತ್ತು ರೂಪಾಯಿ ಉಳಿಯುತ್ತಿದ್ದು, ಮುಂದಿನ ತಿಂಗಳಿನಿಂದ ಸಂಬಳವನ್ನು ಹತ್ತು ರೂಪಾಯಿ ಕಡಿಮೆ ಕೊಡಿ ಎಂದು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯುತ್ತಾರೆ. ಅವರ ಸರಳತೆಗೆ, ಪ್ರಾಮಾಣಿಕತೆಗೆ, ಬದ್ಧತೆಗೆ ಇದು ನಿದರ್ಶನ.

ಶಾಸ್ತ್ರೀಜಿ ಅವರ ಜೀವನ ಸಾಧನೆ ಇಂದಿನ ಮಕ್ಕಳಿಗೆ ಅರಿವಾಗುವ ರೀತಿ ಹೇಳಬೇಕು. ಅವರ ಆದರ್ಶಗಳು ಮಕ್ಕಳಿಗೆ ಜೀವನ ಪಾಠವಾಗಬೇಕು. ಪ್ರಧಾನಿಯಂತಹ ಅತ್ಯುನ್ನತ ಹುದ್ದೆಯಲ್ಲಿದ್ದರೂ ಸರಳ ಜೀವನ ನಡೆಸಿದ ಅವರ ಬದುಕು ಮಾದರಿಯಾಗಬೇಕು. ಇಂದಿನ ಕೆಟ್ಟ ವ್ಯವಸ್ಥೆಯಲ್ಲಿ ಶಾಸ್ತ್ರೀಜಿಯವರ ವ್ಯಕ್ತಿತ್ವ ಮಾತ್ರ ಪುಟಕ್ಕಿಟ್ಟ ಚಿನ್ನದಂತೆ ಮಿರಿಮಿರಿ ಮಿಂಚುತ್ತಿದೆ. ಸಾವಿರ ವರ್ಷಗಳಾದರೂ ಅವರ ಆದರ್ಶ ಅಮರವಾಗಿರುತ್ತದೆ.

> “ ಇಂದಿನ ರಾಜಕಾರಣಿಗಳಿಗೆ ಹಣ ಎಷ್ಟು ಕೊಟ್ಟರೂ, ಸಿಕ್ಕರೂ ಸಾಲದು. ಮೂರು ತಲೆಮಾರು ಕುಳಿತು ತಿನ್ನುವಂತೆ ಸಂಪಾದಿಸುವ ಇರಾದೆ ಹೊಂದಿರುತ್ತಾರೆ. ಒಮ್ಮೆ ಶಾಸ್ತ್ರೀಜಿಯವರ ಪತ್ನಿ ಲಲಿತಾದೇವಿಯವರು ಸಂಬಳದ ಲೆಕ್ಕ ಬರೆಯುವಾಗ ಈ ತಿಂಗಳು ಹತ್ತು ರೂಪಾಯಿ ಉಳಿದಿದೆ ಎಂದು ಖುಷಿಯಾಗಿ ಹೇಳುತ್ತಾರೆ. ತಕ್ಷಣವೇ ಶಾಸ್ತ್ರೀಜಿಯವರು ನನ್ನ ಕುಟುಂಬದ ಜೀವನ ನಿರ್ವಹಣೆಗೆ ಈಗ ಬರುತ್ತಿರುವ ಸಂಬಳದಲ್ಲಿ ಹತ್ತು ರೂಪಾಯಿ ಉಳಿಯುತ್ತಿದ್ದು, ಮುಂದಿನ ತಿಂಗಳಿನಿಂದ ಸಂಬಳವನ್ನು ಹತ್ತು ರೂಪಾಯಿ ಕಡಿಮೆ ಕೊಡಿ ಎಂದು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯುತ್ತಾರೆ. ಅವರ ಸರಳತೆಗೆ, ಪ್ರಾಮಾಣಿಕತೆಗೆ, ಬದ್ಧತೆಗೆ ಇದು ನಿದರ್ಶನ.

ಪದ ತಾಂಬೂಲ:

ಸರ್ಕಾರಿ ಕೆಲಸ ದೇವರ ಕೆಲಸ
ಅನ್ನೋದು ಆ ಕಾಲ
ದೇವರೇ ಬಂದರೂ ಲಂಚ
ತಪ್ಪಿಸಲಾಗದು ಅನ್ನೋದು ಈ ಕಾಲ

ಪೊರಕೆ ಹಿಡಿದು ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡ ಪ್ರಧಾನಿ ನರೇಂದ್ರ ಮೋದಿ

ನವದೆಹಲಿ: ಮಹಾತ್ಮ ಗಾಂಧಿ ಜಯಂತಿ ಹಿನ್ನೆಲೆಯಲ್ಲಿ ಅ.1ರಂದು ಕೇಂದ್ರ ಸರ್ಕಾರ ಆರಂಭಿಸಿದ ಒಂದು ಗಂಟೆಯ ಸ್ವಚ್ಛತಾ ಅಭಿಯಾನಕ್ಕೆ ಭಾರೀ ಬೆಂಬಲ ವ್ಯಕ್ತವಾಗಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಸೇರಿ ಲಕ್ಷಾಂತರ ಜನ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡು ಜಾಗೃತಿ ಮೂಡಿಸಿದರು.

ಕೇಂದ್ರ ವಸತಿ ಹಾಗೂ ನಗರಾಭಿವೃದ್ಧಿ ಸಚಿವಾಲಯದಡಿ "ಏಕ್ ತಾರೀಖ್, ಏಕ್ ಘಂಟಾ, ಏಕ್ ಸಾಥ್" ಅಭಿಯಾನ ಭಾನುವಾರ ಬೆಳಗ್ಗೆ 10 ಗಂಟೆಯಿಂದ 11 ಗಂಟೆವರೆಗೆ ನಡೆಯಿತು. ದೇಶಾದ್ಯಂತ ಬಿಜೆಪಿ ನಾಯಕರು, ಸಾರ್ವಜನಿಕರು ಸೇರಿ ಹಲವರು ಅಭಿಯಾನದಲ್ಲಿ ಪಾಲ್ಗೊಂಡು, ಸ್ವಚ್ಛತೆ ಮೂಲಕ ಜನರಿಗೆ ಅರಿವು ಮೂಡಿಸಿದರು. ಇದರೊಂದಿಗೆ ಮಹಾತ್ಮ ಗಾಂಧೀಜಿ ಅವರಿಗೂ ಸಾರ್ಥಕ ರೀತಿಯಲ್ಲಿ ಗೌರವ ಸಲ್ಲಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಕುಸ್ತಿಪಟು, ಫಿಟ್‌ನೆಸ್ ಇನ್‌ಫ್ಲುಯೆನ್ಸರ್ ಆಗಿರುವ ಅಂಕಿತ ಬೈಯಾನ್‌ಪುರಿಯಾ ಅವರ ಜತೆ ಪಾರ್ಕ್‌ನಲ್ಲಿ ಸ್ವಚ್ಛತಾ ಅಭಿಯಾನವನ್ನು ಕೈಗೊಂಡರು. ಪೊರಕೆ ಹಿಡಿದು ಕಸ ಗುಡಿಸುವ ಜತೆಗೆ, ಕಸವನ್ನು ಹೆಕ್ಕಿ ಡಸ್ಟ್‌ಬಿನ್‌ಗೆ ಹಾಕಿದರು. ಮೋದಿ ಅವರಿಗೆ ಅಂಕಿತ್ ಬೈಯಾನ್‌ಪುರಿಯಾ ಅವರು ಕೂಡ ಕಸ ಹೆಕ್ಕಲು ಸಹಾಯ ಮಾಡಿದರು. ಇದೇ ವೇಳೆ, ನರೇಂದ್ರ ಮೋದಿ ಹಾಗೂ ಅಂಕಿತ್ ಬೈಯಾನ್‌ಪುರಿಯಾ ನಡುವಿನ ಸಂಭಾಷಣೆಯ ವಿಡಿಯೊವನ್ನು ಪ್ರಧಾನಿ ಹಂಚಿಕೊಂಡಿದ್ದಾರೆ.

ದೇಶವು ಇಂದು ಸ್ವಚ್ಛತೆಗೆ ಆದ್ಯತೆ ನೀಡುತ್ತಿದೆ. ನಾನು ಹಾಗೂ ಅಂಕಿತ್ ಬೈಯಾನ್‌ಪುರಿಯಾ ಅವರು ಕೂಡ ಇದನ್ನೇ ಮಾಡಿದೆವು. ಸ್ವಚ್ಛತೆಯ ಜತೆಗೆ ಫಿಟ್‌ನೆಸ್ ಬಗ್ಗೆಯೂ ಚರ್ಚಿಸಿದೆವು.



ಸ್ವಾಸ್ಥ್ಯದ ಬಗ್ಗೆಯೂ ಇಬ್ಬರು ಮಾತನಾಡಿದೆವು. ಸ್ವಚ್ಛತೆ ಹಾಗೂ ಸ್ವಾಸ್ಥ್ಯ ನಮ್ಮ ಮಾತುಕತೆಯ ಕೇಂದ್ರ ಬಿಂದು ಆಗಿತ್ತು ಎಂದಿದ್ದಾರೆ. ಹರಿಯಾಣದವರಾದ ಅಂಕಿತ್ ಬೈಯಾನ್‌ಪುರಿಯಾ, ಸೋನಿಪತ್ ಸೇರಿ ಎಲ್ಲೆಡೆ ಸ್ವಚ್ಛತೆಯ ಕುರಿತು ಜನರಲ್ಲಿ ಜಾಗೃತಿ ಮೂಡಿದೆ ಎಂದರು. ಇಬ್ಬರೂ ಆರೋಗ್ಯ, ಸ್ವಚ್ಛತೆ, ಫಿಟ್‌ನೆಸ್ ಸೇರಿ ಹಲವು ವಿಷಯಗಳ ಕುರಿತು ಮಾತನಾಡಿರುವ ವಿಡಿಯೊವನ್ನು ಕೂಡ ಮೋದಿ ಹಂಚಿಕೊಂಡಿದ್ದಾರೆ.

ಮತ್ತೊಂದೆಡೆ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಉತ್ತರಪ್ರದೇಶ ಸಿಎಂ ಯೋಗಿ ಆದಿತ್ಯನಾಥ್, ಗುಜರಾತ್ ಸಿಎಂ ಭೂಪೇಂದ್ರ ಪಟೇಲ್, ಕೇಂದ್ರ ಸಚಿವ ಅನುರಾಗ್ ಠಾಕೂರ್ ಹಲವು ಸಚಿವರು, ನಾಯಕರು, ಸಂಸದರು, ಶಾಸಕರು ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡರು.

ಇಂದು ಕಿರುರಂಗ ಮಂದಿರದಲ್ಲಿ ಗೊರೂರು ನಾಟಕ ಪ್ರದರ್ಶನ

ಮೈಸೂರು, ಅ.1– ಗಾಂಧಿ ಜಯಂತಿ ಪ್ರಯುಕ್ತ ಅ.2ರ ಸೋಮವಾರ ಸಂಜೆ 7 ಗಂಟೆಗೆ ಮೈಸೂರಿನ ಕಿರುರಂಗ ಮಂದಿರದ ಕಲಾಮಂದಿರದಲ್ಲಿ ನಿರಂತರ ರಂಗ ತಂಡದಿಂದ ಹಿರಿಯ ಗಾಂಧಿ ವಾದಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ನಾಟಕ ಗೊರೂರು ಪ್ರದರ್ಶನವಿದೆ.

ಹಿರಿಯ ಗಾಂಧಿವಾದಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಕನ್ನಡದ ಮಹತ್ವದ ಲೇಖಕರಾಗಿದ್ದು, ಭಾರತೀಯ ಸ್ವಾತಂತ್ರ್ಯ ಚಳುವಳಿಯಿಂದ ಪ್ರಭಾವಿತರಾಗಿದ್ದರು. ಇವರು ಗಾಂಧಿಯವರ ಕಟ್ಟಾ ಅನುಯಾಯಿಗಳಾಗಿದ್ದರು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಬ್ರಿಟಿಷ್ ಆಡಳಿತದಿಂದ 2 ತಿಂಗಳ ಕಾಲ ಜೈಲುವಾಸ ಅನುಭವಿಸಿದರು. 1947ರಲ್ಲಿ ಅವರ ಪುತ್ರ ರಾಮಚಂದ್ರ ಇದೇ ಕಾರಣಕ್ಕೆ ಹುತಾತ್ಮರಾದರು. ಸಾಹಿತ್ಯ ರಚನೆಯಲ್ಲೂ ತಮ್ಮನ್ನು ತೊಡಿಸಿಕೊಂಡಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರರು ಕನ್ನಡ ಸಾಹಿತ್ಯದಲ್ಲಿ ಹಲವು ಮುಖ್ಯ ಕೃತಿಗಳನ್ನು ನೀಡಿದ್ದಾರೆ. 'ಹಳ್ಳಿಯ ಚಿತ್ರಗಳು', 'ನಮ್ಮ ಊರಿನ ರಸಿಕರು' ಪುಸ್ತಕಗಳಿಂದ ತಮ್ಮ ಬರವಣಿಗೆಯನ್ನು ಆರಂಭಿಸಿದ ಗೊರೂರರು ನಂತರ "ಬೂತಯ್ಯನ ಮಗ ಅಯ್ಯು", "ಹೇಮಾವತಿ" ಹಾಗೂ "ಊರ್ವಶಿ" ಕಥನಗಳು ಕನ್ನಡದ ಮಹತ್ವದ ಚಲನಚಿತ್ರಗಳಾಗಿಯೂ ರೂಪುಗೊಂಡಿದೆ. ರಾಮಸ್ವಾಮಿ ಅಯ್ಯಂಗಾರರ ಸಾಹಿತ್ಯಿಕ ಕೊಡುಗೆಗಳನ್ನು ಗುರುತಿಸಿ, 1952ರಲ್ಲಿ ಕರ್ನಾಟಕ ವಿಧಾನಪರಿಷತ್‌ಗೆ ಅವರನ್ನು ನಾಮನಿರ್ದೇಶನ ಮಾಡಲಾಯಿತು. 1971ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ನಿರಂತರ ಫೌಂಡೇಶನ್ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಆಯ್ದ ಬರಹಗಳನ್ನಾಧರಿಸಿದ ಹೊಸ ನಾಟಕವನ್ನು ರಂಗಕ್ಕೆ ಅಳವಡಿಸಿದೆ. ಇಡೀ ನಾಟಕವು ಗೊರೂರಿನ ಮೋಡಿಮಾಡುವ ಜಗತ್ತು ಪರಿಚಯಿಸುತ್ತಲೇ ವೈವಿಧ್ಯಮಯ ಪಾತ್ರಗಳು, ಅವರ ವಿಶಿಷ್ಟತೆಗಳು, ಅನುಭವಗಳು, ಅಲ್ಲಿನ ಸಾಮಾನ್ಯರ ದಿನಚರಿಗಳು ಮತ್ತು ಸುತ್ತಲಿನ ವಾತವರಣವನ್ನು ಪ್ರಸ್ತುತಪಡಿಸುತ್ತಲೇ ಹಲವು ಸೂಕ್ಷ್ಮ ವಿವರಗಳನ್ನು ಪ್ರೇಕ್ಷಕರಿಗೆ ದಾಟಿಸುತ್ತದೆ. ತಮ್ಮ ದೈನಂದಿನ ಜೀವನದಲ್ಲಿ ವಿಚಿತ್ರವಾದ ಸನ್ನಿವೇಶಗಳನ್ನು ಎದುರಿಸುತ್ತಿದ್ದರೂ, ಗೊರೂರಿನ ನಿವಾಸಿಗಳು ಸಾಮರಸ್ಯದಿಂದ ಸಹಬಾಳ್ವೆ ನಡೆಸುತ್ತಲೇ, ಒಟ್ಟಾಗಿ ತಮ್ಮ ಸವಾಲುಗಳನ್ನು ಪರಿಹರಿಸುತ್ತಾರೆ. ಈ ನಾಟಕವು ರಂಗಕರ್ಮಿ ಮಂಜುನಾಥ್ ಎಲ್ ಬಡಿಗೇರ್ ಅವರ ನಿರ್ದೇಶನದಲ್ಲಿ ರೂಪುಗೊಂಡಿದ್ದು, ದಿಗ್ವಿಜಯ್ (ನೀನಾಸಂ) ಸಂಗೀತ ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಬೆಳಕಿನೆಡೆಗೆ...
ಮಹಾತ್ಮ ಗಾಂಧಿಯವರ 154ನೇ ಜನ್ಮದಿನಾಚರಣೆಯ ಶುಭಾಶಯಗಳು
ಗಾಂಧೀಜಿ ಕನಸು
ಕರ್ನಾಟಕದಲ್ಲಿ ನನಸು
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ನುಡಿದಂತೆ ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ
10 kg
ಗೃಹಲಕ್ಷ್ಮಿ
₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 | ₹1500
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ

ಮೈಸೂರು ಮಿತ್ರ ಸೋಮವಾರ 2 ಅಕ್ಟೋಬರ್ 2023

ಜೆಡಿಎಸ್–ಬಿಜೆಪಿ ಮೈತ್ರಿ ಹಿನ್ನೆಲೆ

ಮಂಡ್ಯ ಜೆಡಿಎಸ್ ಅಲ್ಪಸಂಖ್ಯಾತ ಮುಖಂಡರ ಕಥೆ ಏನು..?

ಎಂ.ಕೆ.ಮೋಹನ್‌ರಾಜ್

ಜೆಡಿಎಸ್ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುತ್ತದೆ ಎಂದು ಜೆಡಿಎಸ್ ಅಲ್ಪಸಂಖ್ಯಾತ ಮುಖಂಡರು ನಿರೀಕ್ಷಿಸಿರಲಿಲ್ಲ. ಆದರೆ ಕೋಮುವಾದಿ ಬಿಜೆಪಿ ಜೊತೆಗಿನ ಮೈತ್ರಿಯಿಂದ ಆ ಪಕ್ಷದ ಅಲ್ಪಸಂಖ್ಯಾತರು ಮನನೊಂದಿದ್ದಾರೆ.



ಕೆಲವರು ಪಕ್ಷ ತೊರೆಯುತ್ತಿದ್ದು, ಇನ್ನು ಕೆಲವರು ಅಸಮಾಧಾನ ಹೊರ ಹಾಕುತ್ತಿದ್ದಾರೆ. ಹಾಗೊಂದು ವೇಳೆ ಜಾತ್ಯಾತೀತ ಹಾಗೂ ಧರ್ಮಾತೀತ ಪಕ್ಷವಾದ ಕಾಂಗ್ರೆಸ್‌ಗೆ ಜೆಡಿಎಸ್‌ನಿಂದ ಬರುವವರಿಗೆ ಸ್ವಾಗತವಿದೆ. ಈ ಬಗ್ಗೆ ಡಿ.ಕೆ.ಶಿವಕುಮಾರ್ ಅವರು ಸಹ ಕಾಂಗ್ರೆಸ್‌ಗೆ ಬರುವವರಿಗೆ ಸ್ವಾಗತ ಎಂದಿದ್ದಾರೆ.

– ಅಸಾದುಲ್ಲಾಖಾನ್, ಜಿಲ್ಲಾ ಕಾಂಗ್ರೆಸ್‌ನ ಹಿರಿಯ ಅಲ್ಪಸಂಖ್ಯಾತ ಮುಖಂಡ.

ಮಂಡ್ಯ, ಅ.1– ರಾಜ್ಯದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮುಂಬರುವ ಲೋಕಸಭಾ ಚುನಾವಣೆಗೆ ಮೈತ್ರಿ ಮಾಡಿಕೊಂಡಿದ್ದು, ಇದರಿಂದ ಸಿಡಿದೆದ್ದಿರುವ ಜೆಡಿಎಸ್ ಅಲ್ಪಸಂಖ್ಯಾತ ಸಮುದಾಯದ ಮುಖಂಡರು ತಂಡೋಪ ತಂಡವಾಗಿ ದಳಪತಿಗಳ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪಕ್ಷ ತೊರೆಯುತ್ತಿದ್ದಾರೆ.

ಸ್ವತಃ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹಾಗೂ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಈ ನಿರ್ಧಾರಕ್ಕೆ ಬಹಿರಂಗ ಅಸಮಾಧಾನ ವ್ಯಕ್ತಪಡಿಸಿದ್ದು, ಇತ್ತ ಜೆಡಿಎಸ್‌ನ ಬೇರು ಪ್ರಬಲವಾಗಿರುವ ಮಂಡ್ಯದಲ್ಲಿ ನೂರಾರು ಮಂದಿ ಅಲ್ಪಸಂಖ್ಯಾತ ಮುಖಂಡರಿದ್ದು, ಅವರ ನಡೆ ಏನೆಂಬುದು ಕುತೂಹಲ ಮೂಡಿಸಿದೆ.

ಜಾತ್ಯಾತೀತ ಪಕ್ಷ ಎಂಬ ಹಣೆಪಟ್ಟಿ ಹೊಂದಿರುವ ಜೆಡಿಎಸ್ ಕೋಮುವಾದಿ ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಂಡಿರುವುದು ನಮಗೆ ಇಷ್ಟವಿಲ್ಲ ಎಂದು ಸಿ.ಎಂ. ಇಬ್ರಾಹಿಂ ಸೇರಿದಂತೆ ಜೆಡಿಎಸ್‌ನ ಹಲವು ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜೊತೆಗೆ ಈಗಾಗಲೇ ಪಕ್ಷ ತೊರೆದು ಕಾಂಗ್ರೆಸ್ ಸೇರಲು ಸಹ ಮುಂದಾಗಿದ್ದಾರೆ.

ಇನ್ನು ಜಿಲ್ಲೆಯ ಮಂಡ್ಯ ನಗರ ಸೇರಿದಂತೆ ಜಿಲ್ಲಾದ್ಯಂತ ಹಲವು ಪ್ರಮುಖ ಜೆಡಿಎಸ್ ಮುಖಂಡರಿದ್ದು, ಅವರ ನಡೆ ಏನೆಂಬುದು ಪ್ರಶ್ನೆಯಾಗಿದ್ದು, ಅವರು ಪಕ್ಷ ಬಿಡುತ್ತಾರಾ ಅಥವಾ ಆಯಾ ಕ್ಷೇತ್ರದ ಮಾಜಿ ಶಾಸಕರು ಹಾಗೂ ಪ್ರಮುಖ ಮುಖಂಡರು ಅಲ್ಪಸಂಖ್ಯಾತರ ಮನವೊಲಿಸಿ ಪಕ್ಷದಲ್ಲೇ ಉಳಿಸಿಕೊಳ್ಳುತ್ತಾರಾ ಎಂಬ ಪ್ರಶ್ನೆ ಇದೀಗ ಉದ್ಭವವಾಗಿದೆ.

ಜಫ್ರುಲ್ಲಾಖಾನ್ ನಡೆ ಏನು?: ಜೆಡಿಎಸ್‌ನ ಹಿರಿಯ ಮುಖಂಡ ಮೊಹಮ್ಮದ್ ಜಫ್ರುಲ್ಲಾಖಾನ್ ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಹೆಚ್.ಡಿ.ದೇವೇಗೌಡರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಜಫ್ರುಲ್ಲಾ ಸದ್ಯ ದುಬೈನಲ್ಲಿದ್ದು, ಮೈತ್ರಿ ವಿಚಾರದಲ್ಲಿ ಅವರ ನಡೆ ನಿಗೂಢವಾಗಿದೆ.



2 ದಶಕಗಳಿಂದ ಜೆಡಿಎಸ್‌ನಲ್ಲಿ ಸಕ್ರಿಯವಾಗಿರುವ ಅವರು, ಮಂಡ್ಯ ನಗರಸಭೆ, ಜಿಲ್ಲೆ ಹಾಗೂ ರಾಜ್ಯದ ವಿವಿಧ ಭಾಗದಲ್ಲಿ ಜೆಡಿಎಸ್‌ಗೆ ಒಂದಷ್ಟು ಮತಗಳನ್ನು ಸೆಳೆಯುವ ಕ್ರಿಯಾಶೀಲ ರಾಜಕಾರಣಿಯಾಗಿದ್ದು, ಹಿಂದಿನ ಮೈತ್ರಿ ಸರ್ಕಾರದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದ ಅವರು ಹಾಗೂ ಅವರ ಬೆಂಬಲಿಗರು ದೇವೇಗೌಡರ ಮಾತಿನಂತೆ ಪಕ್ಷದಲ್ಲೇ ಉಳಿದುಕೊಳ್ಳಲಿದ್ದಾರಾ ಅಥವಾ ಪಕ್ಷ ಬಿಡಲಿದ್ದಾರಾ ಎಂಬುದನ್ನು ಕಾದು ನೋಡಬೇಕಿದೆ.

ಇನ್ನು ಮಂಡ್ಯದ ಪ್ರಮುಖ ಮುಖಂಡರಾದ ಜೆಡಿಎಸ್ ಅಲ್ಪಸಂಖ್ಯಾತರ ವಿಭಾಗದ ಜಿಲ್ಲಾಧ್ಯಕ್ಷ ಮಹಮ್ಮದ್ ಅಜ್ಮಲ್, ಹಿರಿಯ ಮುಖಂಡ ಮೊಯಿದ್ದೀನ್, ನಗರಸಭೆ ಮಾಜಿ ಉಪಾಧ್ಯಕ್ಷೆ ಇಶ್ರತ್ ಫಾತೀಮಾ ಸೇರಿದಂತೆ ಇನ್ನು ಅನೇಕರು ಜಫ್ರುಲ್ಲಾಖಾನ್ ಬೆಂಬಲಿಗರಾಗಿದ್ದು, ಜಫ್ರುಲ್ಲಾ ತೆಗೆದುಕೊಳ್ಳುವ ನಿರ್ಧಾರ ಬೆಂಬಲಿಸುವ ಸಾಧ್ಯತೆ ಇದೆ.

ಅದರಂತೆ ಮಳವಳ್ಳಿ ತಾಲೂಕಿನ ಮುಖಂಡ ಮೆಹಬೂಬ್, ನಾಗಮಂಗಲದ ಹಿರಿಯ ಮುಖಂಡ ಸದ್ದಾಂ ಅಲಿ, ಜಾಫರ್, ಮದ್ದೂರಿನ ಆದಿಲ್, ಫೈರಜ್ ಪಾಷಾ, ಶ್ರೀರಂಗಪಟ್ಟಣದ ಗಾಂಜಾ ಕಾಬುಲ್, ಕೆಆರ್.ಪೇಟೆಯ ಗ್ರಾಮ ಅಧ್ಯಕ್ಷ ತನ್ವೀರ್ ಅಹ್ಮದ್ ಸೇರಿದಂತೆ ಇನ್ನು ಪ್ರಮುಖರು ಪಕ್ಷದಲ್ಲಿರುತ್ತಾರೋ ಅಥವಾ ಬೇರೆ ಪಕ್ಷ ಸೇರ್ಪಡೆಯಾಗುತ್ತಾರೋ ಎಂಬುದು ಕುತೂಹಲದಿಂದ ಕೂಡಿದೆ.

ನೀರು ಬಿಡುಗಡೆ ಖಂಡಿಸಿ ಶ್ರೀರಂಗಪಟ್ಟಣದಲ್ಲಿ ಪ್ರತಿಭಟನೆ



ಶ್ರೀರಂಗಪಟ್ಟಣ, ಅ.1– ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ವಿರೋಧಿಸಿ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ಹಾಗೂ ಮಹದೇವಪುರ ಗ್ರಾಮಸ್ಥರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಸಮಿತಿ ಅಧ್ಯಕ್ಷ ಕೃಷ್ಣೇಗೌಡ, ಮುಖಂಡ ಕೆ.ಎಸ್ ನಂಜುಂಡೇಗೌಡರ ನೇತೃತ್ವದಲ್ಲಿ ಪಟ್ಟಣದ ಕುವೆಂಪು ವೃತ್ತದಲ್ಲಿ ಜಮಾಯಿಸಿದ 50ಕ್ಕೂ ಹೆಚ್ಚು ಪ್ರತಿಭಟನಾಕಾರರು ತಾಲೂಕು ಕಚೇರಿವರೆಗೆ ಬೈಕ್ ರ‍್ಯಾಲಿ ನಡೆಸಿ ಕೆಲಕಾಲ ಪ್ರತಿಭಟನೆ ನಡೆಸಿದರು.

ಮುಖಂಡ ಕೆ.ಎಸ್.ನಂಜುಂಡೇಗೌಡ ಮಾತನಾಡಿ, ಸಂವಿಧಾನದಲ್ಲಿ ಎರಡೂ ರಾಜ್ಯಗಳ ನೀರು ಹಂಚಿಕೆ ವಿಷಯವಾಗಿ ನ್ಯಾಯಾಲಯ ಹಾಗೂ ನ್ಯಾಯಾಧೀಕರಣ ಮುಂದೆ ಹೋಗದೆ ಎರಡೂ ರಾಜ್ಯಗಳಿಗೆ ತೊಂದರೆಯಾಗದಂತೆ ಒಂದು ತೀರ್ಮಾನ ಕೈಗೊಳ್ಳಬಹುದು ಎಂದು ಸ್ಪಷ್ಟವಾಗಿ ಉಲ್ಲೇಖಿಸಿದೆ. ಆದರೆ ಸರ್ಕಾರ ಸರಿಯಾಗಿ ಕಾನೂನು ಸಲಹೆ ಪಡೆಯದೆ ಏಕಾಏಕಿ ನೀರು ಹರಿಸುವ ಮೂಲಕ ರಾಜ್ಯದ ಜನರು ಹಾಗೂ ರೈತರನ್ನು ಬಲಿಕೊಟ್ಟಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಎಂ.ವಿ.ಕೃಷ್ಣ, ಮಹದೇವ, ಪ್ರಸನ್ನ, ರಮೇಶ, ಪುಟ್ಟಸ್ವಾಮಿ, ಶಂಕರೇಗೌಡ, ಸೂರಜ್, ಚಂದ್ರ, ವಿಶ್ವೇಶ್ವರ, ಸುನೀಲ್ ಕುಮಾರ್, ಚಂದ್ರೇಗೌಡ, ನಂಜುಂಡ, ಕುಮಾರ್ ಹೇಳಿದಂತೆ ಇನ್ನಿತರರಿದ್ದರು.

ಕಾವೇರಿ ನೀರು ಬಿಡುಗಡೆ ಖಂಡಿಸಿ ರಾಷ್ಟ್ರೀಯ ಪ್ರಜಾಪ್ರಭುತ್ವ ಪಡೆಯಿಂದ

ಮದ್ದೂರಲ್ಲಿ ಪ್ರತಿಭಟನೆ, ಕೆಆರ್‌ಎಸ್ ಮುತ್ತಿಗೆಗೆ ಯತ್ನ

40ಕ್ಕೂ ಹೆಚ್ಚು ಪ್ರತಿಭಟನಾಕಾರರ ಬಂಧನ, ಬಿಡುಗಡೆ



ಮದ್ದೂರು/ಶ್ರೀರಂಗಪಟ್ಟಣ, ಅ.1– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ರಾಷ್ಟ್ರೀಯ ಪ್ರಜಾಪ್ರಭುತ್ವ ಸೇನೆ ಕಾರ್ಯಕರ್ತರು ಮದ್ದೂರಲ್ಲಿ ಪ್ರತಿಭಟನೆ ನಡೆಸಿ, ಕೆಆರ್‌ಎಸ್ ಮುತ್ತಿಗೆ ಹಾಕಲು ಯತ್ನಿಸಿದರು.

ಮದ್ದೂರು: ಪಟ್ಟಣದ ಕೊಲ್ಲಿ ವೃತ್ತದ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಮೆರವಣಿಗೆಯಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪ್ರವಾಸಿ ಮಂದಿರ ಬಳಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಕಾವೇರಿ ಉಳಿಸುವಂತೆ ಆಗ್ರಹಿಸಿದರು.

ಸೇನೆಯ ರಾಜ್ಯಾಧ್ಯಕ್ಷ ರಾಕೇಶ್ ಮದನ್ ಮಾತನಾಡಿ, ರಾಜ್ಯಾದ್ಯಂತ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿದ್ದರೂ ಸರ್ಕಾರ ತಮಿಳುನಾಡಿಗೆ ನೀರು ಹರಿಸುತ್ತಿದೆ. ಇದರಿಂದ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ತೊಂದರೆಯಾಗಲಿದೆ. ಹೀಗಾಗಿ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಮಾರ್ವಾಡಿ, ಗುಜರಾತಿ ಸಂಘದ ನೇತೃತ್ವದಲ್ಲಿ ಕೆಆರ್‌ಎಸ್‌ವರೆಗೂ ತೆರಳಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ತಿಳಿಸಿದ ಅವರು, ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಿ ರೈತರ ಹಿತ ಕಾಯಬೇಕು. ಇಲ್ಲದಿದ್ದರೇ ಸಂಘಟನೆಗಳ ಜೊತೆಗೂಡಿ ಹೆದ್ದಾರಿ ಬಂದ್ ಮಾಡುವ ಜೊತೆಗೆ ಉಗ್ರ ಪ್ರತಿಭಟನೆಗೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಕೆ ನಿಡಿದರು. ಪ್ರತಿಭಟನೆಯಲ್ಲಿ ಪುರಸಭೆ ಮಾಜಿ ಸದಸ್ಯ ಭರತ್ ಕುಮಾರ್, ಹೋರಾಟಗಾರರಾದ ನಿತೇಶ್, ನಿಶಾಂತ್, ವಿನೋದ್, ಸುನಿಲ್, ಸಂತೋಷ್, ರಾಜು, ಶಂಭು, ಪದನ್, ಆಶಿಶ್ ಸೇರಿದಂತೆ ಹಲವರಿದ್ದರು.

ಶ್ರೀರಂಗಪಟ್ಟಣ: ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮ ವಿರೋಧಿಸಿ ಕೆಆರ್‌ಎಸ್‌ಗೆ ಮುತ್ತಿಗೆ ಹಾಕಲು ಯತ್ನಿಸಿದ ರಾಷ್ಟ್ರೀಯ ಪ್ರಜಾಪ್ರಭುತ್ವ ಸೇನೆ ರಾಜ್ಯಾಧ್ಯಕ್ಷ ರಾಕೇಶ್ ಸೇರಿದಂತೆ 40ಕ್ಕೂ ಹೆಚ್ಚು ಕಾರ್ಯಕರ್ತರನ್ನು ಕೆಆರ್‌ಎಸ್ ಪೊಲೀಸರು ಬಂಧಿಸಿ ಬಳಿಕ ಬಿಡುಗಡೆ ಮಾಡಿದರು.

ಕೆಆರ್‌ಎಸ್ ಜಲಾಶಯದ ಸೌತ್‌ಗೇಟ್ ಬಳಿ 2 ಬಸ್‌ಗಳಲ್ಲಿ ಆಗಮಿಸಿ ಜಮಾಯಿಸಿದ ಪ್ರತಿಭಟನಾಕಾರರನ್ನು ಅಣೆಕಟ್ಟೆಗೆ ತೆರಳದಂತೆ ಪೊಲೀಸರು ತಡೆದರು. ಆದರೂ ಮುತ್ತಿಗೆಗೆ ಯತ್ನಿಸಿದ 40ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು, ಬಿಡುಗಡೆಗೊಳಿಸಿದರು.

ಮೇಲುಕೋಟೆ ಚೆಲುವನಿಗೆ ವೈಭವದ ಗರುಡಸೇವೆ



ಮೇಲುಕೋಟೆ, ಅ.1– ಪವಿತ್ರೋತ್ಸವ ಸಮಾರೋಪದ ಅಂಗವಾಗಿ ಭಾನುವಾರ ಚೆಲುವನಾರಾಯಣಸ್ವಾಮಿಗೆ ಗರುಡಸೇವೆ ವೈಭವದಿಂದ ನೆರವೇರಿತು. ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ಗರುಡಾರೂಢನಾದ ಚೆಲುವನ ದರ್ಶನ ಪಡೆದು ಪುನೀತರಾದರು.

ವಾರ್ಷಿಕವಾಗಿ ನಡೆದ ಉತ್ಸವಗಳ ವೇಳೆ ಆಗಿರಬಹುದಾದ ಲೋಪ–ದೋಷಗಳ ಪರಿಹಾರಕ್ಕಾಗಿ ಮೇಲುಕೋಟೆ ದೇವಾಲಯಗಳಲ್ಲಿ ಕಳೆದ ಏಳು ದಿನಗಳ ಕಾಲ ನಡೆದ ಪವಿತ್ರೋತ್ಸವ ಭಾನುವಾರ ಶಾತ್ತಮೊರೈಯೊಂದಿಗೆ ಮುಕ್ತಾಯವಾಯಿತು.

ದೇವಾಲಯದಲ್ಲಿ ದೇವಾನುದೇವತೆಗಳನ್ನು ಆಹ್ವಾನಿಸಿ ಮಂಡಲ ಸ್ಥಾಪಿಸಿ ವಿಧಿವತ್ತಾಗಿ ಪವಿತ್ರೋತ್ಸವ ಆಚರಿಸಲಾಯಿತು. ಇದೇ ವೇಳೆ ಅಮೂಲ್ಯ ರೇಷ್ಮೆಯಿಂದ ತಯಾರಿಸಿದ ಪವಿತ್ರ ಮಾಲೆಗಳಿಂದ ಚೆಲುವನಾರಾಯಣಸ್ವಾಮಿಯನ್ನು ಅಲಂಕರಿಸಲಾಗಿತ್ತು. ಭಕ್ತರಿಗೆ ಇಲ್ಲಿನ ವಿಶಿಷ್ಟ ಪ್ರಸಾದವಾದ ಕದಂಬ, ಸಕ್ಕರೆ ಪೊಂಗಲ್ ಸಮೇತ ಪವಿತ್ರಮಾಲೆಯನ್ನು ವಿತರಿಸಲಾಯಿತು. ಒಂದು ವಾರದಿಂದ ಚೆಲುವನಾರಾಯಣನಿಗೆ ಶೇಷ, ಹನುಮಂತ, ಗಜವಾಹನ, ಚಂದ್ರಮಂಡಲ, ಕುದುರೆ ಹಾಗೂ ಅಂತಿಮವಾಗಿ ಗರುಡ ವಾಹನೋತ್ಸವ ನೆರವೇರಿತು.

ಇಂದು ಅಪ್ಪು ಕಂಚಿನ ಪ್ರತಿಮೆ ಲೋಕಾರ್ಪಣೆ

ಕೆ.ಆರ್.ಪೇಟೆ, ಅ.1– ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಅ.2ರಂದು ಬೆಳಗ್ಗೆ 10 ಗಂಟೆಗೆ ತಾಲೂಕು ಅಪ್ಪು (ಡಾ. ಪುನೀತ್ ರಾಜ್‌ಕುಮಾರ್) ಯುವ ಸಾಮ್ರಾಜ್ಯ ನೇತೃತ್ವದಲ್ಲಿ ದಾನಿಗಳ ಸಹಕಾರದಿಂದ ನಿರ್ಮಿಸಿರುವ ಕಂಚಿನ ಮೂರ್ತಿ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ ಎಂದು ಮೂರ್ತಿ ನಿರ್ಮಾಣ ಸಮಿತಿ ಸಂಚಾಲಕ ಕೆ.ಎಲ್.ಮಹೇಶ್ ತಿಳಿಸಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಮೂರ್ತಿ ಲೋಕಾರ್ಪಣೆ ಮಾಡಲಿದ್ದು, ಕಾರ್ಯಕ್ರಮದಲ್ಲಿ ತಾಲೂಕಿನ ವಿವಿಧ ಗಣ್ಯರು ಹಾಗೂ ಕಿರುತೆರೆ ಮತ್ತು ಚಲನಚಿತ್ರ ನಟ ನಟಿಯರು ಭಾಗವಹಿಸಲಿದ್ದಾರೆ. ಹೀಗಾಗಿ ತಾಲೂಕಿನ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಇಂದು ವಿದ್ಯಾರ್ಥಿ ನಿಲಯದ ನೂತನ ಕಟ್ಟಡ ಉದ್ಘಾಟನೆ

ಮಂಡ್ಯ, ಅ.1– ಜಿಲ್ಲಾಡಳಿತ, ಜಿಪಂ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ನೂತನ ಕಟ್ಟಡ ಉದ್ಘಾಟನಾ ಸಮಾರಂಭವನ್ನು ಅ.2 ರಂದು ಬೆಳಗ್ಗೆ 11 ಗಂಟೆಗೆ ಕೆರೆ ಅಂಗಳದ ವಿವೇಕಾನಂದ ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉಪಸ್ಥಿತರಿರಲಿದ್ದು, ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಜೆಡ್ ಜಮೀರ್ ಅಹ್ಮದ್ ಖಾನ್ ಉದ್ಘಾಟಿಸಲಿದ್ದಾರೆ. ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ ಅಂಬರೀಶ್, ವಿಧಾನಪರಿಷತ್ ಶಾಸಕರಾದ ಮರಿತಿಬ್ಬೇಗೌಡ, ಮಧು ಜಿ. ಮಾದೇಗೌಡ, ದಿನೇಶ್ ಗೂಳಿಗೌಡ ಹಾಗೂ ಶಾಸಕರಾದ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಪಿ.ಎಂ ನರೇಂದ್ರಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ. ಮಂಜು, ಕೆ.ಎಂ.ಉದಯ್ ಸೇರಿದಂತೆ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ.

ಅಗ್ರಹಾರಬಾಚಹಳ್ಳಿಯಲ್ಲಿ ಸ್ವಚ್ಛತಾ ಕಾರ್ಯಕ್ಕೆ ಚಾಲನೆ

ನಿಮ್ಮ ಸುತ್ತಮುತ್ತಲಿನ ಪರಿಸರ ಶುದ್ಧವಾಗಿಟ್ಟುಕೊಳ್ಳಿ: ಪಿಡಿಓ



ಕೆ.ಆರ್.ಪೇಟೆ, ಅ.1– ನಿಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಿಸಬಹುದು ಎಂದು ಅಗ್ರಹಾರಬಾಚಹಳ್ಳಿ ಗ್ರಾಪಂ ಪಿಡಿಓ ಹರ್ಷವರ್ಧನ್ ತಿಳಿಸಿದರು.

ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ವತಿಯಿಂದ ಗ್ರಾಮದ ಅಮೃತೇಶ್ವರ ಹಾಗೂ ಬೋರೆದೇವರ ದೇವಾಲಯದ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮಗಳ ಸ್ವಚ್ಛತೆ, ಹಳ್ಳಿಗಳ ಅಭಿವೃದ್ಧಿ, ಗ್ರಾಮೀಣ ಜನರ ಬದುಕು ಹಸನು ಮಾಡಬೇಕು ಎಂಬುದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಆಶಯವಾಗಿತ್ತು. ಹಾಗಾಗಿ ಅವರ ಜಯಂತಿಯನ್ನು ಶ್ರಮದಾನದ ಮೂಲಕ ಮಹಾತ್ಮನ ಆಶಯ ಈಡೇರಿಸಲು ನಾವೆಲ್ಲಾ ಪ್ರತಿಜ್ಞೆ ಮಾಡಬೇಕು ಎಂದರು.

ಪ್ರತಿಯೊಬ್ಬರೂ ತಮ್ಮ ಮನೆ ಸುತ್ತಮುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಕಡ್ಡಾಯವಾಗಿ ಶೌಚಾಲಯ ಬಳಸಬೇಕು. ಪರಿಸರ ಸ್ವಚ್ಛವಾಗಿದ್ದರೇ ಆರೋಗ್ಯ ಸಮಸ್ಯೆಗಳಿಂದ ದೂರವಿರಬಹುದು ಎಂದ ಅವರು, ನೀರನ್ನು ಹಿತಮಿತವಾಗಿ ಬಳಸಬೇಕು ಎಂದು ಮನವಿ ಮಾಡಿದರು.

ಗ್ರಾಮ ಪಂಚಾಯಿತಿ ಸದಸ್ಯ ಆರ್.ಶ್ರೀನಿವಾಸ್ ಮಾತನಾಡಿ, ಸ್ವಚ್ಛತೆ ಇರುವ ಕಡೆ ದೇವರು ನೆಲೆಸಿರುತ್ತಾನೆ. ಆದ್ದರಿಂದ ಗ್ರಾಮದ ಕೆರೆ, ಬಾವಿ, ಬೀದಿ, ಚರಂಡಿ, ಶಾಲೆ, ದೇವಸ್ಥಾನ, ಅಂಗನವಾಡಿ, ಹಾಲಿನ ಡೇರಿ ಸುತ್ತಮುತ್ತ ಸ್ವಚ್ಛತೆ ಇರುವಂತೆ ನೋಡಿಕೊಳ್ಳಬೇಕು. ಇದಕ್ಕೆ ಗ್ರಾಮದ ಯುವಕರು, ಮಹಿಳಾ ಸಂಘಗಳ ಸದಸ್ಯರು ಸಹಕಾರ ನೀಡಿ ಶ್ರಮದಾನದಲ್ಲಿ ಭಾಗವಹಿಸಿ ಆರೋಗ್ಯವಂತ ಪರಿಸರ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಮದ ಯಜಮಾನ ಲಾಳಿ ಬೋರೇಗೌಡ, ಡಿಇಓ ತ್ರಿವೇಣಿ, ಗ್ರಂಥ ಪಾಲಕಿ ಸೌಮ್ಯ, ಗ್ರಾಪಂ ನೌಕರರಾದ ಕಾಳೇಗೌಡ, ರಮೇಶ್, ಲಿಂಗರಾಜು, ಎ.ಆರ್.ಕುಮಾರ್, ಪ್ರದೀಪ್, ಶಿವಲಿಂಗೇಗೌಡ, ವಾಸು, ರವಿಕುಮಾರ್, ಸಿ.ಎನ್.ಶ್ರೀನಿವಾಸ್, ನಾಗರಾಜು, ಮಂಜೇಗೌಡ, ಅಂಗನವಾಡಿ ಕಾರ್ಯಕರ್ತರಾದ ಎ.ಎನ್.ವಲ್ಲೀದೇವಿ, ಧನಲಕ್ಷ್ಮೀ, ಗೀತಾ, ಗೌರಮ್ಮ, ಶಶಿಕಲಾ, ರೇಣುಕಾ, ನೇತ್ರಾವತಿ ಸೇರಿದಂತೆ ಗ್ರಾಮಸ್ಥರು ಹಾಗೂ ಮಹಿಳಾ ಸಂಘಗಳ ಸದಸ್ಯರು ಇದ್ದರು.

ಮಂಡ್ಯ ಬಳಿ ಕಾಡಾನೆ ಹಿಂಡು ಪ್ರತ್ಯಕ್ಷ

ಮಂಡ್ಯ, ಅ.1– ತಾಲೂಕಿನ ಬೂದನೂರು ಗ್ರಾಮದಲ್ಲಿ 5 ಕಾಡಾನೆಗಳ ಹಿಂಡು ಪ್ರತ್ಯಕ್ಷವಾಗಿದ್ದು, ಜನ ಆತಂಕಗೊಂಡಿದ್ದಾರೆ.



ಚನ್ನಪಟ್ಟಣ ತಾಲೂಕಿನ ಅರಣ್ಯ ಪ್ರದೇಶದಿಂದ ಆಗಮಿಸಿರುವ ಈ ಆನೆಗಳ ಹಿಂಡು ಶನಿವಾರ ರಾತ್ರಿ ಮದ್ದೂರು ತಾಲೂಕಿನ ಅಂಬರಹಳ್ಳಿ ಸಮೀಪದ ಜಮೀನುಗಳಲ್ಲಿ ಕಾಣಿಸಿ ಕೊಂಡಿದ್ದವು. ಆನೆಗಳನ್ನು ಕಾಡಿಗೆ ಅಟ್ಟಲು ಅರಣ್ಯ ಇಲಾಖೆ ಸಿಬ್ಬಂದಿ ಪ್ರಯತ್ನಿಸಿದರಾದರೂ, ಅವು ಕಾಡಿನತ್ತ ಹೋಗದೇ ಹಳೇ ಬೂದನೂರು ಗ್ರಾಮದ ಕಬ್ಬಿನ ಗದ್ದೆಯನ್ನು ಸೇರಿಕೊಂಡಿದ್ದವು. ಮಧ್ಯರಾತ್ರಿವರೆಗೂ ಮಂಡ್ಯ ಅರಣ್ಯ ಇಲಾಖೆ ಎಸಿಎಫ್ ಮಹದೇವಸ್ವಾಮಿ ಮತ್ತು ತಂಡ ಆನೆಗಳನ್ನು ಕಾಡಿಗೆ ಅಟ್ಟಲು ಯತ್ನಿಸಿದರೂ ಅದು ಸಫಲವಾಗಲಿಲ್ಲ. ಇದರಿಂದಾಗಿ ಭಾನುವಾರ ಕಾರ್ಯಾಚರಣೆ ನಡೆಸಲು ನಿರ್ಧರಿಸಿ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದರು. ಭಾನುವಾರ ಬೆಳಗ್ಗೆ ಹೊಸ ಬೂದನೂರು ಗ್ರಾಮದ ಲೆಮನ್ ಗ್ರಾಸ್ ಹೋಟೆಲ್ ಹಿಂಭಾಗದ ಜಮೀನುಗಳಲ್ಲಿ ಕಾಣಿಸಿಕೊಂಡ ಆನೆಗಳನ್ನು ನೋಡಿ ಸಾರ್ವಜನಿಕರು ಅರಣ್ಯ ಇಲಾಖೆಗೆ ವಿಷಯ ಮುಟ್ಟಿಸಿದರು.

ತಕ್ಷಣ ಎಸಿಎಫ್ ಮಹದೇವಸ್ವಾಮಿ ಮತ್ತು ಸಿಬ್ಬಂದಿ ಸ್ಥಳಕ್ಕೆ ಆಗಮಿಸಿದರಾದರೂ ಆನೆಗಳ ಹಿಂಡು, ಕಬ್ಬಿನ ಗದ್ದೆ ಸೇರಿಕೊಂಡ ಕಾರಣ ಅವುಗಳನ್ನು ಕಾಡಿಗೆ ಅಟ್ಟಲು ಸಾಧ್ಯವಾಗಲಿಲ್ಲ. ಸಂಜೆ ಮೇಲೆ ಮತ್ತೆ ಕಾರ್ಯಾಚರಣೆ ನಡೆಸಿ, ಮಳವಳ್ಳಿ ತಾಲೂಕಿನ ಮುತ್ತತ್ತಿ ಅರಣ್ಯ ಪ್ರದೇಶ ಅಥವಾ ಚನ್ನಪಟ್ಟಣ ತಾಲೂಕಿನ ಅರಣ್ಯ ಪ್ರದೇಶಕ್ಕೆ ಅಟ್ಟಲು ನಿರ್ಧರಿಸಲಾಯಿತು. ತಹಸೀಲ್ದಾರ್ ಬಿರಾದಾರ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಇನ್ನು ಅರಣ್ಯಾಧಿಕಾರಿಗಳು ಆನೆಗಳು ಮಂಡ್ಯ ನಗರ ಪ್ರವೇಶಿಸದಂತೆ ಸುತ್ತುವರೆದು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

ಸ್ವಚ್ಛತೆಯೇ ಸೇವೆ ಕಾರ್ಯಕ್ರಮಕ್ಕೆ ಚಾಲನೆ

ಭಾರತೀನಗರ, ಅ.1– ಗಾಂಧಿ ಜಯಂತಿ ಅಂಗವಾಗಿ ಇಲ್ಲಿನ ಗ್ರಾಪಂ ವತಿಯಿಂದ ಆಯೋಜಿಸಿದ್ದ ಸ್ವಚ್ಛತೆಯೇ ಸೇವೆ ಕಾರ್ಯಕ್ರಮಕ್ಕೆ ಮಂಡ್ಯ ಜಿಪಂ ಯೋಜನಾ ನಿರ್ದೇಶಕ ಸಂಜೀವಪ್ಪ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗಾಂಧಿ ಕಂಡ ಗ್ರಾಮ ಸ್ವರಾಜ್ಯದ ಜನಸನ್ನು ನನಸು ಮಾಡಲು ಸರ್ಕಾರ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಕಳೆದ 1 ತಿಂಗಳಿಂದ ಶಾಲೆ, ದೇವಸ್ಥಾನ ಸೇರಿದಂತೆ ಹಲವೆಡೆ ಸ್ವಚ್ಛತಾ ಕಾರ್ಯ ಹಮ್ಮಿಕೊಂಡಿದ್ದೇವೆ. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಸೇರಿದಂತೆ ಎಲ್ಲಾ ಅಧಿಕಾರಿ ವರ್ಗ ಹಾಗೂ ಸಿಬ್ಬಂದಿ, ನಾಗರಿಕ ಬಂಧುಗಳು ಬೀದಿಗಿಳಿದು ಸ್ವಚ್ಛತಾ ಕಾರ್ಯ ಕೈಗೊಂಡು ಅರಿವು ಮೂಡಿಸುತ್ತಿದ್ದಾರೆ ಎಂದರು.

ಜಿಲ್ಲೆಯ ವಿವಿಧೆಡೆ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಅದರಂತೆ ಭಾರತೀನಗರದ ಓಂಶಾಂತಿ ರಸ್ತೆ, ಮದ್ದೂರು–ಮಳವಳ್ಳಿ ಹೆದ್ದಾರಿ ಸೇರಿದಂತೆ ಹಲವೆಡೆ ಶ್ರಮದಾನ ನಡೆಸಲಾಗುತ್ತಿದೆ ಎಂದರು.

ಪಿಡಿಓ ಎನ್.ಸುಧಾ ಮಾತನಾಡಿ, ನಮ್ಮ ಮನೆ, ಕಚೇರಿ ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಸ್ವಚ್ಛತೆ ಮನಸ್ಸಿಗೆ ಸಂಬಂಧಪಟ್ಟ ವಿಷಯ. ಮನಸ್ಸು ಸ್ವಚ್ಛವಾಗಿದ್ದರೆ ನಮ್ಮ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಬಹುದು. ಮನಸ್ಸು ಹಾಗೂ ಪರಿಸರ ಸ್ವಚ್ಛವಾಗಿದ್ದರೆ ದೈಹಿಕವಾಗಿ ಆರೋಗ್ಯವಾಗಿರಬಹುದು ಎಂದರು. ಈ ವೇಳೆ ಜಿಪಂ ಜಿಲ್ಲಾ ಸಮಾಲೋಚಕ ಚನ್ನೇಗೌಡ, ಜೈದೇವ್, ಗ್ರಾಪಂ ಅಧ್ಯಕ್ಷೆ ಕೌಸಲ್ಯ, ಉಪಾಧ್ಯಕ್ಷೆ ಸುವರ್ಣ, ಸದಸ್ಯರಾದ ಕೆ.ಟಿ. ಶ್ರೀನಿವಾಸ್, ವಿನಯ್‌ಕುಮಾರ್, ಸಿ.ವೆಂಕಟೇಶ್, ತಿಬ್ಬಯ್ಯ, ರವಿಚಂದ್ರ ರಾಮಣ್ಣ ವೆಂಕಟೇಶ್, ಗ್ರಾಪಂ ಲೆಕ್ಕಪರಿಶೋಧಕ ಹರೀಶ್, ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರು, ಸ್ವಸಹಾಯ ಸಂಘದ ಪ್ರತಿನಿಧಿಗಳು ಇದ್ದರು.



ಕಾವೇರಿ ಸಮಸ್ಯೆಗೆ ಸಂಕಷ್ಟ ಸೂತ್ರವೇ ಪರಿಹಾರ



ಬೆಂಗಳೂರು: ಕಾವೇರಿ ವಿವಾದ ಇತ್ಯರ್ಥ ಆಗಬೇಕಾದರೆ ಸಂಕಷ್ಟ ಸೂತ್ರ ರಚನೆ ಮಾಡುವುದು ಅವಶ್ಯಕವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸಲಹೆ ನೀಡಿದ್ದಾರೆ.

ಕಾವೇರಿ ವಿವಾದ ವಿಚಾರದಲ್ಲಿ ಬೆಂಗಳೂರಿನಲ್ಲಿ ಮಾತನಾಡಿದ ಅವರು, ಮಳೆ ಕೊರತೆಯಾದಾಗ ಕಾವೇರಿ ಸದ್ದು ಮಾಡುತ್ತದೆ. ಮಳೆಗಾಲ ಕ್ಷೀಣಿಸಿದಾಗ ನೀರಿಗೆ ಒತ್ತಡ ಬರುತ್ತದೆ. ತಮಿಳುನಾಡಿನವರ ಹೇಳಿಕೆಗಳು ಬಹಳಷ್ಟು ವಸ್ತುಸ್ಥಿತಿಗೆ ನಾಚಿಸುವಂತೆ ಇವೆ. ಕರ್ನಾಟಕ ಸರ್ಕಾರ ಈ ವಿಚಾರದಲ್ಲಿ ತೆಗೆದುಕೊಂಡಿರುವ ನಿಲುವನ್ನು ನಾನು ಸಮರ್ಥನೆ ಮಾಡ್ತೀನಿ ಎಂದು ಹೇಳಿದ್ದಾರೆ. ನಾನು ಸಿಎಂ ಆಗಿದ್ದ ಕಾಲದಲ್ಲಿ ಇಂತಹ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು. ಆಗ ಅಂದಿನ ಪ್ರಧಾನಿ ವಾಜಪೇಯಿ ಅವರು ಉಭಯ ರಾಜ್ಯಗಳ ಸಿಎಂಗಳನ್ನು ಕರೆದು ಅನೇಕ ಸಭೆಗಳನ್ನು ಮಾಡಿದ್ದರು. ಆದರೆ ಸಂಧಾನ ಸಭೆಗಳು ವಿಫಲವಾದವು. ಅಂತಿಮವಾಗಿ ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಬೇಕಾಯ್ತು. ರಾಜ್ಯ ಸರ್ಕಾರ ಹಿಂದಿನ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ವೆಂಕಟಾಚಲಯ್ಯ, ನ್ಯಾ. ರವೀಂದ್ರ ಅವರ ಸಲಹೆಗಳನ್ನು ತೆಗೆದುಕೊಂಡು ತಮ್ಮ ಮುಂದಿನ ನಡೆ ಇಡುತ್ತಿದೆ. ಸರ್ಕಾರ ಅದೇ ರೀತಿ ಮುಂದುವರೆಯಬೇಕು ಎಂದು ಸರ್ಕಾರಕ್ಕೆ ಸಲಹೆ ಕೊಟ್ಟಿದ್ದಾರೆ.

ಸಂಕಷ್ಟ ಸೂತ್ರ ರಚಿಸುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಈ ವಿವಾದಕ್ಕೆ ಅಂತಿಮವಾದ ತೆರೆ ಎಳೆಯಬೇಕಾದರೆ ಈ ಸಂಕಷ್ಟ ಸೂತ್ರ ಬರಬೇಕು. 4 ರಾಜ್ಯಗಳ ಸಿಎಂ ಜೊತೆ ಮಾತಾಡಿ ಸಂಕಷ್ಟ ಸೂತ್ರ ರಚನೆ ಮಾಡಬೇಕು. ಸಂಕಷ್ಟ ಸೂತ್ರದ ಚೌಕಟ್ಟಿನಲ್ಲಿ ನದಿ ನೀರು ಹಂಚಿಕೆಯಲ್ಲಿ ಯೋಗ್ಯ ತೀರ್ಮಾನ ಮಾಡಬೇಕು ಎಂದರು.

ಇದೇ ವೇಳೆ ಕಾವೇರಿಗಾಗಿ ಬಂದ್, ಹೋರಾಟ ನಡೆಯುತ್ತಿರೋ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಸ್ವಾಭಾವಿಕವಾಗಿ ಪ್ರತಿಭಟನೆ, ಬಂದ್ ನಡೆಯುತ್ತದೆ. ಸ್ವಯಂಪ್ರೇರಿತವಾಗಿ ಜನರು ಬಂದ್ ಮಾಡುತ್ತಿದ್ದಾರೆ. ಬಂದ್, ಪ್ರತಿಭಟನೆ ಮೂಲಕ ತಮ್ಮ ನಿಲುವನ್ನು ಜನ ಹೇಳುತ್ತಿದ್ದಾರೆ. ಅವರಿಗೆ ಶುಭವಾಗಲಿ ಅಂತ ಹಾರೈಸುತ್ತೇನೆ ಎಂದು ಹೇಳಿದರು. ಇನ್ನೂ ಬಿಜೆಪಿ–ಜೆಡಿಎಸ್ ಮೈತ್ರಿ ವಿಚಾರ ಕುರಿತು ಮಾತನಾಡಿ, ನಾನು ರಾಜಕೀಯದಲ್ಲಿ ಇಲ್ಲ. ಹೀಗಾಗಿ ನನ್ನ ನಿಲುವು ಅಪ್ರಸ್ತುತ ಎಂದರು.

ಶ್ರೀಗಂಧದ ಮರ ಕಳ್ಳ ಸಾಗಾಣಿ ಆರೋಪದ ಮೇಲೆ ಪೋಲೀಸರಿಂದ ತಮಿಳ್ನಾಡಿನ ವಾಚ್ಚತ್ತಿ ಗ್ರಾಮಸ್ಥರ ಮೇಲೆ ದೌರ್ಜನ್ಯ ಪ್ರಕರಣ

18 ಯುವತಿಯರ ಮೇಲೆ ಅತ್ಯಾಚಾರ ಸಂಬಂಧ 215 ಪೊಲೀಸ್, ಅರಣ್ಯ ಸಿಬ್ಬಂದಿಗೆ ಶಿಕ್ಷೆ ಖಾಯಂ

● ಸಂತ್ರಸ್ತ ಮಹಿಳೆಯರಿಗೆ ತಲಾ 10 ಲಕ್ಷ ಪರಿಹಾರ; ಸರ್ಕಾರಿ ಉದ್ಯೋಗ ನೀಡಲು ಮದ್ರಾಸ್ ಹೈಕೋರ್ಟ್ ಆದೇಶ ● 1992ರಲ್ಲಿ ನಡೆದ ಈ ಭೀಬತ್ಸ ಘಟನೆ ಭಾರಿ ಸಂಚಲನ ಮೂಡಿಸಿತ್ತು



ಧರ್ಮಪುರಿ (ತಮಿಳುನಾಡು), ಅ. 1– ಧರ್ಮಪುರಿ ಜಿಲ್ಲೆಯ ಕಾಡಂಚಿನಲ್ಲಿರುವ ವಾಚ್ಚತ್ತಿ ಗ್ರಾಮದ ಮೇಲೆ ದಾಳಿ ನಡೆಸಿ, 18 ಯುವತಿಯರ ಮೇಲೆ ಅತ್ಯಾಚಾರವೆಸಗಿದ ಆರೋಪದ ಮೇರೆಗೆ ತಮಿಳುನಾಡಿನ 215 ಪೊಲೀಸ್ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಶಿಕ್ಷೆ ಖಾಯಂ ಮಾಡಿದ ಮದ್ರಾಸ್ ಹೈಕೋರ್ಟ್ ಸಂತ್ರಸ್ತ ಮಹಿಳೆಯರಿಗೆ ತಲಾ 10 ಲಕ್ಷ ರೂ. ಪರಿಹಾರ ಹಾಗೂ ಸರ್ಕಾರಿ ಉದ್ಯೋಗ ನೀಡುವಂತೆ ಆದೇಶಿಸಿದೆ.

1992ರ ಜೂನ್ 20ರಂದು ನಡೆದಿದ್ದ ಈ ದೌರ್ಜನ್ಯ ಪ್ರಕರಣದಲ್ಲಿ 155 ಅರಣ್ಯ ಇಲಾಖೆ, 108 ಪೊಲೀಸ್ ಇಲಾಖೆ ಹಾಗೂ 6 ಕಂದಾಯ ಇಲಾಖೆ ಅಧಿಕಾರಿಗಳಿಗೆ 2011ರಲ್ಲಿ ಧರ್ಮಪುರಿ ಸೆಷನ್ಸ್ ನ್ಯಾಯಾಲಯ ಶಿಕ್ಷೆ ವಿಧಿಸಿತ್ತು. ಅವರಲ್ಲಿ 12 ಮಂದಿಗೆ ತಲಾ 10 ವರ್ಷ, 5 ಮಂದಿಗೆ ತಲಾ 7 ವರ್ಷ, ಉಳಿದವರಿಗೆ 1ರಿಂದ 3 ವರ್ಷ ಶಿಕ್ಷೆ ವಿಧಿಸಲಾಗಿತ್ತು. ಇದನ್ನು ಪ್ರಶ್ನಿಸಿ 17 ಮಂದಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದು, ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳು ಸೆಷನ್ಸ್ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದಿದ್ದಲ್ಲದೇ, ಸಂತ್ರಸ್ತ ಮಹಿಳೆಯರಿಗೆ ತಲಾ 10 ಲಕ್ಷ ರೂ. ಪರಿಹಾರ ನೀಡಬೇಕು. ಅದರ ಪೈಕಿ ತಲಾ 5 ಲಕ್ಷ ರೂ.ಗಳನ್ನು 17 ಅಪರಾಧಿ ಅಧಿಕಾರಿಗಳಿಂದ ವಸೂಲಿ ಮಾಡಬೇಕು, ಸಂತ್ರಸ್ತ ಮಹಿಳೆಯರಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಸಂತ್ರಸ್ತ ಮಹಿಳೆಯರಲ್ಲಿ ಯಾರಾದರೂ ಮೃತಪಟ್ಟಿದ್ದರೆ ಅವರ ಕುಟುಂಬದವರಿಗೆ ಪರಿಹಾರ ನೀಡಬೇಕು. ಸಂಕಷ್ಟಕ್ಕೀಡಾಗಿದ್ದ ಗ್ರಾಮಕ್ಕೆ ಮೂಲಸೌಕರ್ಯ ಕಲ್ಪಿಸಬೇಕು. ಘಟನೆ ನಡೆದ ವೇಳೆ ಸಂಬಂಧಪಟ್ಟ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿದ್ದವರು, ಜಿಲ್ಲಾ ಎಸ್ಪಿ ಹಾಗೂ ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರಕ್ಕೆ ಆದೇಶ ನೀಡಿದ್ದಾರೆ.

ವಿವರ: 640 ಜನಸಂಖ್ಯೆ ಹೊಂದಿದ್ದ ಕಾಡಂಚಿನಲ್ಲಿರುವ ವಾಚ್ಚತ್ತಿ ಗ್ರಾಮಸ್ಥರು ಶ್ರೀಗಂಧದ ಮರ ಕಡಿದು ಕಳ್ಳ ಸಾಗಾಣಿಕೆ ಮಾಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ 1992ರ ಜೂನ್ 20ರಂದು ಅರಣ್ಯ ಇಲಾಖೆಯ 155, ಪೊಲೀಸ್ ಇಲಾಖೆಯ 108, ಕಂದಾಯ ಇಲಾಖೆಯ 6 ಅಧಿಕಾರಿಗಳು ಸೇರಿದಂತೆ ಒಟ್ಟು 269 ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ, ಗ್ರಾಮದ ಮನೆಗಳು ಹಾಗೂ ಕೆಲವು ಅಡಗುದಾಣಗಳಲ್ಲಿ ಅಡಗಿಸಿಟ್ಟಿದ್ದ ಶ್ರೀಗಂಧ ಮರಗಳನ್ನು ವಶಪಡಿಸಿಕೊಂಡು 90 ಮಹಿಳೆಯರೂ ಸೇರಿದಂತೆ 133 ಮಂದಿಯನ್ನು ಬಂಧಿಸಿದ್ದರು.

ಆದರೆ, ಈ ಕಾರ್ಯಾಚರಣೆ ವೇಳೆ ಅಪ್ರಾಪ್ತರು ಸೇರಿದಂತೆ 18 ಯುವತಿಯರ ಮೇಲೆ ಅತ್ಯಾಚಾರ ಎಸಗಲಾಗಿದೆ. ಮನೆಗಳನ್ನು ಲೂಟಿ ಮಾಡಿದ್ದಲ್ಲದೇ, ಧ್ವಂಸ ಮಾಡಲಾಗಿದೆ. ಜಾನುವಾರುಗಳನ್ನು ಕದಿಯಲಾಗಿದೆ ಎಂದು ಆರೋಪಿಸಿ ಗ್ರಾಮಸ್ಥರ ಪರವಾಗಿ ಸಂಘಟನೆಯೊಂದರ ಮೂಲಕ ಧರ್ಮಪುರಿ ಜಿಲ್ಲೆಯ ಆರೂರು ಪೊಲೀಸ್ ಠಾಣೆಗೆ 1992ರಲ್ಲೇ ದೂರು ಸಲ್ಲಿಸಲಾಯಿತಾದರೂ ಪೊಲೀಸರು, ದೂರನ್ನು ದಾಖಲಿಸಿಕೊಂಡಿರಲಿಲ್ಲ.

ಬಂಧಿತರು ಜೈಲಿನಿಂದ ಬಿಡುಗಡೆ ಹೊಂದಿದ ನಂತರ ಈ ಸಂಬಂಧ ಸಂತ್ರಸ್ತರು ಮದ್ರಾಸ್ ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ ಆದೇಶದ ಮೇರೆಗೆ ಪ್ರಕರಣವನ್ನು 1995ರ ಫೆ. 24ರಂದು ಸಿಬಿಐ ತನಿಖೆಗೆ ಒಳಪಡಿಸಲಾಗಿತ್ತು. ಆ ಸಂದರ್ಭದಲ್ಲಿ ಸಿಬಿಐ ಅಧಿಕಾರಿಗಳು ಎಲ್ಲಾ 269 ಅಧಿಕಾರಿಗಳನ್ನು ಬಂಧಿಸಿ 1996ರಲ್ಲಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಧರ್ಮಪುರಿ ಜಿಲ್ಲಾ ಸೆಷನ್ ನ್ಯಾಯಾಲಯವು 2011ರ ಸೆಪ್ಟೆಂಬರ್ 29ರಂದು ಎಲ್ಲಾ 269 ಅಧಿಕಾರಿಗಳಿಗೂ ಶಿಕ್ಷೆ ವಿಧಿಸಿದ್ದು, ಅವರಲ್ಲಿ ಅತ್ಯಾಚಾರ ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇರೆಗೆ 12 ಮಂದಿಗೆ ತಲಾ 10 ವರ್ಷ, 5 ಮಂದಿಗೆ ತಲಾ 7 ವರ್ಷ ಉಳಿದವರಿಗೆ 1ರಿಂದ 3 ವರ್ಷ ಶಿಕ್ಷೆ ವಿಧಿಸಿ ತೀರ್ಪು ನೀಡಲಾಗಿತ್ತು. ಈ ತೀರ್ಪನ್ನು ಪ್ರಶ್ನಿಸಿ ಗರಿಷ್ಠ ಶಿಕ್ಷೆಗೆ ಗುರಿಯಾಗಿದ್ದ 17 ಮಂದಿ ಅಧಿಕಾರಿಗಳು ಹೈಕೋರ್ಟ್ ಮೊರೆ ಹೋಗಿದ್ದರು. ಈ ಪ್ರಕರಣದ ಗಂಭೀರತೆಯನ್ನು ಪರಿಗಣಿಸಿದ್ದ ಮದ್ರಾಸ್ ಹೈಕೋರ್ಟ್ ಪಿ. ವೇಲುಮುರುಗನ್ ಅವರು ಕಳೆದ ಮಾರ್ಚ್ 4ರಂದು ವಾಚ್ಚತ್ತಿ ಗ್ರಾಮಕ್ಕೆ ಸ್ವತಃ ಭೇಟಿ ನೀಡಿ ಗ್ರಾಮಸ್ಥರಿಂದ ಕೆಲವು ಮಾಹಿತಿಗಳನ್ನು ಪಡೆದ ನಂತರ ತೀರ್ಪನ್ನು ಕಾಯ್ದಿರಿಸಿದ್ದರು. ಪ್ರಕರಣದ ವಿಚಾರಣೆ ಅವಧಿಯಲ್ಲಿ ಆರೋಪಿಗಳಲ್ಲಿ 54 ಮಂದಿ ಮೃತಪಟ್ಟಿದ್ದು, ಉಳಿದ 215 ಮಂದಿಗೂ ಧರ್ಮಪುರಿ ಸೆಷನ್ಸ್ ನ್ಯಾಯಾಲಯದ ನೀಡಿದ್ದ ಶಿಕ್ಷೆಯನ್ನು ಖಾಯಂಗೊಳಿಸಿ ಅಂತಿಮವಾಗಿ ಸೆಪ್ಟೆಂಬರ್ 29ರಂದು ತೀರ್ಪು ನೀಡಿದ್ದಾರೆ.

ಪ್ರಧಾನಿ ಮೋದಿಯವರ 'ಏಕ್ ತಾರೀಕ್, ಏಕ್ ಘಂಟಾ, ಏಕ್ ಸಾಥ್' ಕರೆಯಡಿ

ಮೈಸೂರಲ್ಲಿ ವಿವಿಧ ಸಂಘ-ಸಂಸ್ಥೆಗಳಿಂದ ಸ್ವಚ್ಛತಾ ಅಭಿಯಾನ

●ಕೆರೆ ಆವರಣ, ಚಾಮುಂಡಿಬೆಟ್ಟ, ಆಸ್ಪತ್ರೆ, ಖಾಲಿ ಜಾಗಗಳಲ್ಲಿ ಶ್ರಮದಾನ ●ಜೊತೆ ಜೊತೆಯೇ ಪರಿಸರ ಸಂರಕ್ಷಣೆ ಸಂದೇಶ ಸಾರಿದ ಗಣ್ಯರು


ಮೈಸೂರಿನ ತಿಪ್ಪಯ್ಯನಕೆರೆ ಆವರಣದಲ್ಲಿ ಸ್ವಚ್ಛತಾ ಅಭಿಯಾನ


ಚಾಮುಂಡಿಬೆಟ್ಟದ ನಂದಿ ರಸ್ತೆಯಲ್ಲಿ ಸ್ವಚ್ಛತೆಯಲ್ಲಿ ತೊಡಗಿರುವ ಪರಿಸರ ಪ್ರೇಮಿಗಳು

ಮೈಸೂರು, ಅ.1(ಎಂಟಿವೈ)- ರಾಷ್ಟ್ರಪಿತ ಮಹಾತ್ಮಗಾಂಧಿ ಜಯಂತಿ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದ 'ಏಕ್ ತಾರೀಕ್, ಏಕ್ ಘಂಟಾ, ಏಕ್ ಸಾಥ್' ರಾಷ್ಟ್ರವ್ಯಾಪಿ ಸ್ವಚ್ಛತಾ ಅಭಿಯಾನಕ್ಕೆ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸರ್ಕಾರಿ ಸಂಸ್ಥೆಗಳು ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳು ಈ ಶ್ರಮದಾನದಲ್ಲಿ ಪಾಲ್ಗೊಂಡವು.

ಸ್ವಚ್ಛತೆಗೆ ಆದ್ಯತೆ ನೀಡುವುದರೊಂದಿಗೆ ಶ್ರಮದಾನ ಮಾಡುವ 'ಸ್ವಚ್ಛತಾ ಹಿ ಸೇವಾ' ಅಭಿಯಾನದ ಮೂಲಕ ನಾಳೆ(ಅ.2) ಮಹಾತ್ಮ ಗಾಂಧಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಪ್ರಧಾನಿ ನೀಡಿದ ಕರೆಗೆ ಎಲ್ಲೆಡೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ನಾನಾ ಕಡೆಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ವಿವಿಧ ಸ್ವಚ್ಛತಾ ಪರಿಕರ ಹಿಡಿದು ನೂರಾರು ಮಂದಿ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡು ಶ್ರಮದಾನ ಮಾಡಿದರು. ವಿವಿಧ ಬಡಾವಣೆಗಳು ಮಾತ್ರವಲ್ಲದೆ, ಸರ್ಕಾರಿ ಕಚೇರಿಗಳು, ಸರ್ಕಾರಿ ಆಸ್ಪತ್ರೆಗಳಲ್ಲೂ ಈ ಅಭಿಯಾನ ನಡೆಯಿತು.



ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡ ಸಿಬ್ಬಂದಿ

ಮೃಗಾಲಯದ ವತಿಯಿಂದ ಕೆರೆ ಆವರಣ ಸ್ವಚ್ಛ: ಮೃಗಾಲಯ ಪ್ರಾಧಿಕಾರದ ವತಿಯಿಂದ ರಿಂಗ್ ರಸ್ತೆಯ ಸಮೀಪವಿರುವ ತಿಪ್ಪಯ್ಯನಕೆರೆ ಬಳಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು. ಮೃಗಾಲಯದ ಸಿಬ್ಬಂದಿ, ರಮ್ಮನಹಳ್ಳಿ ಪಟ್ಟಣ ಪಂಚಾಯತ್ ಸಿಬ್ಬಂದಿ, ಪೊಲೀಸ್ ಬಡಾವಣೆ, ಸರ್ದಾರ್ ವಲ್ಲಭಭಾಯ್ ಪಟೇಲ್ ನಗರ ಹಾಗೂ ಸ್ಥಳೀಯ ಬಡಾವಣೆಗಳ ನಿವಾಸಿಗಳು ಇದರಲ್ಲಿ ಪಾಲ್ಗೊಂಡು, ಕೆರೆ ಏರಿ ಸೇರಿದಂತೆ ಸುತ್ತಮುತ್ತ ಬೆಳೆದಿದ್ದ ಕಳೆ, ಮುಳ್ಳಿನ ಗಿಡಗಳನ್ನು ತೆರವುಗೊಳಿಸಿದರಲ್ಲದೆ, ಅಲ್ಲೆಲ್ಲಾ ಜನ ಬಿಸಾಡಿದ್ದ ಪ್ಲಾಸ್ಟಿಕ್ ಹಾಗೂ ನಿರುಪಯುಕ್ತ ವಸ್ತುಗಳನ್ನು ಸಂಗ್ರಹಿಸಿದರು.

ಈ ಸಂದರ್ಭದಲ್ಲಿ ರಮ್ಮನಹಳ್ಳಿ ಪಟ್ಟಣ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ನರಸಿಂಹಮೂರ್ತಿ, ಕಿರಿಯ ಆರೋಗ್ಯ ನಿರ್ವಾಹಕ ಚನ್ನನಾಯಕ, ಸಮಾನಮನಸ್ಕರ ವೇದಿಕೆ ಅಧ್ಯಕ್ಷ ಥಾಮಸ್, ಸ್ಥಳೀಯರಾದ ಮನುಕುಮಾರ್, ಮಾನಸ, ಮೋಹನ ಕುಮಾರ್, ಶಿವಸ್ವಾಮಿ, ಲೀಲಾ ಶಿವಕುಮಾರ್, ಜಿ.ಎಲ್. ತ್ರಿಪುರಾಂತಕ, ಮೋಹನರಾವ್ ಸೇರಿದಂತೆ ಐವತ್ತಕ್ಕೂ ಹೆಚ್ಚು ಪೌರಕಾರ್ಮಿಕ ಸಿಬ್ಬಂದಿ ಪಾಲ್ಗೊಂಡಿದ್ದರು.

ಕೆ.ಆರ್.ಆಸ್ಪತ್ರೆಯಲ್ಲಿ: ಸ್ವಚ್ಛತಾ ಹಿ ಸೇವಾ ಅಭಿಯಾನದ ಅಂಗವಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲೂ ಶ್ರಮದಾನದ ಮೂಲಕ ಸ್ವಚ್ಛತಾ ಅಭಿಯಾನ ನಡೆಸಲಾಯಿತು. ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಹಾಗೂ ಡೈರೆಕ್ಟರ್ ಡಾ.ದಾಕ್ಷಾಯಿಣಿ ನೇತೃತ್ವದಲ್ಲಿ ಹಿರಿಯ ವೈದ್ಯರು, ಉಪನ್ಯಾಸಕರು, ವಿವಿಧ ವಿಭಾಗಗಳ ಮುಖ್ಯಸ್ಥರು, ಸಿಐಎಸ್‌ಎಫ್ ಸಿಬ್ಬಂದಿ, ವಿವಿಧ ಗ್ರೂಪ್ ಸಿಬ್ಬಂದಿ, ಶೇಷಾದ್ರಿಪುರಂ ಕಾಲೇಜು ವಿದ್ಯಾರ್ಥಿಗಳು, ಎನ್‌ಸಿಸಿ ಕೆಡೆಟ್‌ಗಳು ಆಸ್ಪತ್ರೆಯ ಸ್ವಚ್ಛತಾ ಸಿಬ್ಬಂದಿ ಶ್ರಮದಾನದ ಮೂಲಕ ಆಸ್ಪತ್ರೆ ಆವರಣ ಸ್ವಚ್ಛಗೊಳಿಸಿದರು.

ಈ ವೇಳೆ ಆಸ್ಪತ್ರೆಯ ಡೀನ್ ಡಾ.ದಾಕ್ಷಾಯಿಣಿ ಮಾತನಾಡಿ, ಸ್ವಚ್ಛತೆಗೆ ಎಲ್ಲರೂ ಆದ್ಯತೆ ನೀಡಬೇಕು. ಅದರಲ್ಲೂ ಆಸ್ಪತ್ರೆಗಳಲ್ಲಿ ದಾಖಲಾಗಿರುವ ರೋಗಿಗಳನ್ನು ನೋಡಲು ಬರುವ ಸಾರ್ವಜನಿಕರು ಸ್ವಚ್ಛತೆಗೆ ಸಹಕರಿಸಬೇಕು. ಎಲ್ಲೆಂದರಲ್ಲಿ ಉಗುಳುವುದು, ಪ್ಲಾಸ್ಟಿಕ್ ಸೇರಿದಂತೆ ನಿರುಪಯುಕ್ತ ವಸ್ತುಗಳನ್ನು ಬಿಸಾಡುವುದು ಮಾಡಬಾರದು. ಆಸ್ಪತ್ರೆವಾತಾವರಣ ಸ್ವಚ್ಛವಾಗಿಸಲು ಸಿಬ್ಬಂದಿ ಶ್ರಮಕ್ಕೆ ಎಲ್ಲರೂ ಮನ್ನಣೆ ಕೊಡಬೇಕು. ಆಸ್ಪತ್ರೆ ಮಾತ್ರವಲ್ಲದೆ, ತಮ್ಮ ಮನೆಗಳ ಸುತ್ತಮುತ್ತಲಿನ ವಾತಾವರಣ ಸ್ವಚ್ಛವಾಗಿಟ್ಟುಕೊಳ್ಳಲು ಪ್ರಯತ್ನಿಸಬೇಕು. ಸ್ವಚ್ಛತೆ ಇದ್ದರೆ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಸ್ವಚ್ಛತಾ ಅಭಿಯಾನದಲ್ಲಿ 111 ಸಿಐಎಸ್‌ಎಫ್ ಸಿಬ್ಬಂದಿ, 32 ಕಾಲೇಜು ವಿದ್ಯಾರ್ಥಿಗಳು, 70 ಮಂದಿ ವೈದ್ಯಕೀಯ ಸಿಬ್ಬಂದಿ ಸೇರಿದಂತೆ 213 ಮಂದಿ ಪಾಲ್ಗೊಂಡಿದ್ದರು. ಈ ವೇಳೆ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಶೋಭ, ಆರ್‌ಎಂಓ ಡಾ.ನಯಾಜ್ ಪಾಶ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಚಾಮುಂಡಿಬೆಟ್ಟದಲ್ಲೂ ಸ್ವಚ್ಛತೆ: ಚಾಮುಂಡಿಬೆಟ್ಟದ ರಸ್ತೆಗಳಲ್ಲೂ ಭಾನುವಾರ ಬೆಳಗ್ಗೆ ಸ್ವಚ್ಛತಾ ಅಭಿಯಾನ ನಡೆಯಿತು. ಸೈಕಲ್ ಪ್ಯೂರ್ ಅಗರಬತ್ತಿ, ಇಪಿಎಫ್ ಪ್ರಾದೇಶಿಕ ಕಚೇರಿ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ನಂದಿ ಬಳಿ ಹಾಗೂ ಬೆಟ್ಟದ ಮುಖ್ಯ ರಸ್ತೆಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಸಿ ತ್ಯಾಜ್ಯ ಹಾಗೂ ನಿರುಪಯುಕ್ತ ವಸ್ತುಗಳನ್ನು ಸಂಗ್ರಹಿಸಿದರು.

ಈ ವೇಳೆ ಆರ್‌ಎಫ್‌ಓ ಧನ್ಯಶ್ರೀ, ಡಿಆರ್‌ಎಫ್‌ಓ ಸತೀಶ್, ಉರಗ ಸಂರಕ್ಷಕ ಸ್ನೇಕ್ ಶ್ಯಾಮ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಜಲಮೂಲ ಕಾಪಾಡಬೇಕು

ಮೈಸೂರು ಪ್ರಕೃತಿದತ್ತ ನಗರವಾಗಿದ್ದು, ದೇಶದಲ್ಲೇ ಅತ್ಯುತ್ತಮ ಭೌಗೋಳಿಕ ಲಕ್ಷಣ ಹೊಂದಿದೆ. ಇಂತಹ ನಗರವನ್ನು ಸ್ವಚ್ಛವಾಗಿರಿಸುವ ನಿಟ್ಟಿನಲ್ಲಿ ಎಲ್ಲರೂ ಸಂಕಲ್ಪ ಮಾಡಬೇಕು. ಕೆರೆಗಳು ಜಲಮೂಲದ ಪ್ರಮುಖ ತಾಣಗಳಾಗಿದ್ದು, ಅವುಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಮೈಸೂರಿನಲ್ಲಿರುವ ಕೆಲವೇ ದೊಡ್ಡ ಕೆರೆಗಳ ಪೈಕಿ ಚಾಮುಂಡಿಬೆಟ್ಟದ ಮಗ್ಗುಲಲ್ಲಿರುವ ತಿಪ್ಪಯ್ಯನಕೆರೆ ಕೂಡ ಒಂದಾಗಿದೆ. ಪ್ರಾಕೃತಿಕವಾಗಿ ನಿರ್ಮಾಣವಾಗಿರುವ ಕೆರೆ ಸುತ್ತಮುತ್ತ ಸ್ಥಳೀಯರು ಕಸ ಸುರಿಯುತ್ತಿರುವುದು ಬೇಸರದ ವಿಚಾರ. ಎಲ್ಲೆಡೆ ಪರಿಸರದ ಮೇಲೆ ಮಾನವನ ದೌರ್ಜನ್ಯ ಹೆಚ್ಚಾಗುತ್ತಿದೆ. ಇದನ್ನು ತಪ್ಪಿಸಬೇಕು. ಅದಕ್ಕಾಗಿ ಕೆರೆ ಆಸುಪಾಸಿನಲ್ಲಿರುವ ಬಡಾವಣೆಗಳ ನಾಗರಿಕರು ಗರಿಷ್ಠ ಪ್ರಮಾಣದ ಕಾಳಜಿಯನ್ನು ಕೆರೆ ಸಂರಕ್ಷಣೆಗೆ ಮೀಸಲಿಡಬೇಕು.

-ಮಹೇಶ್ ಕುಮಾರ್,
ಮೈಸೂರು ಮೃಗಾಲಯದ
ಕಾರ್ಯನಿರ್ವಾಹಕ ನಿರ್ದೇಶಕ

ಕೆಆರ್‌ಎಸ್ ಹಿನ್ನೀರಲ್ಲಿ ಜಿಪಂ ಸಿಇಓ ಗಾಯತ್ರಿ ನೇತೃತ್ವದಲ್ಲಿ ಸ್ವಚ್ಛತೆ



ಮೈಸೂರು, ಅ.1- 'ಸ್ವಚ್ಛತಾ ಹೀ ಸೇವಾ' ಕಾರ್ಯಕ್ರಮದ ಅಂಗವಾಗಿ ಮೈಸೂರು ತಾಲೂಕಿನ ಆನಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೀನಾಕ್ಷಿಪುರ ಗ್ರಾಮದ ಕೆಆರ್.ಎಸ್ ಹಿನ್ನೀರಿನಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ಅವರ ನೇತೃತ್ವದಲ್ಲಿ ಶ್ರಮದಾನ ನಡೆಸಲಾಯಿತು.

ಈ ವೇಳೆ ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿ, ಇಂದು ಬೆಳಗ್ಗೆ 10 ರಿಂದ 11 ಗಂಟೆವರೆಗೆ ಜಿಲ್ಲೆಯಾದ್ಯಂತ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಶ್ರಮದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಈ ಮೂಲಕ ಗ್ರಾಮಸ್ಥರಲ್ಲಿ ಸ್ವಚ್ಛತೆಯ ಕುರಿತು ಅರಿವು ಮೂಡಿಸಲಾಗಿದೆ ಎಂದರು.

ಗ್ರಾಮೀಣ ಭಾಗದ ಪ್ರತಿಯೊಬ್ಬ ನಾಗರಿಕರು ತಮ್ಮ ಮನೆಯ ಮುಂಭಾಗ ಹಾಗೂ ಅಕ್ಕಪಕ್ಕದ ಸ್ಥಳಗಳಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು. ಎಲ್ಲೆಂದರಲ್ಲಿ ಕಸ ಹಾಕಬಾರದು. ಗ್ರಾಮ ಪಂಚಾಯಿತಿಯ ಕಸ ಸಂಗ್ರಹಿಸುವ ವಾಹನಗಳಲ್ಲೇ ಕಸ ಹಾಕುವ ಮೂಲಕ ಸ್ವಚ್ಛತೆಗೆ ಸಹಕಾರ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ ಗ್ರಾಮದ ಹಿರಿಯರಾದ ಶತಾಯುಷಿ ಕೃಷ್ಣೇಗೌಡ (103), ಪುಟ್ಟರಾಮೇಗೌಡ (83), ಮಾದನಾಯಕ (85), ಸುಬ್ರಮಣಿ (90) ಅವರನ್ನು ಭಾರತೀಯ ಚುನಾವಣಾ ಆಯೋಗದ ಅಭಿನಂದನ ಪತ್ರ ನೀಡುವ ಮೂಲಕ ಸನ್ಮಾನಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನ ಸ್ವಚ್ಛತೆಯ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಈ ವೇಳೆ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ (ಅಭಿವೃದ್ಧಿ) ಡಾ.ಎಂ. ಕೃಷ್ಣರಾಜು, ಮೈಸೂರು ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್. ಗಿರಿಧರ್, ಆನಂದೂರು ಗ್ರಾಮ ಪಂಚಾಯತಿ ಅಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷ ಅನುರಾಧ ಉಮೇಶ್, ಪಿಡಿಓ ಗಿರೀಶ್ ವಿ.ಕೆ, ಕಾರ್ಯದರ್ಶಿ ಅನ್ನಪೂರ್ಣ, ಸ್ವಚ್ಛ ಭಾರತ್ ಮಿಷನ್ ಜಿಲ್ಲಾ ಸಮಾಲೋಚಕರು, ರೈತ ಸಂಘದ ಮುಖಂಡರು, ಗ್ರಾಮಸ್ಥರು, ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು, ಆಶಾ ಕಾರ್ಯಕರ್ತೆಯರು ಹಾಜರಿದ್ದರು.


ಪ್ರಧಾನಿ ನರೇಂದ್ರಮೋದಿ ಅವರ ಕರೆಯ ಮೇರೆಗೆ ಇಂದಿನಿಂದ ಆರಂಭವಾಗಿರುವ ಸ್ವಚ್ಛ ಭಾರತ್ ಅಭಿಯಾನದ ಶ್ರಮದಾನ ಅಂಗವಾಗಿ ಇಂದು ಬೆಳಗ್ಗೆ 7 ಗಂಟೆಗೆ ಮೈಸೂರಿನ ವಾರ್ಡ್ ನಂ.57ರ ಉಮಾಮಹೇಶ್ವರಿ ದೇವಸ್ಥಾನದಲ್ಲಿ ಬಿಜೆಪಿ ವತಿಯಿಂದ ಕೆ.ಆರ್.ಕ್ಷೇತ್ರದ ಶಾಸಕ ಶ್ರೀವತ್ಸ ಮತ್ತು ನಗರಪಾಲಿಕೆ ಸದಸ್ಯರಾದ ಎಂ.ಸಿ.ರಮೇಶ್ ಸ್ವಚ್ಛತಾ ಕಾರ್ಯ ನೆರವೇರಿಸಿದರು. ಈ ಸಂದರ್ಭದಲ್ಲಿ ಬೂತ್ ಅಧ್ಯಕ್ಷರುಗಳು, ಕಾರ್ಯದರ್ಶಿಗಳು, ಪಕ್ಷದ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಸ್ಥಳೀಯರು ಭಾಗವಹಿಸಿದ್ದರು.



ಗಾಂಧಿ ಜಯಂತಿಯ ಮುನ್ನ ದಿನದ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ಹಾಗೂ ಬೃಂದಾವನ ಬಡಾವಣೆಯ 'ಸ್ವಚ್ಛ ಬೃಂದಾವನ ಗ್ರೂಪ್' ವತಿಯಿಂದ ವಾರ್ಡ್ ನಂ.6 ಗೋಕುಲಂ ಬೃಂದಾವನ ಬಡಾವಣೆಯಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಮೈಸೂರು ಮಹಾನಗರ ಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು ಹಾಗೂ ಬೃಂದಾವನ ಬಡಾವಣೆಯ ಸ್ವಚ್ಛ ಬೃಂದಾವನ ಗ್ರೂಪ್ ಅಧ್ಯಕ್ಷ ಸುಧಾಕರ್, ಸದಸ್ಯರೂ ಆದ ಮುಡಾ ಮಾಜಿ ಅಧಿಕಾರಿ ನಟರಾಜ್, ಕುಮಾರಣ್ಣ, ತೇಜನಾಥ್, ಮಲ್ಲಿಕಾರ್ಜುನ್, ಕಾವೇರಪ್ಪ ಶೇಖರ್, ಹೆಲ್ತ್ ಇನ್ಸ್‌ಪೆಕ್ಟರ್ ಮೇಸ್ತ್ರಿ ಬಾಬು ಹಾಗೂ ಪೌರಕಾರ್ಮಿಕರ ಜೊತೆಗೂಡಿ ಸ್ವಚ್ಛತೆ ಮಾಡಲಾಯಿತು.

ಮೈಸೂರಿನ ನ್ಯಾಯಾಲಯದಲ್ಲಿ ಸ್ವಚ್ಛತಾ ಕಾರ್ಯ



ಮೈಸೂರು, ಅ.1(ಬಿಎಲ್‌ಯು)- ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿರುವ 'ಸ್ವಚ್ಛತಾ ಹಿ ಸೇವಾ' ಅಭಿಯಾನಕ್ಕೆ ಮೈಸೂರಿನಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಮೈಸೂರಿನ ಎರಡು ನ್ಯಾಯಾಲಯಗಳಲ್ಲಿ ಇಂದು ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು.

ಮೈಸೂರಿನ ಚಾಮರಾಜ ಮೊಹಲ್ಲಾದ ಕೃಷ್ಣರಾಜ ಬುಲೆವಾರ್ಡ್ ರಸ್ತೆಯ ನ್ಯಾಯಾಲಯದ ಆವರಣದಲ್ಲಿ ಆರಂಭವಾದ ಸ್ವಚ್ಛತಾ ಕಾರ್ಯಕ್ಕೆ 1ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶ ಡಿ.ಪುಟ್ಟಸ್ವಾಮಿ ಅವರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್ ಬಿ.ಜಿ. ಜೊತೆಗೆ ಸಾಂಕೇತಿಕವಾಗಿ ಆವರಣವನ್ನು ಸ್ವಚ್ಛ ಮಾಡುವ ಮೂಲಕ ಸ್ವಚ್ಛತಾ ಹಿ ಸೇವಾ ಅಭಿಯಾನಕ್ಕೆ ಚಾಲನೆ ನೀಡಿದರು.

ನ್ಯಾಯಾಲಯದ ಸಿಬ್ಬಂದಿ, ವಕೀಲರು ಸೇರಿದಂತೆ ನೂರಾರು ಮಂದಿ ಸ್ವಚ್ಛತಾ ಕಾರ್ಯದಲ್ಲಿ ಶ್ರಮದಾನ ಮಾಡಿದರು.

ಮೈಸೂರಿನ ಕೆ.ಜಿ.ಕೊಪ್ಪಲ್ ಬಳಿಯ ಮಳಲವಾಡಿಯ ನ್ಯಾಯಾಲಯದ ಆವರಣದಲ್ಲಿ ಕೂಡ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು. ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶ ವೇಲಾ ಖೋಡೆ ಅವರು ನ್ಯಾಯಾಲಯದ ಆವರಣವನ್ನು ಸಾಂಕೇತಿಕವಾಗಿ ಸ್ವಚ್ಛ ಮಾಡುವ ಮೂಲಕ ಸ್ವಚ್ಛತಾ ಹಿ ಸೇವಾ ಕಾರ್ಯಕ್ಕೆ ಚಾಲನೆ ನೀಡಿದರು.

ನ್ಯಾಯಾಲಯದ ನೌಕರರು, ವಕೀಲರು ಸೇರಿದಂತೆ ನೂರಾರು ಮಂದಿ ನ್ಯಾಯಾಲಯದ ಆವರಣದಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡರು.

ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾಗಿದ್ದ ಪೌರಕಾರ್ಮಿಕರಿಗೆ ಸಿಹಿ ಹಂಚಲಾಯಿತು. ತರುವಾಯ ಅವರಿಗೆ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು ಇನ್ನು ಮುಂದೆ ತಮ್ಮ ಕಚೇರಿಗಳನ್ನು ತಾವೇ ಸ್ವಚ್ಛ ಮಾಡಿಕೊಳ್ಳುವುದಾಗಿ ನ್ಯಾಯಾಲಯದ ಸಿಬ್ಬಂದಿ ಸಂಕಲ್ಪ ಮಾಡಿದರು.


ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಭಾನುವಾರ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು. ಕೇಂದ್ರದ ಯೋಗಪಟುಗಳು ಆಸ್ಪತ್ರೆ ಆವರಣದಲ್ಲಿನ ತ್ಯಾಜ್ಯಗಳನ್ನು ತೆಗೆದು ಆವರಣವನ್ನು ಸ್ವಚ್ಛಗೊಳಿಸಿದರು. ಈ ವೇಳೆ ಯೋಗ ತರಬೇತುದಾರ ಎ.ಎಲ್. ಹೇಮಾ, ಎಂ.ಗಿರೀಶ್ ಯೋಗಪಟುಗಳು, ಆರೋಗ್ಯ ಕೇಂದ್ರದ ಸಿಬ್ಬಂದಿ ಇದ್ದರು.


ಸ್ವಚ್ಛತಾ ಅಭಿಯಾನ ಅಂಗವಾಗಿ ಭಾನುವಾರ ಮೈಸೂರಿನ ವಿಜಯನಗರ ಒಂದನೇ ಹಂತದ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಲಯನ್ಸ್ ಕ್ಲಬ್ ಮೈಸೂರು ಮಿಡ್‌ಟೌನ್ ಜೊತೆಗೂಡಿ ವಿಜಯನಗರದ ಒಂದನೇ ಹಂತದ ಒಂದನೇ ಮುಖ್ಯರಸ್ತೆ, 2ನೇ ಮುಖ್ಯ ರಸ್ತೆ ಹಾಗೂ ಕಾಳಿದಾಸ ರಸ್ತೆಯ ಆಯ್ದ ಭಾಗಗಳಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಉದಯ್‌ಕುಮಾರ್, ನಗರಪಾಲಿಕೆ ಸದಸ್ಯ ಸುಬ್ಬಯ್ಯ, ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ ಗೋಪಾಲಸ್ವಾಮಿ ಇನ್ನಿತರರಿದ್ದರು.

ಮೈಸೂರು ರೈಲ್ವೆ ಅಧಿಕಾರಿಗಳು, ಸಿಬ್ಬಂದಿಯಿಂದ ಯಶಸ್ವಿ ಚಮತ್ಕಾರ

ಕೇವಲ 14 ನಿಮಿಷದೊಳಗೆ 'ವಂದೇ ಭಾರತ್' ರೈಲು ಸ್ವಚ್ಛಮಯ

●ಗುಣಮಟ್ಟದ ರೈಲು ಸೇವೆಗೆ ಭಾರತೀಯ ರೈಲ್ವೆ ಸಜ್ಜು ●ಜಪಾನಿನ '7 ನಿಮಿಷದ ಪವಾಡ' ಮಾದರಿ '14 ನಿಮಿಷದ ಪವಾಡ' ಯಶಸ್ವಿ ಪ್ರಯೋಗ





ಮೈಸೂರು, ಅ.1(ಜಿಎ)-ನೈಋತ್ಯ ರೈಲ್ವೆಯ ಮೈಸೂರು ವಿಭಾಗವು '14 ನಿಮಿಷಗಳ ಪವಾಡ' ಅಭಿಯಾನದಡಿ ಚೆನ್ನೈ- ಮೈಸೂರು- ಚೆನ್ನೈ ವಂದೇ ಭಾರತ್ ರೈಲನ್ನು 14 ನಿಮಿಷದಲ್ಲಿ ಸ್ವಚ್ಛಗೊಳಿಸುವ ಮೂಲಕ ಚಮತ್ಕಾರ ಮೆರೆಯಿತು.

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ದೆಹಲಿ ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ 'ಸ್ವಚ್ಛತಾ ಹಿ ಸೇವಾ' ಅಭಿಯಾನದ ಭಾಗವಾಗಿ '14 ನಿಮಿಷಗಳ ಪವಾಡ' ಯೋಜನೆಯನ್ನು ಉದ್ಘಾಟಿಸಿದರು. ಇದೇ ವೇಳೆ ಏಕಕಾಲದಲ್ಲಿ 29 ಕ್ಕೂ ಹೆಚ್ಚು 'ವಂದೇ ಭಾರತ್' ರೈಲುಗಳಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಅದರಂತೆ ಇಂದು ಮೈಸೂರಿನಲ್ಲಿ ವಿಭಾಗೀಯ ರೈಲ್ವೇ ವ್ಯವಸ್ಥಾಪಕಿ ಶಿಲ್ಪಿ ಅಗರ್ವಾಲ್ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು, ವಂದೇ ಭಾರತ್ ರೈಲಿನ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿದರು.

ಚೆನ್ನೈನಿಂದ ಮೈಸೂರು ರೈಲ್ವೇ ನಿಲ್ದಾಣಕ್ಕೆ ವಂದೇ ಭಾರತ್ ರೈಲು ಮಧ್ಯಾಹ್ನ 12.05ಕ್ಕೆ ಆಗಮಿಸಿತು. ಪ್ರಯಾಣಿಕರು ರೈಲಿನಿಂದ ಇಳಿಯುತ್ತಿದ್ದಂತೆ ಸರ್ವ ಸನ್ನದ್ಧರಾಗಿದ್ದ ಸ್ವಚ್ಛತಾ ಸಿಬ್ಬಂದಿ ರೈಲಿನ 16 ಬೋಗಿಗಳನ್ನು 13.53 ನಿಮಿಷಗಳಲ್ಲಿ ಸ್ವಚ್ಛಗೊಳಿಸುವ ಮೂಲಕ ಪವಾಡವನ್ನೇ ಮಾಡಿದರು. ಈ ವೇಳೆ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಶಿಲ್ಪಿ ಅಗರ್ವಾಲ್ ಚಮತ್ಕಾರ ತೋರಿದ ತಮ್ಮ ಸಿಬ್ಬಂದಿಯ ಚಾಣಾಕ್ಷತನಕ್ಕೆ ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು.

ರೈಲಿನ 16 ಬೋಗಿಯನ್ನು ಸ್ವಚ್ಛಗೊಳಿಸಲು 48 ಸಿಬ್ಬಂದಿ ಮತ್ತು 3 ಮೇಲ್ವಿಚಾರಕರ ನಿಯೋಜನೆ ಮಾಡಲಾಗಿತ್ತು. ಪ್ರತಿಯೊಂದು ಬೋಗಿಗೂ ತರಬೇತಿ ಪಡೆದ 3 ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಅದರಲ್ಲಿ ಒಬ್ಬರು ಕಸ ಸಂಗ್ರಹಿಸಿ, ಹೊರಗಿನ ಕಿಟಕಿ ಗಾಜನ್ನು ಸ್ವಚ್ಛಗೊಳಿಸಿದರೆ, ಮತ್ತೊಬ್ಬರು ಉಪಾಹಾರದ ಮೇಜು ಮತ್ತು ಆಸನಗಳನ್ನು ಶುಚಿಗೊಳಿಸಿ, ನೀರಿನಿಂದ ಒರೆಸಿದರು. ಮೂರನೆಯ ಸಿಬ್ಬಂದಿ ಕಸದಬುಟ್ಟಿ, ಶೌಚಾಲಯದ ಕನ್ನಡಿ ಮತ್ತು ದ್ವಾರಗಳನ್ನು ಸ್ವಚ್ಛಗೊಳಿಸಿದರು.

ಈ ಮೊದಲು, ಚೆನ್ನೈ-ಮೈಸೂರು-ಚೆನ್ನೈ ವಂದೇ ಭಾರತ್ ರೈಲಿನ 16 ಕೋಚ್‌ಗಳನ್ನು ಸ್ವಚ್ಛಗೊಳಿಸಲು ಸುಮಾರು 30-45 ನಿಮಿಷಗಳು ಬೇಕಾಗುತ್ತಿತ್ತು. '14 ನಿಮಿಷಗಳ ಪವಾಡದ ಪರಿಚಯದೊಂದಿಗೆ, ಸ್ವಚ್ಛಗೊಳಿಸುವ ಪ್ರಕ್ರಿಯೆಯು ಈಗ ಸುಸಂಘಟಿತ ಪ್ರಯತ್ನವಾಗಿದೆ. ಸ್ವಚ್ಛತಾ ಸಿಬ್ಬಂದಿ ಕೇವಲ 14 ನಿಮಿಷಗಳಲ್ಲಿ ರೈಲು ನಿರ್ಗಮಿಸುವ ನಿಗದಿತ ಸಮಯದೊಳಗೆ ಉದ್ದೇಶಿತ ಕಾರ್ಯ ಮುಗಿಸಿದರು.

ಈ ನಿಟ್ಟಿನಲ್ಲಿ ಭಾರತೀಯ ರೈಲ್ವೆ ಜಾಗತಿಕ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತ ದಾಪುಗಾಲಿಟ್ಟಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಅನುಸರಿಸುತ್ತಿರುವ ಯೋಜನೆಗಳನ್ನು ಸ್ಫೂರ್ತಿಯಾಗಿ ಪಡೆದುಕೊಳ್ಳುತ್ತಿದೆ. ಅದರಂತೆ ಸಮಯಪ್ರಜ್ಞೆಯುಳ್ಳ ರೈಲು ಸೇವೆಗಳಿಗೆ ಹೆಸರುವಾಸಿಯಾಗಿರುವ ಬುಲೆಟ್ ರೈಲುಗಳನ್ನು ಸ್ವಚ್ಛಗೊಳಿಸಲು ಜಪಾನ್‌ನ ಪ್ರಸಿದ್ಧ '7-ನಿಮಿಷದ ಪವಾಡ' ಈ ಪ್ರಯತ್ನಕ್ಕೆ ಮಾದರಿಯಾಗಿದೆ. ಭಾರತದ ರೈಲು ಸೇವೆಗಳ ದಕ್ಷತೆ ಮತ್ತು ಶುಚಿತ್ವವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಜಪಾನ್‌ನ ಶಿಂಕನ್‌ಸೆನ್ ಶುಚಿಗೊಳಿಸುವ ವಿಧಾನದಿಂದ ವಂದೇ ಭಾರತ್ ರೈಲುಗಳಿಗಾಗಿ '14 ನಿಮಿಷಗಳ ಪವಾಡ' ಸ್ಫೂರ್ತಿ ಪಡೆದಿದೆ.

ಚೆನ್ನೈ-ಮೈಸೂರು-ಚೆನ್ನೈ ವಂದೇ ಭಾರತ್ ರೈಲಿನ '14 ನಿಮಿಷಗಳ ಪವಾಡ' ಸ್ವಚ್ಛತೆ ಕಾರ್ಯ ಮುಕ್ತಾಯವಾದ ನಂತರ ವಿಭಾಗೀಯ ರೈಲ್ವೇ ವ್ಯವಸ್ಥಾಪಕಿ ಶಿಲ್ಪಿ ಅಗರ್ವಾಲ್ ರೈಲಿನ ಒಳಗೆ ಪ್ರವೇಶಿಸಿ, ಇಡೀ ರೈಲಿನ ಸ್ವಚ್ಛತೆ ಪರಿಶೀಲಿಸಿದರು. ನಂತರ ಮಾತನಾಡಿದ ಅವರು, ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರ ನಿರ್ದೇಶನದಂತೆ ಇಂದು ಮೈಸೂರಿನಲ್ಲಿಯೂ '14 ನಿಮಿಷಗಳ ಪವಾಡ' ಮಾಡಲಾಯಿತು. ಇದು ಬಹಳಷ್ಟು ಪ್ರಯೋಜನಕಾರಿಯಾಗಿದ್ದು, ಪ್ರಯಾಣಿಕರು ಸಹಕಾರ ನೀಡಿದರೆ, ಮತ್ತಷ್ಟು ಕಡಿಮೆ ಸಮಯದಲ್ಲಿ ಸ್ವಚ್ಛತೆ ಮಾಡಬಹುದಾಗಿದೆ. ಇಂದಿನಿಂದ ಇದು ನಿರಂತರವಾಗಿ ನಡೆಯಲಿದೆ ಎಂದರು.

ರೈಲು ನಿಲ್ದಾಣದಲ್ಲಿ 'ಏಕ್ ತಾರೀಖ್, ಏಕ್ ಘಂಟಾ, ಏಕ್ ಸಾಥ್'

ಮೈಸೂರು ರೈಲು ನಿಲ್ದಾಣದಲ್ಲಿ 'ಏಕ್ ತಾರೀಕ್, ಏಕ್ ಘಂಟಾ, ಏಕ್ ಸಾಥ್' ಶೀರ್ಷಿಕೆಯಡಿ ಬೃಹತ್ ಸ್ವಚ್ಛತಾ ಶ್ರಮದಾನ ಆಯೋಜಿಸಲಾಗಿತ್ತು. ನೈಋತ್ಯ ರೈಲ್ವೆಯ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರ್ವಾಲ್ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು, ವಿಭಾಗದ ಸಿಬ್ಬಂದಿ, ಬ್ರಹ್ಮಕುಮಾರಿ ಮತ್ತು ಇತರ ಸಂಸ್ಥೆಗಳ ಸ್ವಯಂಸೇವಕರು ಸಾಥ್ ನೀಡಿದರು.

ವಿದ್ಯುತ್ ತಂತಿ ತುಂಡಾಗಿ ಬಿದ್ದು ಐದು ಜಾನುವಾರು ಸಾವು



ಮಡಿಕೇರಿ, ಅ.1– ಪಾಳು ಬಿಟ್ಟಿದ್ದ ಗದ್ದೆಯಲ್ಲಿ ಮೇಯುತ್ತಿದ್ದ ಜಾನುವಾರುಗಳ ಮೇಲೆ ವಿದ್ಯುತ್ ತಂತಿ ತುಂಡಾಗಿ ಬಿದ್ದ ಪರಿಣಾಮ 5 ಜಾನುವಾರುಗಳು ಸಾವನ್ನಪ್ಪಿದ ಘಟನೆ ಪೊನ್ನಂಪೇಟೆ ತಾಲೂಕಿನ ಮತ್ತೂರು ಗ್ರಾಮದಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಆಲೇಮಾಡ ನಾಣಯ್ಯ ಎಂಬವರಿಗೆ ಸೇರಿದ ನಾಲ್ಕು ಹಸು ಮತ್ತು ಒಂದು ಕರು ಮೃತಪಟ್ಟಿದ್ದು, ಸೂಕ್ತ ಪರಿಹಾರ ನೀಡುವಂತೆ ಚೆಸ್ಕಾಂ ಇಲಾಖೆಯನ್ನು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಘಟನೆ ಹಿನ್ನೆಲೆ: ಭಾನುವಾರ ಮಧ್ಯಾಹ್ನದ ವೇಳೆ ಆಲೇಮಾಡ ನಾಣಯ್ಯ ಅವರು ಹಾಲು ಕೊಡುವ ಎರಡು ಹಸು ಸೇರಿ ಒಟ್ಟು 5 ಜಾನುವಾರುಗಳನ್ನು ಪುತ್ತಾಮನೆ ಶ್ರೀನಿವಾಸ್ ಎಂಬುವರ ಪಾಳು ಬಿದ್ದ ಗದ್ದೆಯಲ್ಲಿ ಮೇಯಲು ಬಿಟ್ಟಿದ್ದರು. ಈ ಗದ್ದೆಯ ಮಧ್ಯ ಭಾಗದಲ್ಲೇ ವಿದ್ಯುತ್ ಲೈನ್ ಹಾದು ಹೋಗಿದ್ದು, ತಂತಿ ತುಂಡಾಗಿ ಗದ್ದೆಗೆ ಬಿದ್ದಿದೆ. ಗದ್ದೆಯಲ್ಲಿ ನೀರು ನಿಂತಿದ್ದ ಹಿನ್ನೆಲೆಯಲ್ಲಿ ವಿದ್ಯುತ್ ಹರಿದು ಅಲ್ಲೇ ಮೇಯುತ್ತಿದ್ದ 5 ಜಾನುವಾರುಗಳೂ ಮೃತಪಟ್ಟಿವೆ.

ಘಟನಾ ಸ್ಥಳಕ್ಕೆ ಪೊನ್ನಂಪೇಟೆ ಠಾಣಾಧಿಕಾರಿ ನವೀನ್, ಗೋಣಿಕೊಪ್ಪ ಚೆಸ್ಕಾಂ ವಿಭಾಗದ ಕಿರಿಯ ಅಭಿಯಂತರ ಹೇಮಂತ್, ಕಾನೂರು ಗ್ರಾಮದ ಪಶು ವೈದ್ಯಾಧಿಕಾರಿ ಚಂದ್ರಶೇಖರ್, ವಿರಾಜಪೇಟೆ ಕ್ಷೇತ್ರ ಶಾಸಕ ಪೊನ್ನಣ್ಣ ಅವರ ಸೂಚನೆ ಮೇರೆ ತೀತಮಾಡ ಯಶ್ವಿನ್ ಅವರುಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿದ ಕಿರುಗೂರು ಗ್ರಾಪಂ ಮಾಜಿ ಅಧ್ಯಕ್ಷ ಪುತ್ತಾಮನೆ ಜೀವನ್ ಕಳೆದ 2 ದಿನಗಳ ಹಿಂದೆಯೇ ವಿದ್ಯುತ್ ತಂತಿ ತುಂಡಾಗಿ ಬೀಳುವ ಸಾಧ್ಯತೆ ಇರುವುದಾಗಿ ಪೊನ್ನಂಪೇಟೆ ಚೆಸ್ಕಾಂ ವಿಭಾಗದ ಸಿಬ್ಬಂದಿಗಳಿಗೆ ಮಾಹಿತಿ ನೀಡಲಾಗಿತ್ತು. ಆದರೂ ಲೈನ್ ದುರಸಿ ಮಾಡದೇ ನಿರ್ಲಕ್ಷ್ಯ ವಹಿಸಿರುವುದು ಈ ಘಟನೆಗೆ ಕಾರಣ ಎಂದು ಆರೋಪಿಸಿದರು. ಈ ವೇಳೆ ಮಾತನಾಡಿದ ಚೆಸ್ಕಾಂ ಕಿರಿಯ ಅಭಿಯಂತರ ಹೇಮಂತ್, ಪ್ರಕರಣಕ್ಕೆ ಸಂಬಂಧಿಸಿದಂತೆ ಜಾನುವಾರುಗಳ ಮಾಲೀಕರಿಗೆ ಸೂಕ್ತ ಪರಿಹಾರವನ್ನು ನೀಡಲಾಗುತ್ತದೆ ಎಂದರು. ಈ ವೇಳೆ ಗ್ರಾಮಸ್ಥರಾದ ಅಪ್ಪಯ್ಯ, ಆಲೇಮಾಡ ರಮೇಶ್, ಚೀರಂಡ ಕಿಟ್ಟು, ವಿಠಲ ಮತ್ತಿತರರು ಹಾಜರಿದ್ದರು.

ಕೊಡಗಿನಲ್ಲಿ 'ಸ್ವಚ್ಛತಾ ಹೀ ಸೇವಾ' ಅಭಿಯಾನ



ಮಡಿಕೇರಿ, ಅ.1– ನಮ್ಮ ಸುತ್ತ ಮುತ್ತಲಿನ ಪರಿಸರದ ಸ್ವಚ್ಛತೆಯನ್ನು ಕಾಪಾಡುವುದು ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕನ ಕರ್ತವ್ಯ ಎಂದು ಕೊಡಗು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಅವರು ತಿಳಿಸಿದರು.

ಕೊಡಗು ಜಿಲ್ಲಾ ಪಂಚಾಯತ್, ಸ್ವಚ್ಛ ಭಾರತ್ ಮಿಷನ್(ಗ್ರಾ) ವತಿಯಿಂದ ಭಾನುವಾರ ಸ್ವಚ್ಛತಾ ಹೀ ಸೇವಾ ಅಭಿಯಾನದ ಅಂಗವಾಗಿ ನಗರದ ಅಬ್ಬಿಫಾಲ್ಸ್ ಸಮೀಪ ನಡೆದ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ನಮ್ಮ ಬದುಕಿನಲ್ಲಿ ಸ್ವಚ್ಛತೆ ಬಹು ಮುಖ್ಯವಾಗಿದೆ. ನಮ್ಮ ಮನೆ ಮಾತ್ರವಲ್ಲದೇ ಸುತ್ತ–ಮುತ್ತಲಿನ ಪರಿಸರದಲ್ಲಿಯೂ ನಾವು ಸ್ವಚ್ಛತೆಯನ್ನು ಕಾಪಾಡಬೇಕು. ಇದರಿಂದ ಉತ್ತಮ ಆರೋಗ್ಯದ ಜೊತೆಗೆ ನಮ್ಮ ಪರಿಸರವೂ ಸಹ ಸುಂದರವಾಗಿರುತ್ತದೆ ಎಂದರು.

ಪ್ರಧಾನಮಂತ್ರಿಗಳ ಆಶಯದಂತೆ ದೇಶಾದ್ಯಂತ ಅಕ್ಟೋಬರ್ 1ರ ಭಾನುವಾರ ಬೆಳಗ್ಗೆ 10 ಗಂಟೆಯಿಂದ 11 ಗಂಟೆಯವರೆಗೆ ಒಂದು ಗಂಟೆಗಳ ಕಾಲ ಶ್ರಮದಾನ ಮಾಡಲಾಗಿದೆ. ಇದರ ಅಂಗವಾಗಿ ಅಬ್ಬಿ ಜಲಪಾತದ ಬಳಿ ಜಿಲ್ಲಾ ಮಟ್ಟದಲ್ಲಿ ಬೃಹತ್ ಸ್ವಚ್ಛತಾ ಆಂದೋಲನ ಹಮ್ಮಿಕೊಳ್ಳಲಾಗಿದೆ. ಅದೇ ರೀತಿ ಜಿಲ್ಲೆಯ 103 ಗ್ರಾಮ ಪಂಚಾಯಿತಿಗಳಲ್ಲಿಯೂ ಏಕಕಾಲದಲ್ಲಿ ಶ್ರಮದಾನ ಕಾರ್ಯಕ್ರಮ ಜರುಗಿದೆ ಎಂದು ತಿಳಿಸಿದರು.

ಇದೇ ವೇಳೆ ಅಂಗಡಿ ಮಾಲೀಕರು ಜವಾಬ್ದಾರಿಯುತವಾಗಿ ಕಸವನ್ನು ಸಂಗ್ರಹಿಸಿ, ಸ್ವಚ್ಛತೆಯನ್ನು ಕಾಪಾಡಬೇಕು. ಯಾವುದೇ ಅಂಗಡಿಗಳ ಮಾಲೀಕರು ಸ್ವಚ್ಛತೆ ಕಾಪಾಡದೆ ಎಲ್ಲೆಂದರಲ್ಲಿ ಕಸ ವಿಲೇವಾರಿ ಮಾಡಿದಲ್ಲಿ ಅಂತಹವರ ಟೆಂಡರನ್ನು ರದ್ದುಪಡಿಸಲಾಗುವುದು ಎಂದು ಜಿಪಂ ಸಿಇಓ ಅವರು ಎಚ್ಚರಿಕೆ ನೀಡಿದರು.

ಜಿಪಂ ಉಪಕಾರ್ಯದರ್ಶಿ ಜಿ.ಧನರಾಜು ಅವರು ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಸ್ವಚ್ಛತೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ 1 ಗಂಟೆಗಳ ಕಾಲ ಶ್ರಮದಾನ ಮಾಡಿ ಜನಸಾಮಾನ್ಯರಲ್ಲಿ ಮತ್ತು ಪ್ರವಾಸಿಗರಲ್ಲಿ ಸ್ವಚ್ಛತೆಯ ಕುರಿತು ಅರಿವು ಮೂಡಿಸಲಾಗಿದೆ.

ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರೂ ಸಹ ಪ್ಲಾಸ್ಟಿಕ್ ಬಾಟಲಿ, ಮುಂತಾದ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯದೆ ಈಗಾಗಲೇ ಇರಿಸಿರುವ ಕಸದ ಬುಟ್ಟಿಯಲ್ಲಿಯೇ ಹಾಕಬೇಕು ಎಂದು ತಿಳಿಸಿದರು. ಮಡಿಕೇರಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಶೇಖರ್ ಅವರು ಸ್ವಚ್ಛತಾ ಹೀ ಸೇವಾ ಪಾಕ್ಷಿಕ ಜನ ಜಾಗೃತಿ ಕಾರ್ಯಕ್ರಮದ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಒಂದು ಗಂಟೆಗಳ ಕಾಲ ನಡೆದ ಶ್ರಮದಾನದಲ್ಲಿ ಸಾರ್ವಜನಿಕರು ಮತ್ತು ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಮಾಹಿತಿ ಪಡೆದರು.

ಕೆ.ನಿಡುಗಣೆ ಗ್ರಾಪಂನ ಅಧ್ಯಕ್ಷೆ ಪಾರ್ವತಿ ಮತ್ತು ಸದಸ್ಯರು, ಜಿ.ಪಂ. ಮುಖ್ಯ ಲೆಕ್ಕಾಧಿಕಾರಿ ಝೀವಲ್ ಖಾನ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರ ಸುರೇಶ್ ಕುಮಾರ್, ಗ್ರಾ.ಪಂ ಪಿಡಿಓ ದಿನೇಶ್, ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಜಿಲ್ಲಾ ಸಮಾಲೋಚಕರು, ಗ್ರಾಪಂ ಸಿಬ್ಬಂದಿಗಳಿದ್ದರು.

ಕುಶಾಲನಗರದ ವಿವಿಧೆಡೆ ಬಿಜೆಪಿ ಕಾರ್ಯಕರ್ತರಿಂದ ಸ್ವಚ್ಛತಾ ಕಾರ್ಯ

ಕುಶಾಲನಗರ, ಅ.1– ಪಟ್ಟಣದ ವಿವಿಧೆಡೆ ನಡೆದ ಸ್ವಚ್ಛತಾ ಆಂದೋಲನದಲ್ಲಿ ಮಾಜಿ ಶಾಸಕ ಅಪ್ಪಚ್ಚುರಂಜನ್ ಪಾಲ್ಗೊಂಡು ಶ್ರಮದಾನ ನಡೆಸಿದರು.

ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ಸ್ವಚ್ಛತಾ ಆಂದೋಲನ ಮತ್ತು ಜಾಗೃತಿ ಕಾರ್ಯಕ್ರಮದ ಅಂಗವಾಗಿ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ, ಗಣಪತಿ ದೇವಾಲಯ ಬಳಿ, ಐಬಿ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಈ ಸಂದರ್ಭ ಮಾತನಾಡಿದ ಅಪ್ಪಚ್ಚುರಂಜನ್, ಗಾಂಧಿ ಜಯಂತಿಗೆ ಒಂದು ದಿನ ಮುಂಚಿತವಾಗಿ ಪಕ್ಷದ ವತಿಯಿಂದ ಎಲ್ಲೆಡೆ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳುವಂತೆ ಪ್ರಧಾನಿ ಮೋದಿ ಅವರು ನೀಡಿದ ಕರೆಯಂತೆ ಕುಶಾಲನಗರದಲ್ಲಿ ಇಂದು ಸ್ವಚ್ಛತಾ ಕಾರ್ಯ ನಡೆಸಲಾಯಿತು. ಈ ಮೂಲಕ ಬೀದಿಬದಿಯಲ್ಲಿ ಕಸ ಹರಡದಂತೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದರು. ಕುಶಾಲನಗರ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಪುರಾತನ ಕಾಲದ ಹಳೆಯ ಸೇತುವೆಯನ್ನು ಕೂಡ ಸಂರಕ್ಷಿಸಿ ಸ್ಮಾರಕವಾಗಿಸುವ ಕೆಲಸ ಅಗತ್ಯವಾಗಿ ಆಗಬೇಕಿದೆ ಎಂದರು. ಈ ಸಂದರ್ಭ ಬಿಜೆಪಿ ಪ್ರಮುಖರಾದ ಉಮಾಶಂಕರ್, ಪುಂಡರೀಕಾಕ್ಷ, ಅಮೃತ್ ರಾಜ್, ಕುಮಾರಪ್ಪ, ನಾರಾಯಣ್, ವರದ, ಸೋಮಶೇಖರ್, ವೈಶಾಖ್, ಪ್ರವೀಣ್, ದಿನೇಶ್, ಪ್ರಶಾಂತ್, ಮಂಜು, ಪ್ರವೀಣ್, ರವಿ, ಕುಮಾರಸ್ವಾಮಿ, ಸುಮನ್ ಮತ್ತಿತರರು ಇದ್ದರು.



ಚಿರತೆ ದಾಳಿಗೆ ಕುರಿ ಬಲಿ



ಸುಂಟಿಕೊಪ್ಪ, ಅ.1– ಕೊಟ್ಟಿಗೆಯಲ್ಲಿ ಕಟ್ಟಿ ಹಾಕಲಾಗಿದ್ದ ಕುರಿಯ ಮೇಲೆ ಚಿರತೆ ದಾಳಿ ನಡೆಸಿ ಕೊಂದು ಹಾಕಿರುವ ಬಗ್ಗೆ ವರದಿಯಾಗಿದೆ.

ಗರಗಂದೂರು ಮೊರಾರ್ಜಿ ದೇಸಾಯಿ ಪಿ.ಯು ವಸತಿ ಕಾಲೇಜಿನ ಬಳಿ ಶನಿವಾರ ಮಧ್ಯರಾತ್ರಿ 12 ಗಂಟೆ ವೇಳೆಗೆ ಚಿರತೆಯೊಂದು ಗೋಚರಿಸಿದೆ ಎನ್ನಲಾಗಿದೆ. ಉಮ್ಮರ್ ಖಾನ್ ಎಂಬವರಿಗೆ ಸೇರಿದ ಕುರಿಯನ್ನು ಕೊಟ್ಟಿಗೆಯಲ್ಲಿ ಕಟ್ಟಿ ಹಾಕಲಾಗಿದ್ದು ಚಿರತೆ ಕುರಿಯ ಮೇಲೆ ದಾಳಿ ನಡೆಸಿ ಕೊಂದು ಹಾಕಿದೆ. ಚಿರತೆಯ ದಾಳಿಗೆ ಬೆದರಿದ ಕೊಟ್ಟಿಗೆಯಲ್ಲಿದ್ದ ದನ ಕರುಗಳು ಚೀರಿಕೊಳ್ಳಲು ಆರಂಭಿಸಿದಾಗ ಚಿರತೆ ಅಲ್ಲಿಂದ ಕಾಲ್ಕಿತ್ತಿದೆ. ಈ ಘಟನೆಯಿಂದ ಮೊರಾರ್ಜಿ ದೇಸಾಯಿ ಪಿಯು ವಸತಿ ಕಾಲೇಜು ವಿದ್ಯಾರ್ಥಿಗಳು ಹಾಗೂ ಆ ಭಾಗದ ನಿವಾಸಿಗಳಲ್ಲಿ ಆತಂಕ ಸೃಷ್ಟಿಸಿದೆ. ಕೂಡಲೇ ಚಿರತೆಯನ್ನು ಸೆರೆ ಹಿಡಿಯುವಂತೆ ಇಲ್ಲಿನ ನಿವಾಸಿಗಳು ಒತ್ತಾಯಿಸಿದ್ದಾರೆ. ಘಟನಾ ಸ್ಥಳಕ್ಕೆ ಅರಣ್ಯಾಧಿಕಾರಿ ಜಗದೀಶ್, ಪಶು ವೈದ್ಯಾಧಿಕಾರಿ ಬಾದಾಮಿ ಭೇಟಿ ನೀಡಿ, ಪರಿಶೀಲಿಸಿದರು. ಈ ಸಂದರ್ಭ ಹರದೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪೂರ್ಣಿಮಾ, ಉಪಾಧ್ಯಕ್ಷ ಸಲೀಂ, ಸದಸ್ಯ ರಮೇಶ, ಕಾಂಗ್ರೆಸ್ ಓಬಿಸಿ ಅಧ್ಯಕ್ಷ ಸುಂದರ ಅವರುಗಳು ಹಾಜರಿದ್ದರು.

ರಸ್ತೆ ಡಿವೈಡರ್‌ಗೆ ಕಾರು ಡಿಕ್ಕಿ: ಯುವಕ ಸಾವು

ಕುಶಾಲನಗರ, ಅ.1– ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಡಿವೈಡರ್‌ಗೆ ಕಾರು ಡಿಕ್ಕಿಯಾದ ಪರಿಣಾಮ ಯುವಕ ಮೃತಪಟ್ಟಿರುವ ಘಟನೆ ಕೊಣನೂರಿನಲ್ಲಿ ನಡೆದಿದೆ. ಶಿರಂಗಾಲ ಗ್ರಾಮದ ಮಂಜುನಾಥ್ ಎಂಬುವವರ ಪುತ್ರ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಡ್ರೈವರ್ ಆಗಿದ್ದ ರಂಜಿತ್ (25) ಅಪಘಾತದಲ್ಲಿ ಮೃತಪಟ್ಟಿದ್ದು, ಈತ ಒಂದು ವಾರದ ರಜೆಯ ಮೇಲೆ ಸ್ವಗ್ರಾಮ ಶಿರಂಗಾಲಕ್ಕೆ ಆಗಮಿಸಿದ್ದರು. ಶನಿವಾರ ರಾತ್ರಿ ಶಿರಂಗಾಲದಿಂದ ಕೊಣನೂರಿಗೆ ಹೋಗುತ್ತಿದ್ದ ವೇಳೆ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ತಲೆಭಾಗಕ್ಕೆ ತೀವ್ರ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಈ ಕುರಿತು ಕೊಣನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೀತೆ ರಚನೆಕಾರ ಶಶಿರಾಜ್ ಕಾವೂರ್‌ಗೆ ಬಸವಶ್ರೀ ಪ್ರಶಸ್ತಿ



ವಿರಾಜಪೇಟೆ, ಅ.1– ಹಬ್ಬ ಹರಿದಿನಗಳನ್ನು ಒಗ್ಗಟ್ಟಿನಿಂದ ಶಾಂತಿಯುತವಾಗಿ ಆಚರಿಸುವಂತಾಗಬೇಕು. ಇದಕ್ಕೆ ಪೊಲೀಸ್ ಇಲಾಖೆಯ ಸಹಕಾರವು ಅಗತ್ಯ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ನಗರದ ಜೈನರ ಬೀದಿಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದ ಶ್ರೀ ಗೌರಿ ಗಣೇಶೋತ್ಸವ ಸಮಾರೋಪ ಸಮಾರಂಭದಲ್ಲಿ 'ಕಾಂತಾರ' ಚಲನಚಿತ್ರದ 'ವರಾಹ ರೂಪಂ' ಹಾಡು ರಚಿಸಿದ ಸಾಹಿತಿ ಶಶಿರಾಜ್ ರಾವ್ ಕಾವೂರು ಅವರಿಗೆ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಗಣೇಶೋತ್ಸವ ಸಮಿತಿಗಳು ಸಾಂಸ್ಕೃತಿಕ ಮತ್ತು ಮನೋರಂಜನೆ ಕಾರ್ಯಕ್ರಮ ಹಮ್ಮಿಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ಕಲಾವಿದರಿಗೆ ವೇದಿಕೆಯ ಅವಕಾಶ ದೊರಕಿದಂತಾಗುತ್ತದೆ ಎಂದರು.

ಪ್ರಶಸ್ತಿ ಸ್ವೀಕರಿಸಿ, ಮಾತನಾಡಿದ ಶಶಿರಾಜ್ ರಾವ್ ಕಾವೂರು, ವಿರಾಜಪೇಟೆ ಶಾಸಕರಿಂದ ಬಸವೇಶ್ವರ ದೇವಸ್ಥಾನದಲ್ಲಿ ಬಸವಶ್ರೀ ಪ್ರಶಸ್ತಿ ಪಡೆದುಕೊಂಡಿರುವುದು ತುಂಬಾ ಸಂತಸವಾಗಿದೆ. ಬಸವೇಶ್ವರ ದೇವಸ್ಥಾನದ ಗೌರಿ–ಗಣೇಶ ಉತ್ಸವ ಸಮಿತಿ ಅಧ್ಯಕ್ಷರೂ ಆದ ಹಿರಿಯ ವಕೀಲ ಎನ್.ಜಿ. ಗೋಪಾಲಕೃಷ್ಣ ಕಾಮತ್ ಅಧ್ಯಕ್ಷತೆ ವಹಿಸಿ, ಶಾಸಕ ಎ.ಎಸ್.ಪೊನ್ನಣ್ಣರನ್ನು ಸನ್ಮಾನಿಸಿದರು. ವೇದಿಕೆಯಲ್ಲಿ ಗೌರಿ ಗಣೇಶ ಜನೋತ್ಸವ ಸಮಿತಿಯ ಗೌರವ ಅಧ್ಯಕ್ಷ ಕೆ.ಸಿ.ಶಭರೀಶ್, ಮೂಸೂರಿನ ದಿಲೀಪ್ ಶೇಠ್, ವಕೀಲ ಡಿ.ಸಿ.ಧ್ರುವಕುಮಾರ್, ದೇವಸ್ಥಾನ ಸಮಿತಿಯ ಸಂಪತ್ ಕುಮಾರ್, ಪುಷ್ಪರಾಜ್ ಉಪಸ್ಥಿತರಿದ್ದರು. ವಕೀಲ ನರೇಂದ್ರ ಕಾಮತ್ ಸ್ವಾಗತಿಸಿ ನಿರೂಪಿಸಿದರು. ನಂತರ ತರೀಕೆರೆ ಗೀತಾಂಜಲಿ ಆರ್ಕೆಸ್ಟ್ರಾ ಇವರಿಂದ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಿತು.

ಭಾಗಮಂಡಲದಲ್ಲಿ ವಾಹನಗಳ ದಟ್ಟಣೆ



ನಾಪೋಕ್ಲು, ಅ.1– ಭಾಗಮಂಡಲದ ಮೇಲ್ಸೇತುವೆ ಕಾಮಗಾರಿಯಿಂದಾಗಿ ಜನರು ಬವಣೆ ಪಡುವಂತಾಗಿದೆ. ಭಾನುವಾರ ಅಧಿಕ ಸಂಖ್ಯೆಯ ಪ್ರವಾಸಿಗರು ಭಾಗಮಂಡಲ ಹಾಗೂ ತಲಕಾವೇರಿ ಕ್ಷೇತ್ರಗಳಿಗೆ ಭೇಟಿ ನೀಡಿದ್ದು ಭಾಗಮಂಡಲದಲ್ಲಿ ವಾಹನಗಳ ದಟ್ಟಣೆ ಉಂಟಾಯಿತು. ವಾಹನಗಳು ಚಲಿಸಲಾರದೆ ಸವಾರರು ಪರದಾಡಿದರು. ಕಾವೇರಿ ತೀರ್ಥೋತ್ಸವದ ದಿನಗಳು ಸಮೀಪಿಸುತ್ತಿದ್ದು ಜಾತ್ರೆಯ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಬಿಗಡಾಯಿಸಲಿದ್ದು ವಾಹನದಟ್ಟಣೆ ನಿಯಂತ್ರಿಸಲು ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಇಂದು ಗಾಂಧಿ ಜಯಂತಿ, ಗಾಂಧಿ ಭವನ ಉದ್ಘಾಟನೆ



ಚಾಮರಾಜನಗರ, ಅ.1– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧಿ ಜಯಂತಿ ಆಚರಣೆ ಹಾಗೂ ಗಾಂಧಿ ಭವನದ ಉದ್ಘಾಟನೆ ಕಾರ್ಯಕ್ರಮ ಅಕ್ಟೋಬರ್ 2 ರಂದು ಚಾಮರಾಜನಗರದ ಯಡಬೆಟ್ಟದಲ್ಲಿರುವ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹತ್ತಿರದಲ್ಲಿರುವ ನೂತನ ಗಾಂಧಿ ಭವನದಲ್ಲಿ ಆಯೋಜಿಸಲಾಗಿದೆ.

ನೂತನ ಗಾಂಧಿ ಭವನ ಯಡಪುರದಲ್ಲಿರುವ ವೈದ್ಯಕೀಯ ಬೋಧನಾ ಆಸ್ಪತ್ರೆ ಪಕ್ಕದಲ್ಲಿಯೇ ನಿರ್ಮಾಣಗೊಂಡಿದ್ದು, ಗಾಂಧಿ ಜಯಂತಿಯಂದೇ ಉದ್ಘಾಟನೆಯಾಗುತ್ತಿರುವುದು ವಿಶೇಷವಾಗಿದೆ. ನೂತನ ಗಾಂಧಿಭವನದಲ್ಲೇ ಈ ಬಾರಿಯ ಗಾಂಧಿಜಯಂತಿ ಆಚರಣೆ ಕಾರ್ಯಕ್ರಮವನ್ನು ವಿಭಿನ್ನವಾಗಿ ಹಾಗೂ ಅರ್ಥಪೂರ್ಣವಾಗಿ ಆಯೋಜಿಸಲಾಗಿದೆ.

ಬೆಳಿಗ್ಗೆ 8ಗಂಟೆಗೆ ವೈದ್ಯಕೀಯ ಕಾಲೇಜು, ಆಸ್ಪತ್ರೆ, ಗಾಂಧಿ ಭವನದ ಸುತ್ತಮುತ್ತಲ ಆವರಣದಲ್ಲಿ ಗಾಂಧಿ ಜಯಂತಿ ಅಂಗವಾಗಿ ಶ್ರಮದಾನದ ಮೂಲಕ ಸ್ವಚ್ಛತಾ ಕಾರ್ಯ ಆರಂಭವಾಗಲಿದೆ. ಅಧಿಕಾರಿಗಳು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು, ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಇನ್ನಿತರರು ಶ್ರಮದಾನದಲ್ಲಿ ಪಾಲ್ಗೊಳ್ಳಲಿದ್ದಾರೆ.

10 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಸರ್ವಧರ್ಮಗಳ ಪ್ರಾರ್ಥನೆ, ಗಾಂಧಿ ಪ್ರಿಯ ಗೀತೆಗಳ ಗಾಯನ, ಮಕ್ಕಳಿಂದ ಗಾಂಧೀಜಿ ಹಾಗೂ ಇನ್ನಿತರ ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣ ಪ್ರದರ್ಶನ ಕಾರ್ಯಕ್ರಮವಿದೆ. ಗಾಂಧಿ ಅವರ ಬದುಕು ಇನ್ನಿತರ ಅವರ ವಿಚಾರಗಳ ಕುರಿತು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ವಿತರಣೆಯಾಗಲಿದೆ. ಹೀಗೆ ಹಲವು ವೈಶಿಷ್ಟ್ಯಗಳನ್ನು ಈ ಬಾರಿಯ ಗಾಂಧಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ನೆರವೇರಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯ ವಿ. ಶ್ರೀನಿವಾಸ ಪ್ರಸಾದ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಹೆಚ್.ಎಂ. ಗಣೇಶ್‌ಪ್ರಸಾದ್, ಮರಿತಿಬ್ಬೇಗೌಡ, ಮಂಜೇಗೌಡ, ಸಿ.ಎನ್, ಡಾ. ಡಿ. ತಿಮ್ಮಯ್ಯ, ಮಧು. ಜಿ. ಮಾದೇಗೌಡ, ಶಿವಪುರ ಗ್ರಾಪಂ ಅಧ್ಯಕ್ಷೆ ಮಹದೇವಮ್ಮ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಜಯರಾಮ್.ಎನ್, ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಬದನಗುಪ್ಪೆಯಲ್ಲಿ 'ಸ್ವಚ್ಛತಾ ಹೀ ಸೇವಾ' ಆಂದೋಲನ

ಶ್ರಮದಾನ ಕಾರ್ಯಕ್ಕೆ ಜಿಪಂ ಸಿಇಓ ಚಾಲನೆ



ಚಾಮರಾಜನಗರ, ಅ.1– ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ ಅವರು ಸ್ವಚ್ಛತಾ ಹೀ ಸೇವಾ ಜನಾಂದೋಲನ ಕಾರ್ಯಕ್ರಮದಡಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ಬೃಹತ್ ಸ್ವಚ್ಛತಾ ಶ್ರಮದಾನ ಕಾರ್ಯಕ್ಕೆ ಬದನಗುಪ್ಪೆ ಗ್ರಾಮದಲ್ಲಿ ಭಾನುವಾರ ಚಾಲನೆ ನೀಡಿದರು.

ಚಾಮರಾಜನಗರ ತಾಲೂಕಿನ ಬದನಗುಪ್ಪೆ ಪಂಚಾಯಿತಿ ವ್ಯಾಪ್ತಿಯ ಪಣ್ಯದಹುಂಡಿ(ಬದನಗುಪ್ಪೆ)ಯ ರೈಲ್ವೆ ನಿಲ್ದಾಣದಲ್ಲಿ ಜಿಲ್ಲಾ ಪಂಚಾಯತ್, ಬದನಗುಪ್ಪೆ ಹಾಗೂ ಹೆಗ್ಗೋಠಾರ ಗ್ರಾಮ ಪಂಚಾಯಿತಿ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಸ್ವಚ್ಛತಾ ಹೀ ಸೇವಾ ಜನಾಂದೋಲನ ಸ್ವಚ್ಛತಾ ಕಾರ್ಯಕ್ರಮದಲ್ಲಿ ನಿಲ್ದಾಣದ ಆವರಣದಲ್ಲಿ ಪ್ಲಾಸ್ಟಿಕ್ ಮತ್ತು ಗಿಡಗಂಟಿಗಳನ್ನು ತೆರವುಗೊಳಿಸುವ ಮೂಲಕ ಸ್ವಚ್ಛಗೊಳಿಸಲಾಯಿತು.

ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ಜನ್ಮದಿನದ ಸ್ಮರಣಾರ್ಥವಾಗಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ಸ್ವಚ್ಛತಾ ನೈರ್ಮಲ್ಯ ಸಂಬಂಧಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಗ್ರಾಮೀಣ ಜನರಲ್ಲಿ ಸುಸ್ಥಿರ ನೈರ್ಮಲ್ಯ ಅಭ್ಯಾಸಗಳ ಕುರಿತು ಹೆಚ್ಚಿನ ಅರಿವು ಮೂಡಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಕಳೆದ 15 ದಿನಗಳಿಂದ ಪ್ರತಿದಿನ ಒಂದೊಂದು ಚಟುವಟಿಕೆಯಂತೆ ಶಾಲಾ, ಕಾಲೇಜು ವಿದ್ಯಾರ್ಥಿಗಳು ಸ್ಕೌಟ್ಸ್ ಮತ್ತು ಗೈಡ್ಸ್ ಸ್ವಯಂ ಸೇವಕರು ಸ್ವಯಂ ಸೇವಾ ಸಂಸ್ಥೆಗಳು, ಆಶಾ ಅಂಗನವಾಡಿ ಕಾರ್ಯಕರ್ತೆಯರು, ಸ್ವಚ್ಛತಾ ಅನುಷ್ಠಾನಗೊಳಿಸುವ ವಿವಿಧ ಇಲಾಖೆಗಳು, ಮಹಿಳಾ ಸ್ವಸಹಾಯ ಗುಂಪುಗಳು ಗ್ರಾಮ, ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುತ್ತಿದೆ.

ಇದೇ ವೇಳೆ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ ಅವರು, ಕೇಂದ್ರ ಜಲಶಕ್ತಿ ಮಂತ್ರಾಲಯ ಹಾಗೂ ರಾಜ್ಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮಾರ್ಗಸೂಚಿಗಳನ್ವಯ ಜಿಲ್ಲಾದ್ಯಂತ ಬೃಹತ್ ಮಟ್ಟದ ಶ್ರಮದಾನ ಕಾರ್ಯಕ್ರಮವನ್ನು ಸಾರ್ವಜನಿಕ ಸ್ಥಳ, ರಸ್ತೆಬದಿ, ಶಾಲಾ ಆವರಣ, ಆಸ್ಪತ್ರೆ ಆವರಣ, ಸಾರ್ವಜನಿಕ ಕಟ್ಟಡಗಳು ಧಾರ್ಮಿಕ ಕ್ಷೇತ್ರಗಳು ಹಾಗೂ ಪ್ರವಾಸಿತಾಣಗಳಲ್ಲಿ ವಿನೂತನ ರೀತಿಯಲ್ಲಿ ಹಮ್ಮಿಕೊಂಡು ತ್ಯಾಜ್ಯ ಮುಕ್ತ ಭಾರತವನ್ನು ರೂಪಿಸುವಲ್ಲಿ ಯಶಸ್ವಿಯಾಗಬೇಕಿದೆ ಎಂದರು.

ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಕಿರಣ್ ಪಡ್ನೇಕರ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ, ಸಹಾಯಕ ನಿರ್ದೇಶಕ ಪ್ರಕಾಶ್, ಸ್ವಚ್ಛ ಭಾರತ್ ಮಿಷನ್ (ಗ್ರಾ) ಜಿಲ್ಲಾ ಸಮಾಲೋಚಕ ಎಂ ಮಹದೇವು, ಪ್ರಭುಸ್ವಾಮಿ, ಜೋಸೆಫ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ. ಕುಮಾರ್, ಆರ್. ಅಂಬಿಕಾ, ಗ್ರಾ.ಪಂ. ಸದಸ್ಯರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಾದಪ್ಪ, ಮಹದೇವಸ್ವಾಮಿ, ಕಾರ್ಯದರ್ಶಿ ನಾಗನಾಯಕ, ಲೋಕೇಶ್, ಆಶಾ, ಅಂಗನವಾಡಿ ಕಾರ್ಯಕರ್ತೆಯರು ರೈಲ್ವೆ ಇಲಾಖೆಯ ಕಾರ್ಮಿಕರು ಹಾಗೂ ಸಾರ್ವಜನಿಕರು ಸ್ವಚ್ಛತಾ ಶ್ರಮದಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಯಳಂದೂರು ವರದಿ: ಯಳಂದೂರು ನ್ಯಾಯಾಲಯದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕೋರ್ಟ್ ಆವರಣದಲ್ಲಿ ಸ್ವಚ್ಛ ಭಾರತ ಅಭಿಯಾನಕ್ಕೆ ಸ್ವತಃ ನ್ಯಾಯಾಧೀಶರಾದ ಆಕರ್ಷ್. ಎಂ ರವರು ಕೈಜೋಡಿಸುವ ಮೂಲಕ ಎಲ್ಲರಿಗೂ ಪ್ರೇರಣೆಯಾದರು. ನಂತರ ಮಾತನಾಡಿದ ಅವರು, ಒಂದು ದಿನಕ್ಕೆ ಸೀಮಿತವಾಗದೆ ವರ್ಷದ ಎಲ್ಲಾ ದಿನಗಳು ಸ್ವಚ್ಛತೆಯಿಂದ ಇರುವಂತೆ ನೋಡಿಕೊಳ್ಳಬೇಕು. ಆರೋಗ್ಯದ ಹಿತದೃಷ್ಟಿಯಿಂದ ನಾವೆಲ್ಲರೂ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕಾಗಿದೆ. ಎಲ್ಲಾ ಪ್ರಮುಖ ಸ್ಥಳಗಳಿಂದ ಕಸ ತೆಗೆಯುವುದು, ತ್ಯಾಜ್ಯಗಳನ್ನು ತೆರವುಗೊಳಿಸುವುದು, ರಿಪೇರಿ, ಪೇಂಟಿಂಗ್, ಶುಚಿಗೊಳಿಸುವಿಕೆ ಮತ್ತು ಕಸದ ತೊಟ್ಟಿಗಳ ಸಂಗ್ರಹಣೆ ಮತ್ತು ಶೇಖರಣೆ, ಸಾರ್ವಜನಿಕ ಶೌಚಾಲಯಗಳು, ಕಸದ ಬಿಂದುಗಳು, ತ್ಯಾಜ್ಯ ಸಾಗಣೆ ವಾಹನಗಳು ಮತ್ತು ಮೆಟೀರಿಯಲ್ ರಿಕವರಿ ಸೌಲಭ್ಯಗಳಂತಹ ಎಲ್ಲಾ ನೈರ್ಮಲ್ಯ ಸ್ವತ್ತುಗಳ ಬ್ರ್ಯಾಂಡಿಂಗ್ ಅನ್ನು ಯೋಜನೆ ಒಳಗೊಂಡಿರುತ್ತದೆ. ಮಾರುಕಟ್ಟೆಗಳು, ಸಾರ್ವಜನಿಕ ಸ್ಥಳಗಳು ಮತ್ತು ಗೋಡೆಚಿತ್ರ/ವಾಲ್ ಪೇಂಟಿಂಗ್‌ಗಳು ಮತ್ತು ಡಸ್ಟ್‌ಬಿನ್‌ಗಳೊಂದಿಗೆ ಪ್ರವಾಸಿತಾಣಗಳು, ಸ್ವಚ್ಛತಾ ರಸಪ್ರಶ್ನೆಗಳು, ಪ್ಲಾಂಟೇಶನ್ ಡ್ರೈವ್‌ಗಳು, ಸ್ವಚ್ಛತಾ ಪ್ರತಿಜ್ಞೆಗಳು ಮತ್ತು ಸ್ವಚ್ಛತಾ ರನ್‌ಗಳನ್ನು ಆಯೋಜಿಸುವುದು ಇತ್ಯಾದಿ ಸ್ವಚ್ಛತಾ ಚಟುವಟಿಕೆಗಳಲ್ಲಿ ಸೇರಿವೆ. ಹೀಗಾಗಿ ನಮ್ಮಂದಲೇ ಸ್ವಚ್ಛತಾ ಕಾರ್ಯಕ್ರಮಗಳು ಮಾಡುವ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಸ್ವಚ್ಛತಾ ಅಭಿಯಾನದಲ್ಲಿ ನ್ಯಾಯಾಲಯದ ಶಿರಸ್ತೇದಾರ್ ಎಲ್. ಬಿ ಕೃಷ್ಣನಾಯಕ, ಎಸ್ ಅಮಿತ ಸಿಬ್ಬಂದಿಗಳು ಸಿ. ಪ್ರಮೋದ್,ಎಲ್ ಎಸ್ ಶೃತಿ, ಆರ್. ಶ್ರೀಮತಿ, ಆರ್ ರವಿಕುಮಾರ್, ಗುರುಸ್ವಾಮಿ, ವಕೀಲರಾದ ಸಂಪತ್ ಇತರರು ಹಾಜರಿದ್ದರು.



ತ.ನಾಡಿಗೆ ಕಾವೇರಿ ನೀರು: ಒಣಗಿದ ತರಕಾರಿ, ಸೊಪ್ಪು ಪ್ರದರ್ಶಿಸಿ ಪ್ರತಿಭಟನೆ



ಚಾಮರಾಜನಗರ, ಅ.1– ರಾಜ್ಯ ಸರ್ಕಾರವು ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುವುದನ್ನು ವಿರೋಧಿಸಿ ನಗರದಲ್ಲಿ ಭಾನುವಾರ ಕರ್ನಾಟಕ ಸೇನಾಪಡೆಯಿಂದ ಪ್ರತಿಭಟನೆ ನಡೆಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಒಣಗಿದ ನಾನಾ ಬಗೆಯ ತರಕಾರಿ, ಸೊಪ್ಪು ಪ್ರದರ್ಶಿಸಿ ತಮಿಳುನಾಡು ಸರ್ಕಾರ, ಕರ್ನಾಟಕ ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ರಾಜ್ಯದಲ್ಲಿ ಸರಿಯಾಗಿ ಮಳೆಯಾಗದೆ ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿಯುತ್ತಿದ್ದು, ಕುಡಿಯುವ ನೀರಿಗೂ ತೊಂದರೆ ಉಂಟಾಗಲಿದೆ. ಇಂತಹ ಸಂದರ್ಭದಲ್ಲೂ ಕಾವೇರಿ ನ್ಯಾಯಾಧೀಕರಣವು ತಮಿಳುನಾಡಿಗೆ ನೀರು ಹರಿಸಬೇಕು ಎಂದು ತೀರ್ಪು ನೀಡಿರುವುದು ಖಂಡನೀಯವಾಗಿದೆ ಎಂದರು.


ನಮ್ಮಲ್ಲಿ ಕುಡಿಯಲು ನೀರಿಲ್ಲ, ತರಕಾರಿ ಬೆಳೆಗಳು ಒಣಗುತ್ತಿವೆ, ನಮ್ಮ ರೈತರು, ಜನರು ಈಗಾಗಲೇ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೂಡಲೇ ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಹರಿಸಬಾರದು. ನೀರು ಹರಿಸಿ ರೈತರನ್ನು ಸಂಕಷ್ಟಕ್ಕೆ ದೂಡಬಾರದು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಗಾಯದ ಮೇಲೆ ಬರೆ ಎಳೆಯುತ್ತಿದ್ದು, ವಾಸ್ತವ ಸ್ಥಿತಿ ಅರಿತು ಸಂಕಷ್ಟ ಸೂತ್ರ ನೀಡಲಿ ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಶಾ. ಮುರಳಿ, ಸಿ.ಎಂ. ಕೃಷ್ಣಮೂರ್ತಿ, ರವಿಚಂದ್ರ ಪ್ರಸಾದ್ ಕಹಳೆ, ಪಣ್ಯದಹುಂಡಿ ರಾಜು, ಚಾ.ವೆಂ. ರಾಜ್‌ಗೋಪಾಲ್, ನಿಜಧ್ವನಿ ಗೋವಿಂದರಾಜು, ರಾಮಸಮುದ್ರ ಸುರೇಶ್, ತಾಂಡವಮೂರ್ತಿ, ವರದನಾಯಕ, ಗು. ಪುರುಷೋತ್ತಮ್, ಚಾ.ಹ. ರಾಮು ಇತರರು ಇದ್ದರು.

ಸುಬ್ಬಮ್ಮ ನಿಧನ



ಚಾಮರಾಜನಗರ, ಅ.1– ನಗರದ 17ನೇ ವಾರ್ಡ್‌ನ ಸುಧಾಮನಗರದ ನಿವಾಸಿ ಲೇಟ್ ವರದನಾಯಕ ಅವರ ಪತ್ನಿ, ಸುಬ್ಬಮ್ಮ(65) ಭಾನುವಾರ ನಿಧನರಾದರು. ಮೃತರು ಪುತ್ರರಾದ ವೆಂಕಟೇಶ್, ರಂಗಸ್ವಾಮಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ನೆರವೇರಲಿದೆ ಎಂದು ಕುಟುಂಬದ ಮೂಲ ತಿಳಿಸಿದೆ.

ಇಂದು ಉಚಿತ ಆರೋಗ್ಯ ತಪಾಸಣೆ, ಪ್ರಕೃತಿ ಚಿಕಿತ್ಸಾ ಶಿಬಿರ



ಚಾಮರಾಜನಗರ, ಅ.1– ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ಸಂಸ್ಥೆ ಪುಣೆ, ನಗರದ ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರ, ಆಯುಷ್ ನಿರ್ದೇಶನಾಲಯ, ಎಸ್.ಜೆ.ಎಂ. ಮತ್ತು ಶಾಂತಿವನ ಟ್ರಸ್ಟ್ ಕ್ಷೇತ್ರ ಧರ್ಮಸ್ಥಳ ಮತ್ತು ಧರ್ಮಸ್ಥಳ: ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಹಾಗೂ ಯೋಗ ವಿಜ್ಞಾನ ಕಾಲೇಜು ಮತ್ತು ಆಸ್ಪತ್ರೆಗಳು, ಉಜಿರೆ ಸಹಭಾಗಿತ್ವದಲ್ಲಿ ಅ. 2 ರಂದು ನಗರದಲ್ಲಿ ಉಚಿತ ಆರೋಗ್ಯ ತಪಾಸಣೆ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ.

ನಗರದ ಡಾ. ಬಿಆರ್.ಅಂಬೇಡ್ಕರ್ ಭವನದಲ್ಲಿ ಬೆಳಗ್ಗೆ 10 ಗಂಟೆಯಿಂದ ನಡೆಯುವ ಶಿಬಿರದ ಸಮಾರಂಭವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ, ಉದ್ಘಾಟಿಸಲಿದ್ದಾರೆ.

ನಗರದ ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರದ ಡಾ. ಮಾನಸ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಚಾಮುಲ್ ನಿರ್ದೇಶಕರಾದ ಶೀಲಾ ಪುಟ್ಟರಂಗಶೆಟ್ಟಿ, ಮಹಿಳಾ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷೆ ನಾಗಶ್ರೀ , ಜಿಲ್ಲಾ ಆಯುಷ್ ಅಧಿಕಾರಿ ಡಾ. ಸುಜಾತ, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ.ಕೃಷ್ಣಪ್ರಸಾದ್, ತಾಲೂಕು ಆರೋಗ್ಯ ಅಧಿಕಾರಿ, ಶ್ರೀನಿವಾಸ್, ಆಯುರ್ವೇದ ವೈದ್ಯಾಧಿಕಾರಿ ಶೋಭಾ ಕೆ.ಪಿ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕರಾದ ಲತಾಬಂಗೇರ, ಯೋಜನಾಧಿಕಾರಿ ಹರೀಶ್ ಕುಮಾರ್, ಬಿಎಸ್‌ಪಿ ಜಿಲ್ಲಾಧ್ಯಕ್ಷ ನಾಗಯ್ಯ ಎನ್ ಭಾಗವಹಿಸಲಿದ್ದಾರೆ.


ಶಿಬಿರದಲ್ಲಿ ನುರಿತ ವೈದ್ಯರು ಭಾಗವಹಿಸಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗಾಂಧಿ ಗ್ರಾಮ ಪುರಸ್ಕಾರಕ್ಕೆ 5 ಗ್ರಾಪಂ ಆಯ್ಕೆ

ಚಾಮರಾಜನಗರ, ಅ.1– 2022–23ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ, ಚಾಮರಾಜನಗರ ತಾಲೂಕಿನ ಪುಣಜನೂರು, ಕೊಳ್ಳೇಗಾಲ ತಾಲೂಕಿನ ಸಿಂಗಾನಲ್ಲೂರು, ಹನೂರು ತಾಲೂಕಿನ ಲೊಕ್ಕನಹಳ್ಳಿ ಹಾಗೂ ಯಳಂದೂರು ತಾಲೂಕಿನ ಅಂಬಳೆ ಗ್ರಾಮ ಪಂಚಾಯಿತಿಗಳು ಆಯ್ಕೆಯಾಗಿವೆ.

ಪ್ರಶಸ್ತಿಗೆ ಆಯ್ಕೆಯಾದ ಗ್ರಾಪಂಗಳಿಗೆ ಅ.2ರಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಲಾಗಿರುವ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಗುವುದು ಎಂದು ಜಿಪಂ ಪ್ರಕಟಣೆ ತಿಳಿಸಿದೆ.

ಕವಯತ್ರಿ ಡಾ.ಲತಾ ರಾಜಶೇಖರ್, ಡಾ.ರಾಜಶೇಖರ್ ಅವರ 50 ವರ್ಷದ ಹಿಂದಿನ ಪ್ರೇಮಪತ್ರಗಳ ಸಂಕಲನ 'ಭಾವ ಸಂಗಮ ಸುವರ್ಣ ಸಂಭ್ರಮ' ಕೃತಿ ಬಿಡುಗಡೆ



ಏಳು ಮಹಾಕಾವ್ಯಗಳನ್ನು ಬರೆದಿರುವ ಕವಯತ್ರಿ ಡಾ.ಲತಾರಾಜಶೇಖರ್ ಮತ್ತು ಗ್ರಾಮೀಣ ಜನರಿಗೆ ಸುದೀರ್ಘ ವೈದ್ಯಕೀಯ ಸೇವೆ ಸಲ್ಲಿಸುತ್ತಿರುವ ಡಾ.ಎಚ್.ಬಿ. ರಾಜಶೇಖರ್ ಅವರು ರಾಷ್ಟ್ರ ಪ್ರಶಸ್ತಿಗಳಿಗೆ ಪರಿಗಣಿಸಬಹುದಾದ ಎಲ್ಲಾ ಅರ್ಹತೆ ಹೊಂದಿದ್ದಾರೆ. ಪ್ರಸ್ತುತ ಕಾಲಘಟ್ಟದಲ್ಲಿ ವಿವಾಹ ನಂತರದ ಪ್ರೇಮಪತ್ರಗಳ ಸಂಕಲನ ಹೊರತಂದಿರುವುದು ವಿಶೇಷ. ಇಂತಹ ಪತ್ರಗಳನ್ನು ಸಾರ್ವಜನಿಕಗೊಳಿಸುವುದು ಅತ್ಯಂತ ಕಷ್ಟದ ಕೆಲಸ. ಎಲ್ಲಾ ಎಲ್ಲೆಗಳನ್ನು ಮೀರಿ ಡಾ.ರಾಜಶೇಖರ್ ದಂಪತಿ ಪುಸ್ತಕ ರೂಪದಲ್ಲಿ ಪತ್ರಗಳ ಸಂಕಲನ ಹೊರತಂದು ತಮ್ಮ 50ನೇ ವಿವಾಹ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡಿದ್ದಾರೆ. ಇದರಲ್ಲೂ ರಸಿಕತೆ, ಸಾಹಿತ್ಯದ ಹೊಳಪು, ಸಾಹಿತ್ಯ ದಿಗ್ಗಜರ ಉಕ್ತಿಗಳನ್ನು ಉಲ್ಲೇಖಿಸಿ ಪತ್ರ ಬರೆಯುವುದು ಸಾಹಿತ್ಯ ಪರಿಭಾಷೆಯಲ್ಲಿ ಹೇಳುವುದಾದರೆ ಇದೊಂದು ಕಲಾತ್ಮಕ ಜಗತ್ತು ಎನ್ನಬಹುದು.

-ಡಾ.ಎಲ್.ಶಿವರಾಜಪ್ಪ, ಹಿರಿಯ ಸಾಹಿತಿ,

ಮೈಸೂರು, ಅ.1(ಎಸ್‌ಪಿಎನ್)– ಪ್ರಸ್ತುತ ಪತ್ರ ಸಂಸ್ಕೃತಿ ಮರೆಯಾಗುತ್ತಿರುವ ಕಾಲಘಟ್ಟದಲ್ಲಿ ಕವಯತ್ರಿ ಡಾ.ಲತಾ ರಾಜಶೇಖರ್ ಮತ್ತು ಹಿರಿಯ ವೈದ್ಯರಾದ ಡಾ.ಎಚ್.ಬಿ.ರಾಜಶೇಖರ್, ಐವತ್ತು ವರ್ಷಗಳ ಹಿಂದೆ ಬರೆದ ಪ್ರೇಮ ಪತ್ರಗಳನ್ನು ಜೋಪಾನ ಮಾಡಿರುವುದು ಸಂತೋಷದ ಸಂಗತಿ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ) ಎಂದು ಅಭಿಪ್ರಾಯಪಟ್ಟರು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾ ಕೂಟದ ಸಹಯೋಗದೊಂದಿಗೆ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕವಯತ್ರಿ ಡಾ.ಲತಾ ರಾಜಶೇಖರ್, ವೈದ್ಯ ಡಾ.ಎಚ್.ಬಿ. ರಾಜಶೇಖರ್ ದಂಪತಿಯ ಪತ್ರ ಸಂಕಲನ 'ಭಾವ ಸಂಗಮ ಸುವರ್ಣ ಸಂಭ್ರಮ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

'ಭಾವಸಂಗಮ ಸುವರ್ಣ ಸಂಭ್ರಮ' ಕೃತಿಯಲ್ಲಿ ಪ್ರಕಟವಾಗಿರುವ ವಿವಾಹಪೂರ್ವ ಪ್ರೇಮ ಪತ್ರಗಳಲ್ಲ, ವಿವಾಹ ನಂತರದ ಆರಂಭಿಕ ಕೆಲವು ವರ್ಷಗಳಲ್ಲಿ ಪತ್ರಗಳು. ಇಲ್ಲಿ ಪ್ರೇಮವಷ್ಟೇ ಇಲ್ಲ, ನಿವೇದನೆ, ಒಲವಿನ ಓಲೆಗಳ ಕಟ್ಟು ಅಥವಾ ಮಧುರ ದಾಂಪತ್ಯಗೀತೆ ಎಂದು ಬಣ್ಣಿಸಿದ ಅವರು, ಈ ಕೃತಿಯಲ್ಲಿ ಪ್ರಕಟವಾಗಿರುವ ಪತ್ರಗಳನ್ನು ಓದಿದರೆ, ಡಾ.ರಾಜಶೇಖರ್ ದಂಪತಿಯ ದಾಂಪತ್ಯದ ಅನ್ಯೋನ್ಯತೆ, ಅನನ್ಯತೆಗೆ ಎಲ್ಲರೂ ತಲೆಬಾಗಬೇಕು ಹಾಗೂ ಇಂದಿನ ನವ ದಂಪತಿಗಳಿಗೆ ಈ ಪತ್ರಗಳಲ್ಲಿನ ಜೀವನ ಸಾರಾಂಶ ಮಾದರಿಯಾಗಬೇಕು ಎಂದರು.

ಇಲ್ಲಿ ಪ್ರೇಮ ಮುಖ್ಯವಲ್ಲ, ಪತ್ರಗಳಲ್ಲಿನ ಭಾವುಕತೆ, ಪ್ರೀತಿ, ವೈಚಾರಿಕತೆ ಒಂದರ್ಥದಲ್ಲಿ ಆಧ್ಯಾತ್ಮಿಕ ದೀಪವಿದ್ದಂತೆ. ಐವತ್ತು ವರ್ಷ ಈ ಪತ್ರಗಳನ್ನು ಕೂಡಿಟ್ಟುಕೊಂಡಿರುವುದೇ ಒಂದು ಸಾಧನೆ. ಪ್ರೇಮ ಒಂದು ಬಗೆಯ ಹುಚ್ಚು. ಈರ್ವರಲ್ಲಿ ಹೃದಯ ಸಂಗಮವಿದೆ. ಪಿಸುಮಾತಿನ ಸಂವಾದವಿದೆ. ಪ್ರೇಮಪಾಷ, ಮೋಹವೂ ನುಸುಳಿದೆ. ಪ್ರೇಮಿಗಳಿಗೆ ಬೋಧಪ್ರದವಾಗಿಯೂ ಇವೆ. ಒಟ್ಟಿನಲ್ಲಿ ಓದುಗರಿಗೆ ತಾರುಣ್ಯ ಉಕ್ಕಿಸುವ ಶಕ್ತಿ ಈ ಪತ್ರಗಳಿಗಿದೆ ಎಂದು ಹೇಳಿದರು.

ಡಾ.ರಾಜಶೇಖರ್ ಅವರು ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಪತ್ರಗಳನ್ನು ಬರೆದಿದ್ದಾರೆ. ಲತಾ ಅವರು ಕನ್ನಡದಲ್ಲಿ ಮಾತ್ರ ಬರೆದಿದ್ದಾರೆ. ಆದರೆ ಅಲ್ಲಲ್ಲಿ ಇಂಗ್ಲಿಷ್ ಪದಗಳಿವೆ. ಇದೊಂದು ಭಾವ ರೂಪದ ಆದರ್ಶ ದಾಂಪತ್ಯ ಜೀವನ ಎಂಬುದರಲ್ಲಿ ಅನುಮಾನವಿಲ್ಲ. ಗೌರವ ಪೂರ್ಣ ಸ್ಥಿರಪ್ರೇಮದ ಸಂಕೇತ ಬಿಂಬಿಸುವ ಸಾಹಿತ್ಯವನ್ನು ಇಲ್ಲಿ ಕಾಣಬಹುದು. ಎಲ್ಲವೂ ಚಕ್ರ ರೂಪದಲ್ಲಿ ಇವೆಯೇ ಹೊರತು ವಕ್ರರೂಪದಲ್ಲಿಲ್ಲ ಎಂದು ವ್ಯಾಖ್ಯಾನಿಸಿದರು.

ಸನ್ಮಾನ: ಐವತ್ತನೇ ವಿವಾಹ ವಾರ್ಷಿಕೋತ್ಸವವನ್ನು ವಿನೂತನವಾಗಿ ಆಚರಿಸಿಕೊಂಡ ಹಿನ್ನೆಲೆಯಲ್ಲಿ ಡಾ.ರಾಜಶೇಖರ್ ಹಾಗೂ ಡಾ. ಲತಾ ರಾಜಶೇಖರ್ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಮೈಸೂರಿನ ವಿವಿಧ ಸಂಘ–ಸಂಸ್ಥೆಗಳವರು ಸನ್ಮಾನಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಕೃತಿ ಕುರಿತು ಕವಿ ಜಯಪ್ಪ ಹೊನ್ನಾಳಿ ಮಾತನಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉಪ ಸ್ಥಿತರಿದ್ದರು. ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮೈಸೂರು ರಂಗನಾಥ್ ನಿರೂಪಿಸಿದರೆ, ನಿಸರ್ಗ ಪ್ರಾರ್ಥಿಸಿದರು.

ಬೆಂಗಳೂರು ಮೂಲದ ನಿರ್ದೇಶಕರ 'ಕಪ್ಪೆ ರಾಗ' ಚಿತ್ರಕ್ಕೆ ಗ್ರೀನ್ ಆಸ್ಕರ್ ಪ್ರಶಸ್ತಿ

ಬೆಂಗಳೂರು, ಅ.1– ಸಾಮಾನ್ಯವಾಗಿ ಕುಂಬಾರ ರಾತ್ರಿ ಕಪ್ಪೆ ಪಶ್ಚಿಮ ಘಟ್ಟಗಳ ಶರಾವತಿ ನದಿಯ ಜಲಾನಯನ ಪ್ರದೇಶದಲ್ಲಿ ಹೆಚ್ಚಾಗಿ ಕಾಣಿಸುತ್ತವೆ. ಅವು ಹಿಂಗಾಲುಗಳ ಮೇಲೆ ನಿಲ್ಲಲು ಸಾಧ್ಯವಿಲ್ಲ, ಆದರೆ ಅವು ಮನುಷ್ಯರಂತೆ ಪರಸ್ಪರ ಅಪ್ಪಿಕೊಳ್ಳಬಲ್ಲವು. ಈ ಜಾತಿ ಕಪ್ಪೆ 2014ರಲ್ಲಿ ಸಂಶೋಧಕರು ದಾಖಲೆಯಲ್ಲಿ ನಿರೂಪಿಸಿದ್ದಾರೆ.

ಈ ಜಾತಿಯನ್ನು ಸಂಗೀತ ವನ್ಯಜೀವಿ ಸಾಕ್ಷ್ಯಚಿತ್ರದಲ್ಲಿ ಸೆರೆಹಿಡಿಯಲಾಗಿದೆ ಮತ್ತು ಪ್ರದರ್ಶಿಸಲಾಗಿದೆ – 'ಕಪ್ಪೆ ರಾಗ, ದಿ ಸಾಂಗ್ ಆಫ್ ಕುಂಬಾರ – ಎ ನೈಟ್ ಫ್ರಾಗ್'. ಈ ಸಾಕ್ಷ್ಯಚಿತ್ರವು ಸೆಪ್ಟೆಂಬರ್ 28 ರಂದು ಪ್ರಾಣಿಗಳ ವರ್ತನೆಯ ಕಿರುಚಿತ್ರ ವಿಭಾಗದ ಅಡಿಯಲ್ಲಿ ಗ್ರೀನ್ ಆಸ್ಕರ್ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಜಾಕ್ಸನ್ ವೈಲ್ಡ್ ಮೀಡಿಯಾ ಪ್ರಶಸ್ತಿಯನ್ನು ಗೆದ್ದು ಕೊಂಡಿತು.



ಇದಕ್ಕೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದನೆ ವ್ಯಕ್ತಪಡಿಸಿದ್ದಾರೆ. ಬೆಂಗಳೂರು ಮೂಲದ ನಿರ್ದೇಶಕ, ಛಾಯಾಗ್ರಾಹಕ ಪ್ರಶಾಂತ್ ಎಸ್ ನಾಯಕ ಮತ್ತು ಅವರ ತಂಡದ ಸಾಧನೆಯನ್ನು ಶ್ಲಾಘಿಸಿದ್ದಾರೆ. ಸಾಕ್ಷ್ಯಚಿತ್ರವು 13ನೇ ದಾದಾ ಸಾಹೇಬ್ ಫಾಲ್ಕೆ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಕಥೆ ಮತ್ತು ಕಲಾತ್ಮಕ ಶ್ರೇಷ್ಠತೆಗಾಗಿ ಗುರುತಿಸಲ್ಪಟ್ಟಿದೆ ಮತ್ತು ಅತ್ಯುತ್ತಮ ಸಂಗೀತ ವೀಡಿಯೊಗಾಗಿ ಲಾಸ್ ಏಂಜಲೀಸ್‌ನ ಸ್ವತಂತ್ರ ಕಿರುಚಿತ್ರಗಳ ಪ್ರಶಸ್ತಿಗಾಗಿ ಚಿನ್ನದ ಪದಕ ಗೆದ್ದುಕೊಂಡಿತು.

ಸ್ವಚ್ಛತಾ ಕಾರ್ಯಕ್ಕೆ ಬಿಜೆಪಿ ಕಾರ್ಯಕರ್ತರು ಸಾಥ್



ಮೈಸೂರು, ಅ.1(ಎಸ್‌ಬಿಡಿ)– ಮೈಸೂರಿನ 51ನೇ ವಾರ್ಡ್ ಅಗ್ರಹಾರದಲ್ಲಿ ಭಾನುವಾರ ಸ್ವಚ್ಛತಾ ಕಾರ್ಯದ ಮೂಲಕ ಬಿಜೆಪಿ ಕಾರ್ಯಕರ್ತರು ಶ್ರಮದಾನ ಮಾಡಿದರು. ನಗರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ನೇತೃತ್ವದಲ್ಲಿ ಶ್ರೀರಾಮ ಬೀದಿಯಲ್ಲಿ ಕಸ ಗುಡಿಸಿ, ತ್ಯಾಜ್ಯವನ್ನು ಟ್ರ್ಯಾಕ್ಟರ್‌ಗೆ ತುಂಬಿ, ನಂತರ ನೀರಿನಿಂದ ಸ್ವಚ್ಛಗೊಳಿಸಲಾಯಿತು. ಅಲ್ಲದೆ ಗೋಡೆಗೆ ಸುಣ್ಣ ಬಳಿಯಲಾಯಿತು. ಈ ಮೂಲಕ ನಿತ್ಯ ಕಸದ ರಾಶಿ ಬಿದ್ದಿರುತ್ತಿದ್ದ ಸ್ಥಳವನ್ನು ಅಂದಗೊಳಿಸಲಾಯಿತು.

ಬಿಜೆಪಿ ಕೃಷ್ಣರಾಜ ಕ್ಷೇತ್ರದ ಮಾಜಿ ಅಧ್ಯಕ್ಷ ರಾಮಪ್ರಸಾದ್, ಉಪಾಧ್ಯಕ್ಷ ಎಂ.ಆರ್.ಬಾಲಕೃಷ್ಣ, ಪ್ರಧಾನ ಕಾರ್ಯದರ್ಶಿ ಓಂ ಶ್ರೀನಿವಾಸ, ವಿನಯ್ ಪಾಂಚಜನ್ಯ, ಕಾವೇರಿ, ಸರ್ವಮಂಗಳ, ಜ್ಯೋತಿ, ನಾಗಶ್ರೀ, ಶಿವರಾಜ್, ರಾಜ್‌ಕುಮಾರ್, ಸುಭಾಷ್, ಶಿವಪ್ರೇರಣ, ಚಂದ್ರಪ್ರಕಾಶ್, ವರುಣ್ ಸೇರಿದಂತೆ ಅನೇಕ ಕಾರ್ಯಕರ್ತರು ಹಾಗೂ ಸ್ಥಳೀಯರು ಶ್ರಮದಾನದಲ್ಲಿ ಭಾಗವಹಿಸಿದ್ದರು.



ಗಾಂಧಿ ಜಯಂತಿ ಪ್ರಯುಕ್ತ ಸ್ವಚ್ಛ ಭಾರತ್ ಅಭಿಯಾನವನ್ನು ಮೈಸೂರಿನ ವಾರ್ಡ್ ನಂ.51ರ ಅಗ್ರಹಾರದ ಶ್ರೀ ರಾಮ ರಸ್ತೆಯಲ್ಲಿ ನಗರಪಾಲಿಕೆ ಸದಸ್ಯರಾದ ಬಿ.ವಿ ಮಂಜುನಾಥ್, ರಾಮ್ ಪ್ರಸಾದ್, ವಕೀಲ ಶಿವರಾಜ್ ವಾದಿರಾಜ್ ಬಳ್ಳಾ ಓಂ ಶ್ರೀನಿವಾಸ್, ಸರ್ವ ಮಂಗಳ, ಕಾವೇರಿ, ಶೃತಿ, ವೆಂಕಟೇಶ್, ರಾಜಕುಮಾರ್, ಚಂದ್ರು ಶಿವ, ಪ್ರೇರಣ, ಶುಭಾಷ್ ಮುಂತಾದವರು ಸ್ವಚ್ಛ ಕಾರ್ಯಕ್ರಮದಲ್ಲಿ ಭಾಗವಹಿಸಿ, ಒಂದು ಗಂಟೆ ಕಾಲ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಂಡಿದ್ದರು.



ಎಂ.ಎಸ್.ರಾಮಯ್ಯ ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಅನುಕೂಲಕರವಾದ ಉಪಕರಣಗಳನ್ನು ಅಳವಡಿಸಲು ಧನ ಸಹಾಯ ಮಾಡಿದ ನಿವೃತ್ತ ಉಪನ್ಯಾಸಕಿ ಶ್ರೀಮತಿ ಕೆ.ಕೆ.ಶಾಂತ, ಕೆ.ಚಂದ್ರಶೇಖರ್ ಹಾಗೂ ಮೈಸೂರಿನ ಕಂಟ್ರಾಕ್ಟರ್ ಎಂ.ಎನ್.ವೇದಮೂರ್ತಿ ಅವರನ್ನು ಮೈಲ್ಯಾಕ್ ಮಾಜಿ ಅಧ್ಯಕ್ಷ ಎಚ್.ಎ.ವೆಂಕಟೇಶ್ ಸನ್ಮಾನಿಸಿದರು. ಚಿತ್ರದಲ್ಲಿ ಎಂ.ನಾರಾಯಣ್, ಜಿ.ರಮೇಶ್, ಎಚ್.ಆರ್.ಗೋಪಾಲಕೃಷ್ಣ ಚೆಲುವರಾಜ್, ಡಿ .ನಾಗರಾಜ್ ಇನಿತರರನ್ನು ಕಾಣಬಹುದು.

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

'ಕರಾವಳಿ ಸಾಂಸ್ಕೃತಿಕ ಚಾವಡಿ' ದಶಮಾನೋತ್ಸವ

ಆಗಸದಿಂದ ಧರೆಗಿಳಿದ ಶ್ರೀ ಚಾಮುಂಡೇಶ್ವರಿ...!

● ರಂಗ ನೈಪುಣ್ಯತೆಗೆ ಮಾರುಹೋದ ಜನತೆ ● ಜೈಕಾರ ಹಾಕುತ್ತಾ ಮಂತ್ರಮುಗ್ಧರಾಗಿ ದೇವಿ ಸ್ಮರಣೆ ● ಹೂಟಗಳ್ಳಿಯಲ್ಲಿ ಶ್ರೀ ಚಾಮುಂಡೇಶ್ವರಿ ದೇವಿ ಮಹಾತ್ಮೆ ಯಕ್ಷಗಾನ ಮೋಡಿ



ಮೈಸೂರು, ಅ.1(ಎಸ್‌ಬಿಡಿ)– ನವರಾತ್ರಿ ಹೊಸ್ತಿಲಲ್ಲಿ ತಾಯಿ ಚಾಮುಂಡೇಶ್ವರಿ ಆಗಸದಿಂದ ಧರೆಗಿಳಿದು ದರುಶನ ನೀಡಿದರು. ಇದಕ್ಕೆ ಸಾಕ್ಷಿಯಾಗಿದ್ದ ಸಹಸ್ರಾರು ಮಂದಿ ಭಕ್ತಿಪರವಶರಾಗಿ ತಾಯಿಗೆ ನಮಿಸಿದರು.

ಮೈಸೂರಿನ ಹೂಟಗಳ್ಳಿ ಕೆಹೆಚ್‌ಬಿ ಬಡಾವಣೆಯಲ್ಲಿ 'ಕರಾವಳಿ ಸಾಂಸ್ಕೃತಿಕ ಚಾವಡಿ' ದಶಮಾನೋತ್ಸವ ಪ್ರಯುಕ್ತ ಶನಿವಾರ ಏರ್ಪಡಿಸಿದ್ದ 'ಶ್ರೀ ಚಾಮುಂಡೇಶ್ವರಿ ದೇವಿ ಮಹಾತ್ಮೆ' ಕನ್ನಡ ಪೌರಾಣಿಕ ಯಕ್ಷಗಾನ ಪ್ರದರ್ಶನದ ವೇಳೆ ತಾಯಿ ಚಾಮುಂಡೇಶ್ವರಿ ಪಾತ್ರಧಾರಿ ರಂಗಸ್ಥಳ ಪ್ರವೇಶಿಸಿದ್ದು ಹೀಗೆ. ಚಾಮುಂಡೇಶ್ವರಿ ಪಾತ್ರ ಧರಿಸಿದ್ದ ಕಲಾವಿದ ಮಹೇಶ್ ಸಾಣೂರು, ಕ್ರೇನ್ ಮೂಲಕ 40–50 ಅಡಿ ಎತ್ತರದಿಂದ ರಂಗಸ್ಥಳಕ್ಕಿಳಿದಿದ್ದು, ಸಾಕ್ಷಾತ್ ಚಾಮುಂಡೇಶ್ವರಿಯೇ ಆಗಸದಿಂದ ಧರೆಗಿಳಿದಂತೆ ಭಾಸವಾಯಿತು. ಈ ವೇಳೆ ಆಗಸದಲ್ಲಿ ಸಿಡಿಮದ್ದಿನಿಂದ ವರ್ಣಮಯ ಚಿತ್ತಾರ ಮೂಡಿತು. ನೆರೆದಿದ್ದ ಸಾವಿರಾರು ಮಂದಿ ಭಕ್ತಿಪರವಶರಾಗಿ ತಾಯಿ ಚಾಮುಂಡೇಶ್ವರಿಗೆ ಜೈಕಾರ ಹಾಕಿದರು. ಕ್ಷಣಕಾಲ ತಮ್ಮನ್ನು ತಾವೇ ಮರೆತಂತೆ ದೇವಿಯ ಸ್ಮರಣೆ ಮಾಡಿದರು.

ಝಗಮಗಿಸುವ ವಿದ್ಯುತ್ ದೀಪಾಲಂಕೃತ ರಂಗಮಂಟಪಕ್ಕೆ ಪುಷ್ಪಾರ್ಚನೆಯೊಂದಿಗೆ ದೇವಿ ಪಾತ್ರಧಾರಿಯನ್ನು ಬರಮಾಡಿಕೊಂಡ ಬಳಿಕ 'ಶ್ರೀ ಚಾಮುಂಡೇಶ್ವರಿ ದೇವಿ ಮಹಾತ್ಮೆ' ಯಕ್ಷಗಾನ ಬಯಲಾಟ ಆರಂಭವಾಯಿತು. ಮಹಿಷಾಸುರನ ಅಬ್ಬರದ ಪ್ರವೇಶವೂ ನೆರೆದಿದ್ದವರನ್ನು ನಿಬ್ಬೆರಗಾಗಿಸಿತು. ಭಾಗವತರಾದ ದಿನೇಶ್ ಅಮ್ಮಣ್ಣಾಯ, ಶ್ರೀ ಪ್ರಶಾಂತ ರೈ ಮುಂಡಾಳ, ಮದ್ದಳೆ ಕಲಾವಿದ ಶ್ರೇಯಸ್, ಚಂಡೆ ಕಲಾವಿದ ಕೊಂಕನಾಚೆ ಚಂದ್ರಶೇಖರ್ ಭಟ್ ಅವರ ಹಿಮ್ಮೇಳದೊಂದಿಗೆ 15ಕ್ಕೂ ಹೆಚ್ಚು ಕಲಾವಿದರು ಅಮೋಘ ಪ್ರದರ್ಶನ ನೀಡಿದರು. ಸುಮಾರು ಐದೂವರೆ ಗಂಟೆಗಳ ಕಾಲ ಪ್ರೇಕ್ಷಕರನ್ನು ಭಕ್ತ ಸಾಗರದಲ್ಲಿ ವಿಹರಿಸುವಂತೆ ಮಾಡಿದರು.

ಈ ಮೂಲಕ ದಶಕದಿಂದ ಕರಾವಳಿ ಸಂಸ್ಕೃತಿಯನ್ನು ಮೈಸೂರಿಗೆ ಪರಿಚಯಿಸುತ್ತಿರುವ ಕರಾವಳಿ ಸಾಂಸ್ಕೃತಿಕ ಚಾವಡಿಯ



ಸ್ಕೂಟರ್‌ಗೆ ಲಾರಿ ಡಿಕ್ಕಿ: ಗೃಹಿಣಿಗೆ ತೀವ್ರ ಗಾಯ

●ಮೈಸೂರು–ನಂ.ಗೂಡು ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಘಟನೆ ●ವಾಹನ ತಪಾಸಣೆ ನಡೆಸುತ್ತಿದ್ದ ಪೊಲೀಸರ ವಿರುದ್ಧ ತಿರುಗಿಬಿದ್ದ ಸಾರ್ವಜನಿಕರು; ವಾಸ್ತವ ಸಂಗತಿ ಮನವರಿಕೆ ಮಾಡಿಕೊಟ್ಟ ನಂತರ ಪರಿಸ್ಥಿತಿ ಸುಧಾರಣೆ





ಮೈಸೂರು, ಅ. 1(ಬಿಎಲ್‌ಯು)– ಸ್ಕೂಟರ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಗೃಹಿಣಿ ತೀವ್ರವಾಗಿ ಗಾಯಗೊಂಡ ಘಟನೆ ಮೈಸೂರು–ನಂಜನಗೂಡು ರಿಂಗ್ ರಸ್ತೆ ಜಂಕ್ಷನ್ ಬಳಿ ಭಾನುವಾರ ಮಧ್ಯಾಹ್ನ ಸಂಭವಿಸಿದೆ.

ಮೈಸೂರಿನ ನಾಯ್ಡುನಗರ ನಿವಾಸಿ ಡಿಆರ್‌ಪಿಓ ನಿವೃತ್ತ ನೌಕರ ಪಿ. ನಾಗರಾಜು ಎಂಬುವರ ಪತ್ನಿ ಕೆ. ಕಲಾವತಿ(52) ಅಪಘಾತದಲ್ಲಿ ಗಾಯಗೊಂಡವರಾಗಿದ್ದು, ಇವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿವರ: ಪಿ.ನಾಗರಾಜು ಅವರು ದಟ್ಟಗಳ್ಳಿಯಲ್ಲಿರುವ ತಮ್ಮ ಸಂಬಂಧಿಕರ ಮನೆಗೆ ತೆರಳಲು ಹೋಂಡಾ ಡಿಯೊ ಸ್ಕೂಟರ್ (ಕೆಎ 02–ಜೆಆರ್ 7834)ನಲ್ಲಿ ಭಾನುವಾರ ಮಧ್ಯಾಹ್ನ 1.30ರಲ್ಲಿ ಪತ್ನಿ ಕಲಾವತಿಯವರೊಂದಿಗೆ ಹೋಗುತ್ತಿದ್ದಾಗ ಮೈಸೂರು–ನಂಜನಗೂಡು ಹೆದ್ದಾರಿಯ ರಿಂಗ್ ರಸ್ತೆ ಜಂಕ್ಷನ್ ಬಳಿ ಇವರ ಸ್ಕೂಟರ್ ಮುಂಭಾಗ ಹೋಗುತ್ತಿದ್ದ ಕಾರಿಗೆ ಬೈಕ್ ಸವಾರನೋರ್ವ ಅಡ್ಡ ಬಂದ ಪರಿಣಾಮ ಕಾರು ಚಾಲಕ ಹಠಾತ್ತನೇ ಬ್ರೇಕ್ ಹಾಕಿದ್ದಾನೆ. ಆಗ ನಾಗರಾಜು ಅವರು ಕೂಡ ತಮ್ಮ ಸ್ಕೂಟರ್‌ಗೆ ಬ್ರೇಕ್ ಹಾಕಿ ನಿಲ್ಲಿಸಿದರಾದರೂ, ಅದೇ ವೇಳೆ ಹಿಂಬದಿಯಿಂದ ಬಂದ ಅಶೋಕ ಲೇಲ್ಯಾಂಡ್ ಲಾರಿ (ಕೆಎ 09–ಸಿ 6448) ಇವರ ಸ್ಕೂಟರ್‌ನ ಬಲ ಭಾಗಕ್ಕೆ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಸವಾರರಾಗಿದ್ದ ಕಲಾವತಿಯವರು ಆಯತಪ್ಪಿ ಬಿದ್ದು ಲಾರಿಯ ಹಿಂದಿನ ಚಕ್ರಕ್ಕೆ ಸಿಲುಕಿದ್ದಾರೆ. ಇದರ ಪರಿಣಾಮವಾಗಿ ಅವರ ಕೈ ಮತ್ತು ಹೊಟ್ಟೆ ಭಾಗಕ್ಕೆ ತೀವ್ರ ಗಾಯಗಳಾಗಿವೆ. ಈ ಸ್ಥಳದ ಬಳಿಯೇ ವಾಹನ ತಪಾಸಣೆಯಲ್ಲಿ ತೊಡಗಿದ್ದ ಪೊಲೀಸರು ಕಲಾವತಿಯವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ನಾಗರಾಜು ನೀಡಿದ ದೂರಿನನ್ವಯ ಲಾರಿಯನ್ನು ವಶಪಡಿಸಿಕೊಂಡು ಅದರ ಚಾಲಕ ಗುಂಗ್ರಾಲ್ ಛತ್ರದ ನಿವಾಸಿ ಶಶಿಕುಮಾರ್(22)ನನ್ನು ಬಂಧಿಸಿರುವ ಕೆಆರ್ ಸಂಚಾರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪೊಲೀಸರ ವಿರುದ್ಧ ಆಕ್ರೋಶ: ಅಪಘಾತದ ನಂತರ ಲಾರಿ ಚಾಲಕ (ಈತನಿಗೆ ಅಪಘಾತ ನಡೆದದ್ದು ಗೊತ್ತಾಗಿಲ್ಲವಂತೆ) ನಿಲ್ಲಿಸದೇ ಸ್ವಲ್ಪ ದೂರ ಹೋಗಿದ್ದಾಗ ಆತನನ್ನು ತಡೆದು ಅಪಘಾತದ ವಿಷಯ ತಿಳಿಸಿದ ಸಾರ್ವಜನಿಕರು ಲಾರಿಯನ್ನು ಸ್ಥಳಕ್ಕೆ ವಾಪಸ್ ತರುವಂತೆ ಮಾಡಿದರು. ಅಲ್ಲದೇ, ಸ್ಥಳದಲ್ಲಿದ್ದ ಪೊಲೀಸರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ವಾಹನ ದಟ್ಟಣೆ ಹೆಚ್ಚಾಗಿರುವ ಹೆದ್ದಾರಿಯಲ್ಲಿ ಬ್ಯಾರಿಕೇಡ್ ಹಾಕಿ ವಾಹನ ಸವಾರರಿಂದ ದಂಡ ವಸೂಲಿ ಮಾಡಲಾಗುತ್ತಿದೆ. ನಾಗರಾಜು ಅವರ ಸ್ಕೂಟರ್ ಬರುವ ವೇಳೆ ಪೊಲೀಸರು ಬ್ಯಾರಿಕೇಡ್ ಅನ್ನು ಸ್ಕೂಟರ್‌ಗೆ ಅಡ್ಡಲಾಗಿ ತಳ್ಳಿದ ಪರಿಣಾಮ ಸ್ಕೂಟರ್ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆದು ಕಲಾವತಿಯವರು ಬಲ ಬದಿಗೆ ಬಿದ್ದಾಗ ವೇಗವಾಗಿ ಬಂದ ಲಾರಿ ಅವರ ಮೇಲೆ ಹರಿದಿದೆ ಇದಕ್ಕೆ ಪೊಲೀಸರ ಈ ವರ್ತನೆಯೇ ಕಾರಣ ಎಂದು ಸಾರ್ವಜನಿಕರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳದಲ್ಲಿದ್ದ ಪೊಲೀಸರು ಸಾರ್ವಜನಿಕರನ್ನು ಮನವೊಲಿಸಲಾಗದೇ ಹೆಣಗಾಡುತ್ತಿದ್ದಾಗ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹಿರಿಯ ಪೊಲೀಸ್ ಅಧಿಕಾರಿಗಳು ಸಾರ್ವಜನಿಕರಿಗೆ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟು ಪರಿಸ್ಥಿತಿ ತಿಳಿಗೊಳಿಸಿದರು.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಅವರು, ಸ್ಕೂಟರ್‌ಗೆ ಲಾರಿ ಡಿಕ್ಕಿ ಹೊಡೆದು ಮಹಿಳೆ ಗಾಯಗೊಂಡಿರುವುದು ನಿಜ. ಈ ಪ್ರಕರಣದಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದ ಪೊಲೀಸರ ಲೋಪವೇನೂ ಇಲ್ಲ. ಗಾಯಗೊಂಡಿದ್ದ ಕಲಾವತಿಯವರನ್ನು ಆಸ್ಪತ್ರೆಗೆ ಸಾಗಿಸಲು ಪೊಲೀಸರೇ ಸಹಕರಿಸಿದ್ದಾರೆ. ಅಪಘಾತ ಹೇಗೆ ಸಂಭವಿಸಿದೆ ಎಂಬುದರ ಬಗ್ಗೆ ಮಹಿಳೆಯ ಪತಿ ನಾಗರಾಜು ಲಿಖಿತವಾಗಿ ದೂರು ನೀಡಿದ್ದಾರೆ. ನಾವು ಲಾರಿ ಚಾಲಕನನ್ನು ಬಂಧಿಸಿ, ಲಾರಿ ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದೇವೆ. ಆದರೆ, ತಪ್ಪು ತಿಳುವಳಿಕೆಯಿಂದ ಸಾರ್ವಜನಿಕರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ನಾನು ಹಾಗೂ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಾರ್ವಜನಿಕರಿಗೆ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದರು.

ಒಂದನೇ ಪುಟದಿಂದ

ಜೆಡಿಎಸ್ ಶಾಸಕರು ಅಸ್ತು

ಪ್ರಯತ್ನದ ಫಲವಾಗಿ ಮೈತ್ರಿಗೆ ಸರ್ವಾನುಮತದ ಒಪ್ಪಿಗೆ ಪಡೆದಿದ್ದಾರೆ.

ಮುಸ್ಲಿಂ ಬಾಂಧವರು ಅಪಪ್ರಚಾರಕ್ಕೆ ಕಿವಿಗೊಡಬೇಡಿ...!: ಇದೇ ವೇಳೆ ಮಾತನಾಡಿದ ಮಾಜಿ ಸಿಎಂ ಕುಮಾರಸ್ವಾಮಿ, ಮುಸ್ಲಿಂ ಬಾಂಧವರು ಎಚ್ಚರಿಕೆಯಿಂದ ಇರಬೇಕು. ಕೆಲ ಕಾಂಗ್ರೆಸ್ ನಾಯಕರು ನನ್ನ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ನನಗೆ ಮತಕ್ಕಾಗಿ ಒಂದು ಸಮಾಜವನ್ನು ಓಲೈಕೆ ಮಾಡುವ ಅವಶ್ಯಕತೆಯಿಲ್ಲ ಎಂದು ಖಡಕ್ಕಾಗಿ ನುಡಿದಿದ್ದಾರೆ. ಬಿಜೆಪಿ ಜೊತೆಗಿನ ಮೈತ್ರಿ ಸಂಬಂಧಕ್ಕೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಗಿದೆ. ಮುಸ್ಲಿಂ ಬಾಂಧವರ ಬಗ್ಗೆ ನಮ್ಮ ಕಮಿಟ್‌ಮೆಂಟ್ ಏನು ಅಂತ ಎಲ್ಲರಿಗೂ ಗೊತ್ತು. ಕಳೆದ ಬಾರಿ ಉಂಟಾದ ಸಮಸ್ಯೆ ಬಗ್ಗೆ ಧ್ವನಿ ಎತ್ತಿ ಅವರ ಪರವಾಗಿ ನಿಂತಿದ್ದು ನಾನು. ಹಾಗಾಗಿ ಯಾವುದೇ ಅಪಪ್ರಚಾರಕ್ಕೆ ಕಿವಿಗೊಡಬೇಡಿ ಎಂದು ಮನವಿ ಮಾಡಿದ್ದಾರೆ. ಮುಂದಿನ ಒಂದು ತಿಂಗಳ ಒಳಗೆ 31 ಜಿಲ್ಲೆಗಳಲ್ಲೂ ಸಭೆ ಮಾಡಲಿದ್ದೇವೆ ಪಕ್ಷದ ಮುಖಂಡರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ ಕೆಲಸವಾಗುತ್ತದೆ. ಮೈತ್ರಿಯಿಂದ ನಮ್ಮ ಅಭ್ಯರ್ಥಿಗಳಿಗೆ ಟಿಕೆಟ್ ಸಮಸ್ಯೆ ಉಂಟಾಗುವುದಿಲ್ಲ. ಈ ಬಗ್ಗೆ ನಾನು ಭರವಸೆ ಕೊಡುತ್ತೇನೆ. ಈ ಬಗ್ಗೆ ಮುಕ್ತವಾಗಿ ಮತ್ತೊಮ್ಮೆ ಚರ್ಚೆ ಮಾಡುತ್ತೇವೆ ಎಂದು ತಿಳಿಸಿದ್ದಾರೆ.ಹೊಂದಾಣಿಕೆಯಿಂದ ಯಾರ ರಾಜಕೀಯ ಭವಿಷ್ಯವನ್ನೂ ಹೊಸಕಿಹಾಕಲ್ಲ. ಜಿ.ಟಿ ದೇವೇಗೌಡ ಅವರ ನೇತೃತ್ವದ ಕೋರ್ ಕಮಿಟಿ ಇದೆ. ಈ ಸಮಿತಿ ಮೂಲಕ ಸಂಘಟನೆ ಮಾಡ್ತೀವಿ. ಕಾಂಗ್ರೆಸ್ ನಾಯಕರು ನನ್ನ ಬಗ್ಗೆ ಏನು ಬೇಕಾದರೂ ಅವಹೇಳನ ಮಾಡಲಿ. ಅದಕ್ಕೆ ನನ್ನ ಕಾರ್ಯಕರ್ತರು ಹಾಗೂ ನಾಡಿನ ಜನತೆ ಮುಂದಿನ ದಿನಗಳಲ್ಲಿ ಉತ್ತರ ಕೊಡುತ್ತಾರೆ ಎಂದು ಹೇಳಿದ್ದಾರೆ.

ಶಾಸಕರ ಪ್ರಮಾಣ: ಇದೇ ವೇಳೆ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಜಿ.ಟಿ.ದೇವೇಗೌಡರು, ಪಕ್ಷಕ್ಕೆ ನಿಷ್ಠರಾಗಿರುತ್ತೇವೆ, ಮತ್ತೊಮ್ಮೆ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ನಾವೆಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇವೆ ಎಂದು ಪ್ರಮಾಣ ಮಾಡಿಸಿದರು.

ಮೈಸೂರಲ್ಲಿ ಟ್ರಾಫಿಕ್ ಜಾಮ್

ಸುತ್ತು ಹಾಕಿದರು. ಅರಮನೆ ಉತ್ತರದ್ವಾರದ ಮುಂಭಾಗದಲ್ಲೂ ವಾಹನಗಳನ್ನು ನಿಲ್ಲಿಸಲಾಗಿತ್ತು ಅಲ್ಲದೆ ಬ್ಯಾರಿಕೇಡ್ ಪಕ್ಕದಲ್ಲಿ ನಿಲ್ಲಿಸಿಕೊಂಡಿದ್ದರು. ಅರಮನೆ ಸುತ್ತ ಒಂದಿಂಚೂ ಜಾಗವಿಲ್ಲದಂತೆ ವಾಹನಗಳು ಸಾಗುತ್ತಿದ್ದವು. ಕಾರುಗಳ ನಡುವೆ ದ್ವಿಚಕ್ರ ವಾಹನ ಸವಾರರು ಹೈರಾಣಾದರು. ಅರಮನೆ ಸುತ್ತು ಹಾಕಲು ಒಂದು ಗಂಟೆ ಸಮಯ ಹಿಡಿಯಿತು. ವಾಹಗಳ ಹಾರನ್ ಸದ್ದು ಮಾರ್ಧನಿಸಿತ್ತು. ಅಲ್ಲದೆ ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸು ರಸ್ತೆ, ಗಾಂಧಿ ವೃತ್ತ, ಅಶೋಕ ರಸ್ತೆ, ಇರ್ವಿನ್ ರಸ್ತೆಯಲ್ಲೂ ಟ್ರಾಫಿಕ್ ಜಾಮ್ ಉಂಟಾಗಿತ್ತು


ನಿಲ್ದಾಣದ ಬಳಿ ದುರಸ್ತಿ: ಸಿಟಿ ಬಸ್ ನಿಲ್ದಾಣದಿಂದ ಸಯ್ಯಾಜಿರಾವ್ ರಸ್ತೆ ಕಡೆಯಿಂದ ಎಲ್ಲಾ ಮಾರ್ಗಗಳಿಗೂ ಸಂಚರಿಸುವ ಬಸ್‌ಗಳು, ವಾಪಸ್ಸಾಗುವಾಗ ಹಾರ್ಡಿಂಜ್ ವೃತ್ತ, ಚಾಮರಾಜ ವೃತ್ತದ ಮೂಲಕ ಸಾಗಿ ಗರುಡ ಮಹಲ್ ಎದುರು ನಿಲ್ದಾಣ ಪ್ರವೇಶಿಸುತ್ತಿದ್ದವು. ಆದರೆ ಆ ಸ್ಥಳದಲ್ಲಿ ದುರಸ್ತಿ ಕಾರ್ಯ ಪ್ರಗತಿಯಲ್ಲಿರುವುದರಿಂದ ಎಲ್ಲಾ ಬಸ್‌ಗಳು ಕೆ.ಆರ್.ವೃತ್ತದ ಮೂಲಕ ಸಾಗಿ ಸಯ್ಯಾಜಿರಾವ್ ರಸ್ತೆಯಲ್ಲಿನ ಎಕ್ಸಿಟ್ ದ್ವಾರದಲ್ಲೇ ನಿಲ್ದಾಣಕ್ಕೆ ಹೋಗಬೇಕಿದೆ. ಸದ್ಯ ಬಸ್‌ಗಳು ಚಾಮರಾಜ ವೃತ್ತದಿಂದ ಪ್ರತ್ಯೇಕ ಮಾರ್ಗದಲ್ಲಿ ಸುಗಮವಾಗಿ ನಿಲ್ದಾಣಕ್ಕೆ ಹೋಗಲು ಸಾಧ್ಯವಾಗದ ಕಾರಣದಿಂದಲೂ ಟ್ರಾಫಿಕ್ ಜಾಮ್ ಹೆಚ್ಚಾಗುತ್ತಿದೆ. ಅಲ್ಲದೆ ಕಾಡಾ ಕಚೇರಿ ಗೇಟ್‌ನಿಂದ ಸಿಗ್ನಲ್‌ವರೆಗೆ ರಸ್ತೆಯ ಅರ್ಧಭಾಗ ಕಾಂಕ್ರೀಟ್ ಕಾಮಗಾರಿ ಮಾಡಿದ್ದು, ಉಳಿದಾರ್ಧ ರಸ್ತೆಯಲ್ಲೇ ದ್ವಿಮುಖ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ. ಇಲ್ಲಿ ವಾಹನಗಳು ನಿಧಾನವಾಗಿ ಚಲಿಸುವುದರಿಂದ ಸಯ್ಯಾಜಿರಾವ್ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುವ ಸ್ಥಿತಿ ಉಂಟಾಗಿದೆ. ಇನ್ನು ಮೃಗಾಲಯದ ಬಳಿಯೂ ವಾಹನಗಳ ನಿಲುಗಡೆಗೆ ಚಾಲಕರು ಹರಸಾಹಸಪಡುವಂತಾಗಿತ್ತು. ಕಾರು ಚಾಲಕರು ಅಕ್ಕಪಕ್ಕದ ರಸ್ತೆಗಳ ಬದಿ ನಿಲ್ಲಿಸಿಕೊಂಡಿದ್ದರು. ಚಾಮುಂಡಿಬೆಟ್ಟದ ರಸ್ತೆಯಲ್ಲೂ ವಾಹನ ದಟ್ಟಣೆ ಕಂಡು ಬಂದಿತು. ಬೆಟ್ಟದಲ್ಲೂ ಪಾರ್ಕಿಂಗ್ ಲಾಟ್ ಭರ್ತಿಯಾಗಿತ್ತು ಎಂದು ತಿಳಿದುಬಂದಿದೆ. ವಾಹನ ದಟ್ಟಣೆ ನಿರ್ವಹಿಸಲು ಪೊಲೀಸರು ಹರಸಾಹಸಪಟ್ಟರು. ಪ್ರವಾಸಿಗರ ದಾಂಗುಂಡಿಯಿಂದ ವ್ಯಾಪಾರಿಗಳಲ್ಲಿ ಮಂದಹಾಸ ಮೂಡಿತ್ತು. ಪ್ರವಾಸಿ ಸ್ಥಳಗಳಲ್ಲಿ ತಿಂಡಿ ತಿನಿಸು, ಮಕ್ಕಳ ಆಟಿಕೆಗಳು ಇನ್ನಿತರ ವಸ್ತುಗಳನ್ನು ಮಾರಾಟ ಮಾಡುವವರು ಖುಷಿಯಾಗಿದ್ದರು.

ನವರಾತ್ರಿ ಸಂದರ್ಭದಲ್ಲಿ ಉಂಟಾಗುವ ಟ್ರಾಫಿಕ್ ಜಾಮ್ ಇಂದು ಕಂಡುಬಂದಿತು. ದಸರೆ ಆರಂಭಕ್ಕೆ ದಿನಗಣನೆ ಆರಂಭವಾಗಿದ್ದು, ಪ್ರವಾಸಿಗರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಲೇ ಇದೆ. ದೀಪಾಲಂಕಾರ ಇನ್ನಿತರ ಕಾರ್ಯಕ್ರಮಗಳು ಗರಿಗೆದರುತ್ತಿದ್ದಂತೆ ಮೈಸೂರಿನತ್ತ ಜನಸಾಗರ ಹರಿದುಬರುವ ಲಕ್ಷಣಗಳು ಗೋಚರಿಸಿವೆ.

ಬಜೆಟ್‌ನಲ್ಲಿ ಹಿರಿಯರಿಗೆ ಪಿಂಚಣಿ ಹೆಚ್ಚಳ

ಪ್ರತಿಯೊಬ್ಬರೂ ವಿಶ್ವ ಮಾನವರಾಗಿ ಬದುಕಿ, ವಿಶ್ವ ಮಾನವರಾಗಿಯೇ ಇಹಲೋಕ ತ್ಯಜಿಸಬೇಕು ಎಂದು ತಿಳಿಸಿದ ಮುಖ್ಯಮಂತ್ರಿ, ಹಿರಿಯರನ್ನು ಗೌರವದಿಂದ ನಡೆಸಿಕೊಳ್ಳುವುದು ಮತ್ತು ಅವರ ಬದುಕಿನ ಮೌಲ್ಯಗಳನ್ನು ನಾವು ಅಳವಡಿಸಿ ಕೊಳ್ಳುವುದೇ ಹಿರಿಯರಿಗೆ ನಾವು ನೀಡುವ ಗೌರವ. ನಾವು ನೀವೆಲ್ಲಾ ಎಷ್ಟು ವರ್ಷ ಬದುಕುತ್ತೀವಿ ಎನ್ನುವುದಕ್ಕಿಂತ ಇದ್ದಷ್ಟು ದಿನ ಸಾರ್ಥಕ ಬದುಕು ನಡೆಸುವುದು ಉತ್ತಮ ಎಂದರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮತ್ತಿತರ ಹಿರಿಯ ಅಧಿಕಾರಿಗಳು ಕಾರ್ಯ ಕ್ರಮದಲ್ಲಿ ಉಪಸ್ಥಿತರಿದ್ದರು.

ಭಾರತದ ಮೊದಲ ಆದಿತ್ಯ ಎಲ್–1 ಮಿಷನ್‌ನಿಂದ ಇಸ್ರೋಗೆ ದೊಡ್ಡ ಗೆಲುವು!



ಬೆಂಗಳೂರು, ಅ.1–ಚಂದ್ರಯಾನ–3 ಮಿಷನ್ ಯಶಸ್ಸಿನ ನಂತರ, ಇಸ್ರೋ ಇಂದು ಭಾರತದ ಮೊದಲ ಸೂರ್ಯ ಮಿಷನ್ ಆದಿತ್ಯ–ಎಲ್ 1 ಬಾಹ್ಯಾಕಾಶ ನೌಕೆಯು ಭೂಮಿಯ ಪ್ರಭಾವ ವಲಯದಿಂದ ಯಶಸ್ವಿಯಾಗಿ ಹೊರಚಿಮ್ಮಿದೆ ಎಂದು ಬಾಹ್ಯಾಕಾಶ ಸಂಸ್ಥೆ ಹೇಳಿದೆ. ಇದುವರೆಗೆ ಆದಿತ್ಯ–ಎಲ್1 ಭೂಮಿಯಿಂದ 9.2 ಲಕ್ಷ ಕಿಲೋಮೀಟರ್‌ಗೂ ಹೆಚ್ಚು ದೂರ ಕ್ರಮಿಸಿದೆ. ಇಸ್ರೋ 'X' ನಲ್ಲಿ ಟ್ವೀಟ್ ಮಾಡಿದ್ದು ಆದಿತ್ಯ–ಐ1 ಭೂಮಿಯಿಂದ 9.2 ಲಕ್ಷ ಕಿಲೋಮೀಟರ್‌ಗಳಿಗಿಂತ ಹೆಚ್ಚು ದೂರವನ್ನು ಕ್ರಮಿಸಿದೆ. ಇದು ಈಗ ಸೂರ್ಯ–ಭೂಮಿಯ ಲಗ್ರೇಂಜ್ ಪಾಯಿಂಟ್ 1 (ಐ1) ಕಡೆಗೆ ತನ್ನ ದಾರಿಯನ್ನು ಕಂಡುಕೊಳ್ಳುತ್ತಿದೆ. ಇಸ್ರೋ ಭೂಮಿಯ ಪ್ರಭಾವದ ಗೋಳದ ಹೊರಗೆ ಬಾಹ್ಯಾಕಾಶ ನೌಕೆಯನ್ನು ಕಳುಹಿಸುತ್ತಿರುವುದು ಇದು ಎರಡನೇ ಬಾರಿ. ಮೊದಲ ಬಾರಿಗೆ ಮಾರ್ಸ್ ಆರ್ಬಿಟರ್ ಮಿಷನ್‌ನಲ್ಲಿ ಕಳುಹಿಸಿತ್ತು.

ಆದಿತ್ಯ–ಎಲ್ 1 ಸೌರ ಮಿಷನ್ ಬಾಹ್ಯಾಕಾಶ ನೌಕೆಯು ಭೂಮಿಯ ಸುತ್ತಲಿನ ಕಣಗಳ ನಡವಳಿಕೆಯನ್ನು ವಿಶ್ಲೇಷಿಸಲು ವಿಜ್ಞಾನಿಗಳಿಗೆ ಸಹಾಯ ಮಾಡುವ ಡೇಟಾವನ್ನು ಸಂಗ್ರಹಿಸಲು ಪ್ರಾರಂಭಿಸಿದೆ ಎಂದು ಇಸ್ರೋ ಈ ತಿಂಗಳ ಆರಂಭದಲ್ಲಿ ತಿಳಿಸಿತ್ತು. ಎಲ್1 ಸುತ್ತ ಸಂಗ್ರಹಿಸಿದ ಮಾಹಿತಿಯು ಸೌರ ಮಾರುತದ ಮೂಲ ಮತ್ತು ಬಾಹ್ಯಾಕಾಶ ಹವಾಮಾನ ವಿದ್ಯಮಾನಗಳ ಅನಿಸೊಟ್ರೋಪಿಯ ಒಳನೋಟವನ್ನು ನೀಡುತ್ತದೆ ಎಂದು ಅದು ಹೇಳಿದೆ. ಪಿಎಸ್‌ಎಲ್‌ವಿ–ಸಿ57 ರಾಕೆಟ್‌ನಿಂದ ಆದಿತ್ಯ–ಎಲ್1 ಉಡಾವಣೆಯನ್ನು ಸೆಪ್ಟೆಂಬರ್ 2ರಂದು ಇಸ್ರೋ ಯಶಸ್ವಿಯಾಗಿ ಪೂರ್ಣಗೊಳಿಸಿತ್ತು. ಆದಿತ್ಯ–ಎಲ್1 ಬಾಹ್ಯಾಕಾಶ ನೌಕೆಯು ಸೂರ್ಯನನ್ನು ಅಧ್ಯಯನ ಮಾಡಲು ಒಟ್ಟು ಏಳು ವಿಭಿನ್ನ ಪೇಲೋಡ್‌ಗಳನ್ನು ಹೊತ್ತೊಯ್ಯುತ್ತಿದೆ. ಇವುಗಳಲ್ಲಿನ ನಾಲ್ಕು ಸೂರ್ಯನ ಬೆಳಕನ್ನು ವೀಕ್ಷಿಸುತ್ತವೆ. ಉಳಿದ ಮೂರು ಪ್ಲಾಸ್ಮಾ ಮತ್ತು ಕಾಂತೀಯ ಕ್ಷೇತ್ರದ ಇನ್–ಸಿಟು ನಿಯತಾಂಕಗಳನ್ನು ಅಳೆಯುತ್ತವೆ. ಆದಿತ್ಯ ಐ1 ಎರಡು ಮುಖ್ಯ ಪೇಲೋಡ್‌ಗಳನ್ನು ಹೊಂದಿದೆ. ವಿಸಿಬಲ್ ಎಮಿಷನ್ ಲೈನ್ ಕರೋನಾಗ್ರಫಿ (VELC) ಮತ್ತು ಸೌರ ನೇರಳಾತೀತ ಇಮೇಜಿಂಗ್ ಟೆಲಿಸ್ಕೋಪ್ (SUIT). ಲ್ಯಾಗ್ರೇಂಜ್ ಪಾಯಿಂಟ್ ತಲುಪಿದ ನಂತರ VELC ಪೇಲೋಡ್ ಪ್ರತಿದಿನ 1,440 ಚಿತ್ರಗಳನ್ನು ರವಾನಿಸುತ್ತದೆ. ಆದ್ದರಿಂದ, ಈ ಪೇಲೋಡ್ ಅನ್ನು ಆದಿತ್ಯ–ಐ1 ರ ಅತ್ಯಂತ ಪ್ರಮುಖ ಪೇಲೋಡ್ ಎಂದು ಪರಿಗಣಿಸಲಾಗಿದೆ. ಆದಿತ್ಯ–ಐ1 ಅನ್ನು ಲಗ್ರಾಂಜಿಯನ್ ಪಾಯಿಂಟ್ 1 (ಐ1) ಸುತ್ತ ಹಾಲೋ ಕಕ್ಷೆಯಲ್ಲಿ ಇರಿಸಲಾಗುತ್ತದೆ. ಇದು ಅದೇ ಸಾಪೇಕ್ಷ ಸ್ಥಾನದಲ್ಲಿ ಸೂರ್ಯನ ಸುತ್ತ ಸುತ್ತುತ್ತದೆ ಮತ್ತು ಆದ್ದರಿಂದ ನಿರಂತರವಾಗಿ ಸೂರ್ಯನನ್ನು ವೀಕ್ಷಿಸಬಹುದು.

ಏಷ್ಯನ್ ಗೇಮ್ಸ್–2023 ತಜಿಂದರ್ ಪಾಲ್ ಸಿಂಗ್ ತೂರ್, ಅವಿನಾಶ್ ಸೇಬಲ್ ಚಿನ್ನ ಸಾಧನೆ





ಹ್ಯಾಂಗ್‌ಝೌ, ಅ.1– ಚೀನಾದ ಹ್ಯಾಂಗ್‌ಝೌನಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್ 2023ರಲ್ಲಿ ಭಾರತದ ಪದಕಗಳ ಬೇಟೆ ಮುಂದುವರೆದಿದ್ದು, ಷಾಟ್‌ಪುಟ್ ಪಟು ತಜಿಂದರ್ ಪಾಲ್ ಸಿಂಗ್ ತೂರ್ ಹಾಗೂ ಪುರುಷರ 3,000 ಮೀಟರ್ ಸ್ಟೀಪಲ್ ಚೇಸ್‌ನಲ್ಲಿ ಅವಿನಾಶ್ ಸೇಬಲ್ ಚಿನ್ನದ ಪದಕ ಗೆದ್ದಿದ್ದಾರೆ.

ತನ್ನ ಮೊದಲ ಎರಡು ಪ್ರಯತ್ನಗಳಲ್ಲಿ ಫೌಲ್ ಮಾಡಿದ ಹೊರತಾಗಿಯೂ ಭಾನುವಾರ ನಡೆದ ಪುರುಷರ ಷಾಟ್‌ಪುಟ್ ಫೈನಲ್‌ನಲ್ಲಿ ತಜಿಂದರ್ ಪಾಲ್ ಸಿಂಗ್ ಅತ್ಯುತ್ತಮ ಪ್ರದರ್ಶನ ನೀಡಿದರು. 20.36 ಮೀಟರ್ ದೂರ ಎಸೆಯುವ ಮೂಲಕ ತಜಿಂದರ್ ಪಾಲ್ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಬ್ಯಾಕ್–ಟು–ಬ್ಯಾಕ್ ಚಿನ್ನದ ಪದಕಗಳೊಂದಿಗೆ ಗಮನಾರ್ಹ ಸಾಧನೆ ಮಾಡಿದ್ದಾರೆ. ಮತ್ತೊಂದೆಡೆ ಪುರುಷರ 3,000 ಮೀಟರ್ ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ಭಾರತದ ಅವಿನಾಶ್ ಸೇಬಲ್ ಚಿನ್ನದ ಪದಕ ಗೆದ್ದರು. ಅವಿನಾಶ್ 8.19 54 ಸೆಕೆಂಡ್‌ನಲ್ಲಿ ನಿಗದಿತ ಗುರಿ ತಲುಪುವ ಮೂಲಕ ಭಾರತಕ್ಕೆ 12ನೇ ಚಿನ್ನದ ಪದಕ ತಂದುಕೊಟ್ಟರು.

ಪುರುಷರ 3,000 ಮೀಟರ್ ಸ್ಟೀಪಲ್ ಚೇಸ್‌ನಲ್ಲಿ ಭಾರತಕ್ಕೆ ಇದು ಮೊದಲ ಚಿನ್ನದ ಪದಕವಾಗಿದೆ. ಈ ಮೂಲಕ ಭಾರತ 13 ಚಿನ್ನದ ಪದಕ ಪಡೆದುಕೊಂಡಿದ್ದು, ಪದಕಗಳ ಗಳಿಕೆಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಚಾಮುಂಡಿಬೆಟ್ಟ ಪರಿಸರ ಮಾಲಿನ್ಯ ಮುಕ್ತ ಮಾಡಲು ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ

ಮೈಸೂರು,ಅ.1(ಎಂಟಿವೈ)– ಪ್ರಮುಖ ಧಾರ್ಮಿಕ ಹಾಗೂ ಪ್ರವಾಸಿ ತಾಣ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧದ ಜೊತೆಗೆ ಧಾರ್ಮಿಕ ಭಾವನೆಗೆ ಧಕ್ಕೆಯುಂಟು ಮಾಡುವ ಚಟುವಟಿಕೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಸೆ.1ರಿಂದ ಜಾರಿಗೊಳಿಸಿರುವ ನಿಯಮ ಉಲ್ಲಂಘನೆಗೆ 24 ದಿನದಲ್ಲಿ 66,500 ರೂ. ದಂಡ ವಸೂಲಿ ಮಾಡಲಾಗಿದೆ. ಚಾಮುಂಡಿಬೆಟ್ಟದಲ್ಲಿ ಪುಂಡಾಟಿಕೆಗೆ ಕಡಿವಾಣ ಹಾಕಲು ಅರಣ್ಯ ಇಲಾಖೆ ಕೈಗೊಂಡ ಕಟ್ಟುನಿಟ್ಟಿನ ಕ್ರಮದಿಂದಾಗಿ ಬೆಟ್ಟದಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದಿದ್ದು, ಆದರೂ ನಿಯಮಗಾಳಿಗೆ ತೂರುವವರ ಸಂಖ್ಯೆ ಹೆಚ್ಚಾಗಿದೆ. ಮತ್ತಷ್ಟು ಬಿಸಿ ಮುಟ್ಟಿಸಲು ಅರಣ್ಯ ಇಲಾಖೆ ಕ್ರಮ ಕೈಗೊಂಡಿದೆ.

ಪ್ಲಾಸ್ಟಿಕ್ ನಿಷೇಧದ ಜೊತೆಗೆ ಬೆಟ್ಟದ ರಸ್ತೆಯಲ್ಲಿ ವಾಹನ ನಿಲುಗಡೆ, ಧೂಮಪಾನ, ಮದ್ಯಪಾನ ನಿಷೇಧಕ್ಕೆ ಕಟ್ಟುನಿಟ್ಟಿನ ನಿಯಮವನ್ನು ಸೆ.1ರಿಂದ ಜಾರಿಗೊಳಿಸಲಾಗಿದೆ. ಆದರೆ ಮೊದಲ 5 ದಿನ– ಸೆ.1ರಿಂದ 5ರವರೆಗೆ 134 ಶೂನ್ಯ ದಂಡ ಪಾವತಿ ರಶೀದಿ ನೀಡಿ ಜಾಗೃತಿ ಮೂಡಿಸಲಾಗಿತ್ತು. ಸೆ.6ರಿಂದ ನಿಯಮ ಉಲ್ಲಂಘಿಸಿದವರಿಂದ ದಂಡ ವಸೂಲಿ ಮಾಡಲಾಗುತ್ತಿತ್ತು. ಸೆ.6ರಿಂದ 30ರವರೆಗೆ ಅರಣ್ಯ ಇಲಾಖೆ 96 ಪ್ರಕರಣ ದಾಖಲಿಸಿ 66,500 ರೂ. ದಂಡ ವಸೂಲಿ ಮಾಡಿದೆ. ಅವುಗಳಲ್ಲಿ ಪ್ಲಾಸ್ಟಿಕ್ ಬಿಸಾಡಿದ್ದಕ್ಕೆ ಒಂದು ಪ್ರಕರಣದಲ್ಲಿ 500 ರೂ., ಅರಣ್ಯ ಪ್ರದೇಶದಲ್ಲಿ ನೋ ಪಾರ್ಕಿಂಗ್ ಉಲ್ಲಂಘಿಸಿ ವಾಹನ ನಿಲುಗಡೆ ಮಾಡಿದ್ದ 37 ಪ್ರಕರಣದಿಂದ 37,000 ರೂ., ಅರಣ್ಯ ಪ್ರದೇಶಕ್ಕೆ ಅತಿಕ್ರಮಣ ಪ್ರವೇಶ ಮಾಡಿದ 58 ಪ್ರಕರಣದಿಂದ 29,000 ರೂ. ದಂಡ ಸಂಗ್ರಹಿಸಲಾಗಿದೆ.

ಅರಣ್ಯ ಇಲಾಖೆ, ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 76 ಹಾಗೂ 99(1)ರಂತೆ ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 69ರಡಿ ಕಾನೂನು ಬಾಹಿರ ಕೃತ್ಯದಲ್ಲಿ ಬಾಗಿಯಾಗುವವರಿಗೆ ದಂಡ ವಿಧಿಸಲು ಅರಣ್ಯ ಸಿಬ್ಬಂದಿಯ ತಂಡ ಕಾರ್ಯೋನ್ಮುಖವಾಗಿದೆ. ರಜೆ ಹಾಗೂ ವಿಶೇಷ ಸಂದರ್ಭದಲ್ಲಿ ನಿಯಮ ಉಲ್ಲಂಘಿಸುವವರಿಗೆ ಬಿಸಿ ಮುಟ್ಟಿಸಲು ಇತರೆ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಾಚರ್‌ಗಳನ್ನು ಕರೆಸಿಕೊಂಡು ಕಾರ್ಯಾಚರಣೆ ನಡೆಸಲಾಗುತ್ತಿದೆ.

ದಂಡದ ನಿಯಮ: ಅರಣ್ಯ ಇಲಾಖೆ ಹೊಸದಾಗಿ ಜಾರಿಗೆ ತಂದಿರುವ ನಿಯಮದಂತೆ ಚಾಮುಂಡಿಬೆಟ್ಟ ಅರಣ್ಯ ಪ್ರದೇಶಕ್ಕೆ ಅತಿಕ್ರಮ ಪ್ರವೇಶಕ್ಕೆ 500 ರೂ., ಬೆಟ್ಟದ ರಸ್ತೆಯಲ್ಲಿ ಎಲ್ಲೆಂದರಲ್ಲಿ ವಾಹನ ನಿಲುಗಡೆಗೆ 1000 ರೂ., ರಸ್ತೆಯುದ್ದಕ್ಕೂ ಆಹಾರ ಪೊಟ್ಟಣ, ಪ್ಲಾಸ್ಟಿಕ್ ಕವರ್, ನೀರಿನ ಬಾಟಲಿ ಸೇರಿದಂತೆ ಇನ್ನಿತರ ತ್ಯಾಜ್ಯ ಎಸೆದರೆ 500 ರೂ., ಬೆಟ್ಟದ ಮೇಲಿನ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಮಾರಾಟ, ಬಳಕೆ ಮಾಡಿ ಮೊದಲ ಬಾರಿಗೆ ಸಿಕ್ಕಿ ಬಿದ್ದರೆ 2500 ರೂ, ಎರಡನೇ ಬಾರಿ ಸಿಕ್ಕಿ ಬಿದ್ದರೆ 5 ಸಾವಿರ, ಮೂರನೇ ಬಾರಿ ಸಿಕ್ಕಿ ಬಿದ್ದರೆ 10 ಸಾವಿರ ದಂಡ ವಿಧಿಸಿ, ಲೈಸನ್ಸ್ ರದ್ದು ಮಾಡಲು ಶಿಫಾರಸ್ಸು ಮಾಡುವುದಾಗಿ ಎಚ್ಚರಿಕೆ ನೀಡಲಾಗಿದೆ. ಬೆಟ್ಟದ ನಿವಾಸಿಗಳನ್ನು ಹೊರತುಪಡಿಸಿ, ರಾತ್ರಿ 10ರಿಂದ ಬೆಳಗ್ಗೆ 6 ಗಂಟೆವರೆಗೆ ಅನಧಿಕೃತವಾಗಿ ಬೆಟ್ಟ ಪ್ರವೇಶಿಸುವ ಹೊರಗಿನವರಿಗೆ 2500 ರೂ., ಈ ವೇಳೆ ಮದ್ಯಪಾನ, ಧೂಮಪಾನ ಮಾಡಿದ್ದರೆ, ಇನ್ನಿತರ ಹಾನಿಕಾರಕ ವಸ್ತುಗಳನ್ನು ಹೊಂದಿದ್ದರೆ 5 ಸಾವಿರ ರೂ. ದಂಡ, ವನ್ಯಪ್ರಾಣಿಗಳಿಗೆ ಆಹಾರ ನೀಡುವುದು, ಉಪಟಳ ನೀಡುವವರಿಗೆ 1 ಸಾವಿರ ರೂ., ವಿವಿಧ ಸ್ವರೂಪದಲ್ಲಿ ಅರಣ್ಯ ಸಂಪತ್ತಿಗೆ ಹಾನಿಯುಂಟು ಮಾಡುವವರಿಗೂ 1 ಸಾವಿರ ರೂ. ದಂಡ ವಿಧಿಸಲಾಗುತ್ತದೆ.

ನಾನಾ ನಿಯಮ ಉಲ್ಲಂಘನೆಯಡಿ 24 ದಿನದಲ್ಲಿ 66,500 ರೂ. ದಂಡ ವಸೂಲಿ




ಚಾಮುಂಡಿಬೆಟ್ಟದ ರಸ್ತೆಯಲ್ಲಿ ವಾಹನ ನಿಲುಗಡೆ ಮಾಡಿದ್ದ ಸವಾರರಿಗೆ ಅರಣ್ಯ ಸಿಬ್ಬಂದಿ ದಂಡ ವಿಧಿಸುತ್ತಿರುವುದು.

> "ಚಾಮುಂಡಿಬೆಟ್ಟದಲ್ಲಿ ಪರಿಸರ ಮಾಲಿನ್ಯ ತಡೆ ಹಾಗೂ ಪಾವಿತ್ರ್ಯತೆ ಕಾಪಾಡಲು ಜಾರಿಗೆ ತಂದಿರುವ ನಿಯಮ ಪಾಲನೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದ್ದು ಸಿಬ್ಬಂದಿ ಮೂಲಕ ವಾಹನ ಸವಾರರು, ಪ್ರವಾಸಿಗರು, ಭಕ್ತರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ರಸ್ತೆಬದಿ ವಾಹನ ನಿಲ್ಲಿಸದಂತೆ ಸೂಚನೆ ನೀಡಿದ್ದೇವೆ. ಇದನ್ನು ಪಾಲನೆ ಮಾಡದವರಿಗೆ ದಂಡ ವಿಧಿಸಲಾಗುತ್ತಿದೆ. ಅಲ್ಲದೆ, ಅತಿಕ್ರಮಣ ಪ್ರವೇಶ, ಪ್ಲಾಸ್ಟಿಕ್ ಮಾರಾಟ ಸೇರಿದಂತೆ ಪರಿಸರಕ್ಕೆ ಮಾರಕವಾದ ವಸ್ತುಗಳನ್ನು ಅರಣ್ಯ ಪ್ರದೇಶದಲ್ಲಿ ಎಸೆಯುವವರಿಗೆ ದಂಡ ವಿಧಿಸಲಾಗುತ್ತಿದೆ. ಚಾಮುಂಡಿಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತವಾಗಿಸಿ, ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಸಾರ್ವಜನಿಕರು ಅರಣ್ಯ ಇಲಾಖೆ ಜಾರಿಗೊಳಿಸಿರುವ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
>
> –ಬಸವರಾಜು, ಡಿಸಿಎಫ್

ಕೆ–ಸೆಟ್ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು, ಅ.1–ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಡೆಸುವ ಕೆ–ಸೆಟ್ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿಸ್ತರಿಸಿ ಆದೇಶ ಹೊರಡಿಸಿದೆ. ಈ ಮೊದಲು ಹೊರಡಿಸಿದ್ದ ಪ್ರಕಟಣೆಯ ಪ್ರಕಾರ, ಅರ್ಜಿ ಸಲ್ಲಿಕೆಗೆ ಅಕ್ಟೋಬರ್ 3 ಕೊನೆ ದಿನವಾಗಿತ್ತು. ಇದೀಗ ಈ ಗಡುವನ್ನು ಅಕ್ಟೋಬರ್ 9ರವರೆಗೂ ವಿಸ್ತರಿಸಲಾಗಿದೆ. ಈ ಮೂಲಕ ಅಭ್ಯರ್ಥಿಗಳು ಕೊನೆಯ ದಿನದಂದು ಸಂಜೆ 5 ಗಂಟೆಯವರೆಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ, ಶನಿವಾರ ನೀಡಿರುವ ಪತ್ರಿಕಾ ಪ್ರಕಟಣೆಯಲ್ಲಿ, ಡಿಜಿಟಲೀಕರಣಗೊಂಡ ಅಂಚೆ ಕಚೇರಿಗಳ ಮೂಲಕ ಶುಲ್ಕ ಪಾವತಿಸಲು ಅ.11ರವರೆಗೆ ಅವಕಾಶವಿದೆ ಎಂದು ತಿಳಿಸಿದ್ದಾರೆ. ನವೆಂಬರ್ 5ರಂದು ಪರೀಕ್ಷೆ ನಡೆಯಲಿದ್ದು, ಸಮಗ್ರ ಅಧಿಸೂಚನೆ, ಪಠ್ಯಕ್ರಮ ಮತ್ತು ಅಪ್ಲಿಕೇಶನ್ ಲಿಂಕ್ ಸೇರಿದಂತೆ ಹೆಚ್ಚಿನ ವಿವರಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ (http://kea.kar.nic.in) ಕಾಣಬಹುದು.

ರವಿ ಚನ್ನಣ್ಣನವರ್ ಮತ್ತೆ ವರ್ಗಾವಣೆ



ಬೆಂಗಳೂರು, ಅ.1– ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕ ಸ್ಥಾನದಿಂದ ಇತ್ತೀಚೆಗಷ್ಟೇ ರಾಜ್ಯ ಆಂತರಿಕ ಭದ್ರತಾ ವಿಭಾಗದ ಡಿಐಜಿ ಆಗಿ ವರ್ಗಾವಣೆಗೊಂಡಿದ್ದ ಐಪಿಎಸ್ ಅಧಿಕಾರಿ ರವಿ ಡಿ.ಚನ್ನಣ್ಣನವರ್ ಅವರನ್ನು ಈಗ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಐಜಿ ಆಗಿ ವರ್ಗಾವಣೆ ಮಾಡಲಾಗಿದೆ.

ತಿ.ನರಸೀಪುರದಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ

ಕೆನರಾ ಬ್ಯಾಂಕ್ ಸಿಬ್ಬಂದಿಯಿಂದ ಶ್ರೀಗುಂಜಾ ನರಸಿಂಹ ದೇವಸ್ಥಾನದ ಮುಂಭಾಗ ಸ್ವಚ್ಛತಾ ಕಾರ್ಯ

ತಿ.ನರಸೀಪುರ, ಅ.1– ಗಾಂಧಿ ಜಯಂತಿ ಅಂಗವಾಗಿ ಪ್ರಧಾನಿ ಮೋದಿ ಕರೆ ನೀಡಿದ್ದ ಏಕ್ ತಾರೀಖ್, ಏಕ್ ಘಂಟಾ, ಏಕ್ ಸಾಥ್ ಸ್ವಚ್ಛತಾ ಅಭಿಯಾನ ಬೆಂಬಲಿಸಿ ಕೆನರಾ ಬ್ಯಾಂಕ್ ಉದ್ಯೋಗಿಗಳು ಪಟ್ಟಣದ ಮಹಾಲಕ್ಷ್ಮಿ ಶ್ರೀಗುಂಜಾ ನರಸಿಂಹ ದೇವಸ್ಥಾನದ ಮುಂಭಾಗ ಸ್ವಚ್ಛತಾ ಕಾರ್ಯ ನಡೆಸಿದರು.

ಕೆನರಾ ಬ್ಯಾಂಕ್ ಚಿನ್ಹೆ ಇರುವ ಟೀ ಶರ್ಟ್ ತೊಟ್ಟು ಬ್ಯಾಂಕ್ ಸಿಬ್ಬಂದಿ ವರ್ಗ ಹ್ಯಾಂಡ್ ಗ್ಲೌಸ್, ಮಾಸ್ಕ್ ಧರಿಸಿ ಕೈಯಲ್ಲಿ ಪೊರಕೆ ಹಿಡಿದು ಸ್ವಚ್ಛತಾ ಕಾರ್ಯದಲ್ಲಿ ತೊಡಗಿ ದೇವಾಲಯದ ಆವರಣದಲ್ಲಿ ಕಸ ಗುಡಿಸಿ ಸ್ವಚ್ಛಗೊಳಿಸಿದರು.



ಕ್ಷೇತ್ರಿಯ ಕಾರ್ಯಾಲಯದ ವಿಭಾಗೀಯ ವ್ಯವಸ್ಥಾಪಕ ಎಸ್.ಸಾಂಬಶಿವರಾವ್ ಮಾತನಾಡಿ, ಪ್ರಧಾನಿ ಮೋದಿ ಸ್ವಚ್ಛತಾ ಅಭಿಯಾನಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಕೆನರಾ ಬ್ಯಾಂಕ್ ಗ್ರಾಮೀಣ ಪ್ರಾದೇಶಿಕ ಶಾಖೆ ವತಿಯಿಂದ ಒಂದು ಗಂಟೆಗಳ ಕಾಲ ಸ್ವಚ್ಛತಾ ಕಾರ್ಯ ಕೈಗೊಂಡಿದ್ದೇವೆ.

ಆರೋಗ್ಯವೇ ಮಹಾಭಾಗ್ಯ ಎಂಬ ಗಾದೆ ಮಾತಿನಂತೆ ಎಲ್ಲರೂ ಸ್ವಚ್ಛತೆಯ ಕಡೆಗೆ ಗಮನಹರಿಸಿದಲ್ಲಿ ಆರೋಗ್ಯ ಸುಧಾರಿಸುವಲ್ಲಿ ಯಶಸ್ವಿ ಕಾಣಬಹುದು. ನಾಗರಿಕರು ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಿ ತಮ್ಮ ಮನೆ ಜೊತೆಗೆ ಸುತ್ತಮುತ್ತಲ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದರು.

ಕಾರ್ಖಾನೆ ಹಾಗೂ ಪ್ಲಾಸ್ಟಿಕ್ ಬಳಕೆಯಿಂದಾಗಿ ಪರಿಸರ ಹಾಗೂ ವಾಯುಮಾಲಿನ್ಯವಾಗುತ್ತಿದೆ. ಹೀಗಾಗಿ ಮಹಾತ್ಮ ಗಾಂಧೀಜಿ ಹಾಗೂ ಪ್ರಧಾನಿ ಮೋದಿ ಅವರ ಸ್ವಚ್ಛ ಭಾರತದ ಕನಸನ್ನು ನನಸು ಮಾಡಬೇಕು. ಇದಕ್ಕಾಗಿ ಎಲ್ಲರೂ ಶ್ರಮಿಸಬೇಕಿದೆ ಎಂದರು.

ಭಾರತ ಸ್ವಚ್ಛವಾಗಿಲ್ಲ ಎನ್ನುವ ಅಪವಾದವಿದೆ. ವಿದೇಶದಲ್ಲಿ ಸ್ವಚ್ಛತೆಗೆ ಪ್ರಾಮುಖ್ಯತೆ ಕೊಡಲಾಗುತ್ತದೆ. ಆದರೆ ಭಾರತದಲ್ಲಿ ಕಸ ನಿರ್ವಹಣೆ ಬಗ್ಗೆ ಜಾಗೃತಿ ಇಲ್ಲದಿರುವುದರಿಂದ ಸ್ವಚ್ಛತೆಗೆ ಪ್ರಾಮುಖ್ಯತೆ ಕೊಡಲಾಗುತ್ತಿಲ್ಲ. ಸ್ವಚ್ಛತೆ ಬಗ್ಗೆ ಗಮನ ಕೊಡಬೇಕಾದ ಅವಶ್ಯಕತೆ ಇದೆ. ಹಾಗಾಗಿ ಕಸ, ಸ್ವಚ್ಛತೆ ಬಗ್ಗೆ ಪ್ರತಿಯೊಬ್ಬರೂ ಜಾಗೃತಿ ವಹಿಸಬೇಕು ಎಂದರು.

ಏಕ್ ತಾರೀಖ್, ಏಕ್ ಘಂಟಾ, ಏಕ್ ಸಾಥ್ ಅಭಿಯಾನ ಗಾಂಧಿ ಜಯಂತಿ ಆಚರಣೆಯನ್ನು ಗುರುತಿಸಲು ಒಂದು ಮೆಗಾ ಸ್ವಚ್ಛತಾ ಅಭಿಯಾನವಾಗಿದೆ ಎಂದರು. ಕೆನರಾ ಬ್ಯಾಂಕ್ ಮಹಿಳಾ ಉದ್ಯೋಗಿಗಳು ಪಾಲ್ಗೊಂಡಿದ್ದ ಸ್ವಚ್ಛತಾ ಕಾರ್ಯಕ್ಕೆ ಪಟ್ಟಣದ ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ಸಾಥ್ ನೀಡಿದರು. ಕ್ಷೇತ್ರಿಯ ಕಾರ್ಯಾಲಯದ ಹಿರಿಯ ವ್ಯವಸ್ಥಾಪಕ ವಿನಯ್ ಬಿ.ನವೇನೇರ್, ಸ್ಥಳೀಯ ಶಾಖೆಯ ವ್ಯವಸ್ಥಾಪಕ ಲಕ್ಷ್ಮಣ್ ಸೇರಿದಂತೆ ಬ್ಯಾಂಕ್‌ನ ಮೈಸೂರು ಗ್ರಾಮೀಣ ಕ್ಷೇತ್ರಿಯ ಕಾರ್ಯಾಲಯದ ಸಿಬ್ಬಂದಿಗಳು, ಸ್ಥಳೀಯ ಶಾಖೆಯ ಉದ್ಯೋಗಿಗಳು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಚಂದ್ರಮುಖಿ–2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫರ್ಕಿ 3 (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸ್ಕಂದ (ತೆ)	4 ಪ್ರದರ್ಶನಗಳು
ಸಂಗಂ	
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಲಿಡೋ	
ಟೋಬಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇರೈವನ್(ತ)	4 ಪ್ರದರ್ಶನಗಳು
ಪ್ರಭಾ	
ಸ್ಕಂದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್‌ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾಲೆಗೆ ಬಿದ್ದ ಜಿಂಕೆ ರಕ್ಷಿಸಿದ ಪೊಲೀಸರು



ನಂಜನಗೂಡು, ಅ.1– ಕಾಡಿನಿಂದ ತಪ್ಪಿಸಿಕೊಂಡು ಬಂದು, ನಾಲೆಗೆ ಬಿದ್ದು ಪರದಾಡುತ್ತಿದ್ದ ಜಿಂಕೆಯನ್ನು ಬಿಳಿಗೆರೆ ಪೊಲೀಸ್ ಠಾಣೆ ಪೊಲೀಸರು ರಕ್ಷಿಸಿ ಮಾನವೀಯತೆ ಮೆರೆದಿದ್ದಾರೆ.

ತಾಲೂಕಿನ ಕಿರುಗುಂದ ಗ್ರಾಮದಲ್ಲಿ 8 ವರ್ಷದ ಜಿಂಕೆಯೊಂದು ನಾಲೆಯಲ್ಲಿ ನೀರು ಕುಡಿಯುತ್ತಿದ್ದ ವೇಳೆ ನಾಯಿಗಳು ಅಟ್ಟಾಡಿಸಿಕೊಂಡು ಬಂದಿವೆ. ಈ ವೇಳೆ ಅವುಗಳಿಂದ ತಪ್ಪಿಸಿಕೊಳ್ಳಲು ಜಿಂಕೆ ನಾಲೆಗೆ ಹಾರಿದ್ದು, ನೀರಿನಿಂದ ಮೇಲಕ್ಕೆ ಬರಲಾಗದೇ ನಾಲೆಯಲ್ಲಿ ತೇಲಿಕೊಂಡು ಬರುತ್ತಿದ್ದ ಜಿಂಕೆ ಕಂಡ ಪೊಲೀಸರು ಗ್ರಾಮಸ್ಥರ ಸಹಾಯದಿಂದ ರಕ್ಷಣೆ ಮಾಡಿದ್ದಾರೆ. ಬಳಿಕ ಅರಣ್ಯ ಇಲಾಖೆ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಜಿಂಕೆಯನ್ನು ತಮ್ಮ ವಶಕ್ಕೆ ಪಡೆದರು. ಈ ವೇಳೆ ಬಿಳಿಗೆರೆ ಪೊಲೀಸ್ ಠಾಣೆ ಎಸ್‌ಐ ಕರಿಬಸಪ್ಪ ಸೇರಿದಂತೆ ಇನ್ನಿತರರಿದ್ದರು. ಪೊಲೀಸರ ಈ ಕಾರ್ಯಕ್ಕೆ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗಿದೆ.

ರಸ್ತೆ ಅಭಿವೃದ್ಧಿಗೆ 22 ಕೋಟಿ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಕೆ

ಕಾರ್ತಿಕ ಮಾಸದಲ್ಲಿ ಕಾಮಗಾರಿಗೆ ಚಾಲನೆ: ಶಾಸಕ ಡಿ.ರವಿಶಂಕರ್



ಕೆ.ಆರ್.ನಗರ, ಅ.1– ಪಟ್ಟಣದ ಪುರಸಭೆ ವೃತ್ತದಿಂದ ಕೆಲ್ಲೂರು ಗ್ರಾಮದವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ 22 ಕೋಟಿ ರೂ. ಮಂಜೂರು ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕಾರ್ತಿಕ ಮಾಸದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಬ್ಯಾಡರಹಳ್ಳಿಯಲ್ಲಿ ನಡೆದ ಕೃತಜ್ಞತಾ ಸಮರ್ಪಣಾ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನಿಂದ ಮತ್ತೊಂದು ತಾಲೂಕಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯನ್ನು ಅಭಿವೃದ್ಧಿಪಡಿಸುವ ಜೊತೆಗೆ ರಸ್ತೆ ಅಗಲೀಕರಣ ಮಾಡಿ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದರು.

ಬ್ಯಾಡರಹಳ್ಳಿಯಲ್ಲಿ 20 ಸಮುದಾಯದವರಿದ್ದು, ಎಲ್ಲರೂ ಕಾಂಗ್ರೆಸ್‌ಗೆ ಮತ ನೀಡುವ ಮೂಲಕ ನನ್ನ ಗೆಲುವಿಗೆ ಕಾರಣರಾಗಿದ್ದೀರಾ. ಹೀಗಾಗಿ ಗ್ರಾಮಸ್ಥರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದ ಅವರು, ಗ್ರಾಮಸ್ಥರ ಎಲ್ಲಾ ಕೆಲಸ ಮಾಡಿಕೊಡಲು ಬದ್ಧನಾಗಿದ್ದೇನೆ ಎಂದರು.

ಗ್ರಾಮದ ಸೋಮೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ 5 ಲಕ್ಷ ಅನುದಾನ ನೀಡಲಾಗಿದ್ದು, ಮುಂದುವರೆದ ಕಾಮಗಾರಿಗೆ ಅಗತ್ಯ ಅನುದಾನ ನೀಡಲಾಗುತ್ತದೆ. ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಸ್ಥಾಪಿಸಲಾಗಿದ್ದು, ಪ್ರತಿಮೆಯನ್ನು ಮಳೆ ಮತ್ತು ಬಿಸಿಲಿನಿಂದ ರಕ್ಷಿಸಬೇಕಾದದ್ದು ಗ್ರಾಪಂ ಕರ್ತವ್ಯ. ಈ ಬಗ್ಗೆ ಪಿಡಿಓ ಗಮನಹರಿಸಬೇಕು ಎಂದು ಸೂಚಿಸಿದರು.

ಗ್ರಾಪಂ ವ್ಯಾಪ್ತಿಯ ಸಿದ್ದಯ್ಯನಕೊಪ್ಪಲು ಗ್ರಾಮಸ್ಥರು ಗದ್ದೆ ಬಯಲಿಗೆ ತೆರಳುವ ರಸ್ತೆಯನ್ನು ನರೇಗಾ ಯೋಜನೆಯಡಿ ಅಭಿವೃದ್ಧಿಪಡಿಸಿ ಟ್ರಾಕ್ಟರ್ ಮತ್ತು ಎತ್ತಿನ ಗಾಡಿ ಓಡಾಡಲೂ ಅನುಕೂಲ ಮಾಡುವಂತೆ ಸೂಚಿಸಲಾಗಿತ್ತು ಆದರೂ ಪಿಡಿಓ ಮಹೇಶ್ ಜನತೆಗೆ ಉಪಯುಕ್ತವಾಗುವಂತೆ ಕೆಲಸ ಮಾಡಿಸಲು ವಿಫಲಗೊಂಡಿದ್ದಾರೆ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

ಪಿಡಿಓ ನರೇಗಾ ಯೋಜನೆಯಡಿ ಗ್ರಾಮಗಳಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಬಾಕ್ಸ್ ಚರಂಡಿ, ಕೊಟ್ಟಿಗೆ ನಿರ್ಮಾಣ ಮಾಡಿಕೊಳ್ಳಲು ಅವಕಾಶ ಕಲ್ಪಿಸಬೇಕು. ರೈತರ ಜಮೀನುಗಳಿಗೆ ತೆರಳುವ ರಸ್ತೆಗಳ ಅಭಿವೃದ್ಧಿಗೆ ಹಣಕಾಸು ಒದಗಿಸಬೇಕು. ಇದನ್ನು ಉಲ್ಲಂಘನೆ ಮಾಡಿದ ಪಿಡಿಓಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಈರಮ್ಮ, ಉಪಾಧ್ಯಕ್ಷೆ ಭಾಗ್ಯ, ಸದಸ್ಯರಾದ ಅನಿಲ್, ಹರೀಶ್, ತಾಪಂ ಮಾಜಿ ಅಧ್ಯಕ್ಷ ಬಿ.ಟಿ.ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ಮುಖಂಡರಾದ ಜಗದೀಶ್, ರಾಜಶೇಖರಯ್ಯ, ನಿವೃತ್ತ ಅಧಿಕಾರಿ ನಾಗರಾಜು, ಅಣ್ಣೇಗೌಡ, ಬಿ.ಟಿ.ಕುಮಾರ್, ಗೌತಮ್, ರೇವಣ್ಣ, ಬಲರಾಮು, ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಭಾಸ್ಕರ್, ಪಿಡಿಓ ಮಹೇಶ್, ರಾಜೇಶ್ ಇನ್ನಿತರರಿದ್ದರು.

ಎಲ್ಲಾ ಜಾತಿ ಜನಾಂಗದವರನ್ನು ಆತ್ಮೀಯರಂತೆ ಕಾಣಬೇಕು: ಹೆಚ್.ಪಿ.ಮಂಜುನಾಥ್



ಹುಣಸೂರು, ಅ.1– ಪರಸ್ಪರ ಪ್ರೀತಿಸುವುದೇ ಧರ್ಮದ ಸಾರ. ಹೀಗಾಗಿ ಎಲ್ಲಾ ಜಾತಿ ಜನಾಂಗ, ಧರ್ಮದವರನ್ನು ಆತ್ಮೀಯರಂತೆ ಕಾಣಬೇಕು ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಶಬ್ಬೀರ್ ನಗರದ ಶಾಹಿ ಮಸೀದಿಯಿಂದ ಜಶ್ನೆ ಈದ್ ಮಿಲಾದ್ ಉನ್ ನಬೀ ಮೆರವಣಿಗೆಯಲ್ಲಿ ತೆರಳುತ್ತಿದ್ದ ಮುಸ್ಲಿಂ ಬಾಂಧವರಿಗೆ ಶುಭ ಕೋರಿ ಮಾತನಾಡಿದ ಅವರು, ಪ್ರವಾದಿ ಮಹಮ್ಮದ್ ಪೈಗಂಬರ್ ಸಂದೇಶಗಳನ್ನು ಅರ್ಥ ಮಾಡಿಕೊಂಡು ಪ್ರತಿಯೊಬ್ಬರೂ ಸಹೋದರರಂತೆ ಸೌಹಾರ್ದತೆಯಿಂದ ಬಾಳಬೇಕು. ಶಾಂತಿ ಸೌಹಾರ್ದತೆಯಿಂದ ಬದುಕುವುದು ಈ ಹಬ್ಬದ ವಿಶೇಷ ಎಂದರು. ಇದೇ ವೇಳೆ ನಗರದ ಈದ್ಗಾ ಮೈದಾನದಲ್ಲಿ ಪ್ರವಾದಿಯವರ ಪ್ರವಚನ ನೀಡಲಾಯಿತು. ಅಲ್ಲದೇ ವಾಹನದಲ್ಲಿ ಸ್ತಬ್ಧಚಿತ್ರ ಅಳವಡಿಸಿದವರಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭ ನಗರದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಸಾಧನೆಗೆ ಮುಂದಾಗಿ

ಶಾಸಕ ದರ್ಶನ್ ಧ್ರುವನಾರಾಯಣ್



ನಂಜನಗೂಡು, ಅ.1– ಪ್ರತಿಭೆ ಎಲ್ಲರಲ್ಲೂ ಸುಪ್ತವಾಗಿರುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಉನ್ನತ ಗುರಿ ಇಟ್ಟುಕೊಂಡು ಕಠಿಣ ಪರಿಶ್ರಮ ವಹಿಸಿ ಸಾಧನೆಗೆ ಮುಂದಾಗಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಗುರುಭವನದಲ್ಲಿ 24 ಮನೆ ತೆಲುಗು ಶೆಟ್ಟರ ಸಂಘದಿಂದ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯೂ ಮುಖ್ಯ. ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಲು ಮುಂದಾಗಬೇಕು. ಜೊತೆಗೆ ಮಾನವೀಯ ಗುಣ, ಹಿರಿಯರಿಗೆ ಗೌರವ ಕೊಡುವುದನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

24 ಮನೆ ತೆಲುಗು ಶೆಟ್ಟರ ಜನಾಂಗ ಕಡಿಮೆ ಸಂಖ್ಯೆಯಲ್ಲಿದ್ದರೂ, ಸಾಧಕರು ಹೆಚ್ಚಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಜನಾಂಗ ಒಟ್ಟಾಗಿ ಕೈಹಿಡಿದ ಪರಿಣಾಮ ನಾನು ಅತ್ಯಧಿಕ ಮತಗಳಿಂದ ಗೆಲ್ಲಲು ಸಾಧ್ಯವಾಯಿತು. ಮುಂದಿನ ದಿನಗಳಲ್ಲಿ ಜನಾಂಗದ ಬೇಡಿಕೆಗಳನ್ನು ಈಡೇರಿಸುವ ಮೂಲಕ ಸಮುದಾಯದ ಏಳಿಗೆಗಾಗಿ ಶ್ರಮಿಸುತ್ತೇನೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಹೇಮಂತ್‌ಕುಮಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಿತರಾಗಿರುವುದು ಸಂತಸ ತಂದಿದೆ. ಉನ್ನತ ಹುದ್ದೆ ಅಲಂಕರಿಸಿರುವ ಸಮುದಾಯದವರು ಗ್ರಾಮೀಣ ಭಾಗದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಸಮುದಾಯದವರಿಗೆ ಶಿಕ್ಷಣದ ಜೊತೆಗೆ ಕೌಶಲ್ಯ ವೃದ್ಧಿಗೆ ಶ್ರಮಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಜಿಪಂ ಮಾಜಿ ಸದಸ್ಯರಾದ ಎನ್.ಮಹದೇವು, ಸಿ.ಚಿಕ್ಕರಂಗನಾಯಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಬಿಇಓ ಶಿವಲಿಂಗಯ್ಯ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮರತ್ನಾಕರ, ಮುಖಂಡರಾದ ಕೆ.ವಿ.ವಾಸು, ಕೆ.ಎಸ್.ಹರೀಶ್‌ಕುಮಾರ್, ಮಂಜುನಾಥ್, ಶ್ಯಾಮಸುಂದರ್ ಸೇರಿದಂತೆ ಹಲವರಿದ್ದರು.

ಬಾಲ್ ಬ್ಯಾಡ್ಮಿಂಟನ್: ವಿಭಾಗ ಮಟ್ಟಕ್ಕೆ ಆಯ್ಕೆ



ಹಿರೀಕ್ಯಾತನಹಳ್ಳಿ, ಅ.1– ಹುಣಸೂರು ತಾಲೂಕಿನ ಮುಳ್ಳೂರು ಸರ್ಕಾರಿ ಪ್ರೌಢಶಾಲೆ ಬಾಲಕಿಯರು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಜಯಗಳಿಸಿ ವಿಭಾಗ ಮಟ್ಟಕ್ಕೆ 10ನೇ ಬಾರಿಗೆ ಆಯ್ಕೆಯಾಗಿದ್ದಾರೆ ಎಂದು ತರಬೇತುದಾರ ಹಾಗೂ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ರಮೇಶ್ ತಿಳಿಸಿದ್ದಾರೆ. ಇತ್ತೀಚೆಗೆ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಅಂತಿಮ ಪಂದ್ಯದಲ್ಲಿ ಮೈಸೂರಿನ ಜೆಎಸ್‌ಎಸ್ ಶಾಲೆಯ ವಿರುದ್ಧ 23–25 ಹಾಗೂ 13–25 ಅಂತರದ ನೇರ ಸೆಟ್ ಮೂಲಕ ಪ್ರಥಮ ಸ್ಥಾನ ಪಡೆದು ವಿಭಾಗಕ್ಕೆ ಆಯ್ಕೆಯಾದರು.



ಅಂತಾರಾಷ್ಟ್ರೀಯ ಹಿರಿಯರ ದಿನಾಚರಣೆ ಅಂಗವಾಗಿ ಭಾನುವಾರ ನಂಜನಗೂಡು ತಾಲೂಕಿನ ನೇರಳೆ ಗ್ರಾಮದಲ್ಲಿ ಶತಾಯುಷಿಗಳಾದ ಪುಟ್ಟಮಾದೇಗೌಡ, ಮಣಿಯಮ್ಮ, ಮರಮ್ಮ, ಚಿಕ್ಕಮಾದಮ್ಮ, ಹಾಗೂ ಚಿಕ್ಕಮಾದಯ್ಯ ಅವರನ್ನು ಗ್ರಾಪಂ ಅಧ್ಯಕ್ಷ ಬಿ.ಆರ್.ಗಿರೀಶ್ ಸನ್ಮಾನಿಸಿ ಆಶೀರ್ವಾದ ಪಡೆದರು. ಈ ವೇಳೆ ಪಿಡಿಓ ಮಾದಪ್ಪ, ಸದಸ್ಯ ಸೋಮಣ್ಣ, ಕಾರ್ಯದರ್ಶಿ ಗಿರೀಶ್ ಇತರರಿದ್ದರು.



ಬನ್ನೂರು ಸಮೀಪದ ಬೀಡನಹಳ್ಳಿ ಗ್ರಾಮಕ್ಕೆ ಆಗಮಿಸಿದ ನಟ ಅಭಿಷೇಕ್ ಅಂಬರೀಷ್ ಅವರನ್ನು ಮೈಸೂರು ಜಿಲ್ಲಾ ಅಂಬಿ ಮತ್ತು ಅಭಿ ಅಭಿಮಾನಿ ಬಳಗದ ಅಧ್ಯಕ್ಷ ಬಿ.ಸಿ.ನದೀಶ್ ಸನ್ಮಾನಿಸಿದರು. ಈ ವೇಳೆ ಮುಖಂಡರಾದ ಚನ್ನೇಗೌಡ, ಗಾಯಿತ್ರಿ ಸುರೇಶ್, ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಪಂಚಾಯತಿ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಬೃಂದಾ, ನಾಗೇಶ್ ಇತರರಿದ್ದರು.

ದಲಿತ ಕಲಾವಿದರಿಗೆ ಗುರುತಿನ ಕಾರ್ಡ್ ವಿತರಣೆ



ತಿ.ನರಸೀಪುರ ಅ.1– ಸಾಂಸ್ಕೃತಿಕ ಉತ್ಸವದಿಂದ ದೇವರ ಉತ್ಸವಗಳವರೆಗೆ ಭಾಗಿಯಾಗುವ ಯಾವುದಾದರೂ ವೃತ್ತಿ ಮತ್ತು ಕಲೆ ಇದ್ದರೆ ಅದು ವಾದ್ಯಗೋಷ್ಠಿ ಎಂದು ಕೆಪಿಸಿಸಿ ರಾಜ್ಯ ಕಾರ್ಯದರ್ಶಿ ನಾಗವಾಲ ನರೇಂದ್ರ ಅಭಿಪ್ರಾಯಪಟ್ಟರು.

ಪಟ್ಟಣದ ಅಂಬೇಡ್ಕರ್ ಸಮುದಾಯದ ಭವನದಲ್ಲಿ ನಡೆದ "ದಲಿತ ಕಲಾವಿದರಿಗೆ ಗುರುತಿನ ಕಾರ್ಡ್ ವಿತರಣೆ ಮತ್ತು ದಲಿತ ಕಲಾವಿದರ ಜಾಗೃತಿ ಕಾರ್ಯಕ್ರಮವನ್ನು ಭಾರತ ಸಂವಿಧಾನದ ಪೀಠಿಕೆ ಓದುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಸಂಭ್ರಮ, ದುಃಖ ಇವೆರಡಕ್ಕೂ ವಾದ್ಯ ಇದ್ದೇ ಇರುತ್ತದೆ. ವಿವಿಧ ವಾದ್ಯಗಳನ್ನು ನುಡಿಸುವ ಹಾಗೂ ಕಲೆ ಮತ್ತು ಸಂಸ್ಕೃತಿ ಎತ್ತಿ ಹಿಡಿಯುವ ಕಲಾವಿದರನ್ನು ಒಗ್ಗೂಡಿಸಿ ಸಂಘ ಸ್ಥಾಪಿಸಿ ಕಲಾವಿದರ ಅಭಿವೃದ್ಧಿ ಮತ್ತು ಜಾಗೃತಿಗಾಗಿ ಕೆಲಸ ಮಾಡುತ್ತಿರುವ ದಲಿತ ಸಂಘರ್ಷ ಸಮಿತಿ ಬಣ ರಹಿತ ದಲಿತ ಕಲಾವಿದರ ಸಂಘದ ಕಾರ್ಯ ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್, ತಾಪಂ ಇಓ ಕೃಷ್ಣ ಗುರುತಿನ ಚೀಟಿ ವಿತರಿಸಿ ಸಂಘದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ನಮ್ಮ ಅಧಿಕಾರ ವ್ಯಾಪ್ತಿಯೊಳಗೆ ಸಾಧ್ಯವಾದ ಎಲ್ಲಾ ರೀತಿಯ ಪ್ರೋತ್ಸಾಹ, ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಮುಂದಿನ ಗ್ರಾಮೀಣ ದಸರಾ ಸೇರಿದಂತೆ ಎಲ್ಲಾ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಂಘಕ್ಕೆ ಅವಕಾಶ ನೀಡುವುದಾಗಿ ತಿಳಿಸಿದರು.

ಸಂಘದ ಅಧ್ಯಕ್ಷ ಸಿ.ಉಮಾಮಹದೇವ್ ಮಾತನಾಡಿ, ಅಂಬೇಡ್ಕರ್ ಹೇಳಿದಂತೆ ನಮ್ಮ ಹಕ್ಕುಗಳು ತನ್ನಿಂದ ತಾನೇ ದೊರೆಯುತ್ತವೆ ಎಂಬುದನ್ನು ನಮ್ಮ ಸಂಘಟನೆ ಸಾಬೀತು ಪಡಿಸುತ್ತಿದೆ. ಇದು ಹೆಮ್ಮೆಯ ವಿಷಯವಾಗಿದ್ದು, ಇದರಿಂದಾಗಿ ಕೇವಲ ಕಲಾವಿದರ ಅಭಿವೃದ್ಧಿಯಲ್ಲ. ಬದಲಾಗಿ ಸಮಾಜದಲ್ಲಿ ದಲಿತರ ಮೇಲಾಗುತ್ತಿರುವ ಶೋಷಣೆ ಮತ್ತು ಸಂವಿಧಾನ ವಿರೋಧಿಗಳ ವಿರುದ್ಧ ಜಾಗೃತಿ ಮತ್ತು ಹೋರಾಟ ರೂಪಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕೆ.ಪಲ್ಲವಿ, ದಸಂಸ (ಬಣ ರಹಿತ)ಜಿಲ್ಲಾ ಸಂಘಟನಾ ಸಂಚಾಲಕ ಅಲತ್ತೂರು ಶಿವರಾಜ್, ಅಶೋಕ್ ಕೆ.ಎಂ.ವಾಡಿ, ತಾಲೂಕು ಸಂಚಾಲಕ ಯಡದೊರೆ ಸಿದ್ದರಾಜು, ಶಿವಪ್ರಕಾಶ್, ಚಂದಳ್ಳಿ ಮಲ್ಲೇಶ್, ಕುರಿಸಿದ್ದನಹುಂಡಿ ರಾಜು, ಮರಡೀಪುರ ಮಲ್ಲಿಕಾರ್ಜುನ, ದಲಿತ ಕಲಾವಿದರ ಸಂಘದ ಉಪಾಧ್ಯಕ್ಷ ತುಂಬಲ ಶಿವಣ್ಣ, ತಾಲೂಕು ಮಹಿಳಾ ಒಕ್ಕೂಟದ ಅಧ್ಯಕ್ಷೆ ಲಕ್ಷ್ಮಿ, ಸಿ.ಬಿ.ಹುಂಡಿ ನಾಗೇಶ್, ದಲಿತ ಕಲಾವಿದರ ಸಂಘದ ತಾಲೂಕು ಸಮಿತಿ ಮತ್ತು ದಲಿತ ಸಂಘರ್ಷ ಸಮಿತಿ, ದಲಿತ ಕಲಾವಿದರ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ದಲಿತ ಮಹಿಳಾ ಒಕ್ಕೂಟದ ಸದಸ್ಯರು ಭಾಗವಹಿಸಿದ್ದರು.

ನಂಜನಗೂಡಿನಲ್ಲಿ ಶ್ರಮದಾನದ ಮೂಲಕ

ಕಪಿಲಾ ನದಿಯಲ್ಲಿ ಸಂಗ್ರಹವಾಗಿದ್ದ ತ್ಯಾಜ್ಯ ತೆರವು





ನಂಜನಗೂಡು, ಅ.1– ನಗರದ ಕಪಿಲಾ ನದಿ ತೀರದಲ್ಲಿರುವ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಸ್ನಾನಘಟ್ಟದ ಆವರಣದಲ್ಲಿ ಮೈಸೂರಿನ ರೋಟರಿ ಕ್ಲಬ್ ಆಫ್ ಸೌತ್ ಈಸ್ಟ್, ಯುವ ಬ್ರಿಗೇಡ್ ಹಾಗೂ ನಗರಸಭೆ ಸಿಬ್ಬಂದಿ ಶ್ರಮದಾನ ನಡೆಸುವ ಮೂಲಕ ನದಿಯಲ್ಲಿ ಸಂಗ್ರಹವಾಗಿದ್ದ ಕೊಳೆತ ಬಟ್ಟೆ ಅನುಪಯುಕ್ತ ತ್ಯಾಜ್ಯಗಳನ್ನು ತೆರವುಗೊಳಿಸಿದರು.

ಭಾನುವಾರ ಬೆಳಗ್ಗೆ ನಡೆದ ಶ್ರಮದಾನದಲ್ಲಿ ಭಾಗಿಯಾದ ನೂರಾರು ಸ್ವಯಂ ಸೇವಕರು ನದಿಗೆ ಇಳಿದು ಜೊಂಡು ಹಾಗೂ ಅನುಪಯುಕ್ತ ತ್ಯಾಜ್ಯದಿಂದ ಆವೃತಗೊಂಡಿದ್ದ ಹದಿನಾರು ಕಾಲು ಮಂಟಪದ ಆವರಣವನ್ನು ಮೊದಲಿಗೆ ಸ್ವಚ್ಛಗೊಳಿಸಿದರು. ಅಲ್ಲದೇ ನದಿಯಲ್ಲಿ ಭಕ್ತರು ತೇಲಿಬಿಟ್ಟಿದ್ದ ಬಟ್ಟೆ ಬರೆ ಹಾಗೂ ಮಡಿಕೆ ಕುಡಿಕೆಗಳನ್ನು ಹೊರ ತೆಗೆದು ನದಿ ನೀರು ಸರಾಗವಾಗಿ ಹರಿಯಲು ತೊಡಕಾಗಿದ್ದ ಅನುಪಯುಕ್ತ ಮರಮುಟ್ಟುಗಳನ್ನು ತೆರವುಗೊಳಿಸಿದರು.

ಈ ವೇಳೆ ಮಾತನಾಡಿದ ರೋಟರಿ ಸೌತ್ ಈಸ್ಟ್ ಕ್ಲಬ್ ಅಧ್ಯಕ್ಷ ಕೆ.ಎನ್.ಮುರಳೀಧರ್ ಹಾಗೂ ಕಾರ್ಯದರ್ಶಿ ಎನ್.ಟಿ.ಗಿರೀಶ್ ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ನದಿ ಸ್ನಾನ ಘಟ್ಟದಲ್ಲಿ ಶ್ರಮದಾನ ನಡೆಸುವ ಮೂಲಕ ಸ್ವಚ್ಛತಾ ಅಭಿಯಾನದಲ್ಲಿ ಭಾಗಿಯಾಗಿದ್ದು ಸ್ಥಳೀಯ ಸಂಘ ಸಂಸ್ಥೆಗಳು ಹಾಗೂ ನಗರಸಭೆ ಸಿಬ್ಬಂದಿಗಳ ಸಹಕಾರದೊಂದಿಗೆ ನದಿಯಲ್ಲಿದ್ದ 4 ಟ್ರಾಕ್ಟರ್ ತ್ಯಾಜ್ಯ ಹೊರತೆಗೆಯಲಾಗಿದೆ ಎಂದರು.

ಸ್ವಚ್ಛತಾ ಕಾರ್ಯದಲ್ಲಿ ರೋಟರಿ ಸಂಸ್ಥೆಯ ಡಾ.ಶ್ರೀಕಾಂತ್, ಯೋಗಾನಂದ್, ರಾಜ್‌ಭಟ್, ಯುವ ಬ್ರಿಗೇಡ್ ಮೈಸೂರು ಜಿಲ್ಲಾ ವಿಸ್ತಾರಕ ಸುನೀಲ್, ರವಿಶಾಸ್ತ್ರಿ, ಗಿರೀಶ್, ಅರ್ಜುನ್, ರಂಗಸ್ವಾಮಿ, ಕಿಶೋರ್, ಮಹದೇವ್, ಶ್ರೀಕಂಠ ಪ್ರಸಾದ್, ಯಶವಂತ್, ನಗರಸಭೆ ಸಿಬ್ಬಂದಿಗಳಾದ ರೇಖಾ, ಅಶೋಕ್ ಮತ್ತಿತರರಿದ್ದರು.

ಯುವ ದಸರಾ ಸಂಭ್ರಮಕ್ಕೆ ಮೆರಗು ನೀಡುವ ಸಲುವಾಗಿ

ಮೈಸೂರಲ್ಲಿ ಸೂಪರ್ ಬೈಕ್ ರ್‍ಯಾಲಿ

ಚಾಮುಂಡಿಬೆಟ್ಟದ ವ್ಯೂ ಪಾಯಿಂಟ್‌ನಿಂದ ಆರಂಭವಾಗಿ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಅಂತ್ಯ



ಮೈಸೂರು, ಅ.1(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಯುವ ದಸರಾ ಹಾಗೂ ಯುವ ಸಂಭ್ರಮ ಕಾರ್ಯಕ್ರಮದ ಅಂಗವಾಗಿ ಮೈಸೂರಲ್ಲಿ ಭಾನುವಾರ ಆಯೋಜಿಸಿದ್ದ ಸೂಪರ್ ಬೈಕ್‌ಗಳ ರ್‍ಯಾಲಿ ಜನರ ಗಮನ ಸೆಳೆಯಿತು.

ಚಾಮುಂಡಿಬೆಟ್ಟದ ವ್ಯೂವ್ ಪಾಯಿಂಟ್‌ನಿಂದ ಅರಮನೆವರೆಗೆ ನಡೆದ ಈ ರ್‍ಯಾಲಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು. ಬಳಿಕ ಸೂಪರ್ ಬೈಕ್‌ಗಳು ನಗರದ ವಿವಿಧ ರಸ್ತೆಗಳಲ್ಲಿ ಸಂಚರಿಸಿ, ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂದೆ ಆಗಮಿಸಿದವು. ಈ ರ್‍ಯಾಲಿಯಲ್ಲಿ ಮೈಸೂರು, ಬೆಂಗಳೂರು, ಕೊಡಗು ಜಿಲ್ಲೆಯ ಹಾರ್ಲೆ ಡೇವಿಡ್ ಸನ್ ಹಾಗೂ ಇನ್ನಿತರ ಸೂಪರ್ ಬೈಕ್ ಹೊಂದಿರುವವರು ಪಾಲ್ಗೊಂಡು ಗಮನ ಸೆಳೆದರು.

ಯುವ ದಸರಾ ಹಾಗೂ ಯುವ ಸಂಭ್ರಮ ಕಾರ್ಯಕ್ರಮದ ಅಂಗವಾಗಿ ಇದೇ ಮೊದಲ ಬಾರಿಗೆ ಆಯೋಜಿಸಿದ್ದ ಸೂಪರ್ ಬೈಕ್ ರ್‍ಯಾಲಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಚಾಮುಂಡಿಬೆಟ್ಟ ಹಾಗೂ ಅರಮನೆ ಮುಂಭಾಗ ರ್‍ಯಾಲಿಯಲ್ಲಿ ಪಾಲ್ಗೊಂಡ ಸೂಪರ್ ಬೈಕ್‌ಗಳನ್ನು ನೋಡಲು ಜನ ಮುಗಿ ಬಿದ್ದರು.

ಈ ವೇಳೆ ಸಾಮಾಜಿಕ ಕಾರ್ಯಕರ್ತ, ಕಾಂಗ್ರೆಸ್ ಮುಖಂಡ ಡಾ.ಶುಶ್ರುತ್ ಗೌಡ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಸಮಾಜದಲ್ಲಿ ಸೌಹಾರ್ದತೆ ಕಾಪಾಡಬೇಕಾದ ಅಗತ್ಯವಿದೆ. ನಾಡಹಬ್ಬ ದಸರಾ ಮಹೋತ್ಸವ ನಮ್ಮ ಸಂಸ್ಕೃತಿ, ಕಲೆ, ಸಂಗೀತ ಹಾಗೂ ಪರಂಪರೆಯ ಸಂಕೇತವಾಗಿದೆ. ಈ ಹಬ್ಬವನ್ನು ಅದ್ಧೂರಿಯಾಗಿ ಆಚರಿಸಲು ಸರ್ಕಾರ ನಿರ್ಧರಿಸಿತ್ತು ಆದರೆ, ಬರಗಾಲದ ಹಿನ್ನೆಲೆಯಲ್ಲಿ ಈ ಬಾರಿ ಸಾಂಪ್ರದಾಯಿಕ ದಸರಾ ಆಚರಿಸಲು ಉದ್ದೇಶಿಸಲಾಗಿದೆ. ಮುಂದಿನ ವರ್ಷ ಮಳೆ ಹೆಚ್ಚಾಗಿ ನಾಡು ಸಂವೃದ್ಧಿಯಾಗಲಿದೆ ಎಂಬ ಆಶಾಭಾವ ವ್ಯಕ್ತಪಡಿಸಿದರು.

ಈ ಬಾರಿ ಆಚರಿಸುವ ಸಾಂಪ್ರದಾಯಿಕ ದಸರಾದಲ್ಲಿ ಕಾರ್ಯಕ್ರಮಗಳಿಗೆ ಯಾವುದೇ ಕೊರತೆ ಉಂಟಾಗುವುದಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಜನ ದಸರಾ ಉತ್ಸವ ವೀಕ್ಷಣೆಗೆ ಬರಲಿದ್ದು, ಪ್ರವಾಸೋದ್ಯಮ ಗರಿಗೆದರಲಿದೆ. ಇದಕ್ಕೆ ಪೂರಕವಾಗಿ ಯುವ ದಸರಾ ಹಾಗೂ ಯುವ ಸಂಭ್ರಮ ಕಾರ್ಯಕ್ರಮಕ್ಕೆ ಒತ್ತಾಸೆಂಬಾದ ಬೈಕ್ ರ್‍ಯಾಲಿ ಯಶಸ್ವಿಯಾಗಿದೆ ಎಂದು ತಿಳಿಸಿದರು.

ಬೈಕ್ ರ್‍ಯಾಲಿ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಉದ್ಯಮಿ, ಜೆ.ತಿರುಮಲೇಶ್, ಕರುಣಾಕರ್ ಟಿ.ಎ, ಗಿರೀಶ್ ಆರ್.ಗೌಡ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಭಾನುವಾರದಿಂದ ಪೌರಕಾರ್ಮಿಕರಿಗೆ ಬೆಳಗಿನ ಉಪಾಹಾರ ನೀಡಲಾಗುತ್ತಿದ್ದು, ಪಾಲಿಕೆಯ 55ನೇ ವಾರ್ಡಿನಲ್ಲಿ ಆಡಳಿತ ಪಕ್ಷದ ನಾಯಕರೂ ಆದ ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್ ಪೌರ ಕಾರ್ಮಿಕರೊಂದಿಗೆ ಉಪಾಹಾರ ಸೇವಿಸಿದರು. ಬೆಳ್ಳಂಬೆಳಗ್ಗೆ ಕರ್ತವ್ಯಕ್ಕೆ ಹಾಜರಾಗುವ ಪೌರಕಾರ್ಮಿಕರಿಗೆ ಉಪಾಹಾರದ ವ್ಯವಸ್ಥೆ ಮಾಡಿರುವುದು ಅತ್ಯಂತ ಸ್ತುತ್ಯಾರ್ಹ ಕ್ರಮವೆಂದು ಅಭಿಪ್ರಾಯಪಟ್ಟ ಅವರು, ಪ್ರತಿನಿತ್ಯವೂ ಒಂದೊಂದು ರೀತಿಯ ಉಪಾಹಾರ ವಿತರಿಸುವಂತೆ ಸಲಹೆ ನೀಡಿದರು.

350 ವರ್ಷಗಳ ನಂತರ, ಛತ್ರಪತಿ ಶಿವಾಜಿಯ 'ಹುಲಿ ಉಗುರು' ಶಸ್ತ್ರ ಮರಳಿ ಭಾರತಕ್ಕೆ!

ಮುಂಬೈ, ಅ.1– ಛತ್ರಪತಿ ಶಿವಾಜಿ ಮಹಾರಾಜರ ಪೌರಾಣಿಕ 'ವಾಘ್ ನಖ್' ಅಥವಾ ಹುಲಿ ಉಗುರು' (ವ್ಯಾಘ್ರನಖ) ಮಾದರಿ ಅಸ್ತ್ರ ಬರೋಬ್ಬರಿ 350 ವರ್ಷಗಳ ಬಳಿಕ ಭಾರತಕ್ಕೆ ಮರಳುತ್ತಿದೆ.

1659 ರಲ್ಲಿ ಬಿಜಾಪುರ ಸುಲ್ತಾನರ ಸೇನಾಪತಿ ಅಫ್ಜಲ್ ಖಾನ್‌ನನ್ನು ಸೋಲಿಸಲು ಶಿವಾಜಿ ಮಹಾರಾಜರು ಬಳಸಿದ್ದ 'ಹುಲಿ ಉಗುರು' ಆಯುಧವು ನವೆಂಬರ್‌ನಲ್ಲಿ ಲಂಡನ್‌ನಿಂದ ಮಹಾರಾಷ್ಟ್ರಕ್ಕೆ ಮರಳಲಿದೆ ಎಂದು ಹೇಳಲಾಗಿದೆ. ಈ ವರ್ಷ ಛತ್ರಪತಿ ಶಿವಾಜಿಯ ಪಟ್ಟಾಭಿಷೇಕದ 350ನೇ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದ್ದು, ಈ ಸಂದರ್ಭದ ಸ್ಮರಣಾರ್ಥ ಮೂರು ವರ್ಷಗಳ ಪ್ರದರ್ಶನಕ್ಕಾಗಿ ಲಂಡನ್‌ನ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂನಿಂದ ಹುಲಿ ಪಂಜದ ಆಯುಧ ವ್ಯಾಘ್ರನಖವನ್ನು ಮರಳಿ ತರಲಾಗುತ್ತಿದೆ.

ಮಹಾರಾಷ್ಟ್ರದ ಸಂಸ್ಕೃತಿ ಸಚಿವ ಸುಧೀರ್ ಮುಂಗಂತಿವಾರ್ ಅವರು ಮಂಗಳವಾರ ಲಂಡನ್‌ಗೆ ತೆರಳಲಿದ್ದು, ಆಯುಧವನ್ನು ಹಿಂದಿರುಗಿಸುವ ಕುರಿತು ಮ್ಯೂಸಿಯಂನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಿದ್ದಾರೆ. ಈ ಬಗ್ಗೆ ಮಾತನಾಡಿರುವ ಅವರು ಮೊದಲ ಹಂತದಲ್ಲಿ, ನಾವು ಶಿವಾಜಿ ಮಹಾರಾಜರ ವಾಘ್ ನಖ್ (ವ್ಯಾಘ್ರನಖ) ಅನ್ನು ಮರಳಿ ತರುತ್ತಿದ್ದೇವೆ. ಅದನ್ನು ನವೆಂಬರ್‌ನಲ್ಲಿ ಇಲ್ಲಿಗೆ ತರಬೇಕು ಮತ್ತು ಅದಕ್ಕಾಗಿ ನಾವು ಎಂಒಯು (ಒಪ್ಪಂದ)ಗೆ ಸಹಿ ಹಾಕುತ್ತಿದ್ದೇವೆ. ಛತ್ರಪತಿ ಶಿವಾಜಿ ಮಹಾರಾಜರು ಅಫ್ಜಲ್ ಖಾನ್ ಕರುಳನ್ನು ಕಿತ್ತೊಗೆದ ದಿನದಂದು ಅದನ್ನು ತರುವುದು ನಮ್ಮ ಪ್ರಯತ್ನ ಎಂದು ಸಚಿವ ಮುಂಗಂತಿವಾರ್ ಹೇಳಿದರು. ವಾಘ್ ನಖ್ ಅನ್ನು ದಕ್ಷಿಣ ಮುಂಬೈನಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜ್ ವಸ್ತುಸಂಗ್ರಹಾಲಯದಲ್ಲಿ ಇರಿಸಲಾಗುವುದು ಎಂದು ಹೇಳಲಾಗಿದೆ.



ವಾಘ್ ನಖ್ ಅಸಲಿಂಯೋ, ನಕಲಿಯೋ: ಇನ್ನು ಹಾಲಿ ವಾಘ್ ನ‌ಖ್ ಮೇಲೂ ಗುಮಾನಿ ಮೂಡುತ್ತಿದ್ದು, 'ವಾಘ್ ನಖ್'ನ ಸತ್ಯಾಸತ್ಯತೆ ಮಹಾರಾಷ್ಟ್ರದಲ್ಲಿ ಭಾರೀ ಚರ್ಚೆಯಲ್ಲಿದೆ. ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂ ವೆಬ್‌ಸೈಟ್ ಛತ್ರಪತಿ ಶಿವಾಜಿ ಆಯುಧವನ್ನು ಬಳಸಿಲ್ಲ ಎಂದು ಹೇಳುತ್ತದೆ ಎಂದು ಇತಿಹಾಸ ತಜ್ಞ ಇಂದರ್‌ಜಿತ್ ಸಾವಂತ್ ಗಮನಸೆಳೆದಿದ್ದಾರೆ.

ಬೋನಿಗೆ ಬಿದ್ದ ಚಿರತೆ: ನಿಟ್ಟುಸಿರು ಬಿಟ್ಟ ಉಯಿಲಾಳು ಗ್ರಾಮಸ್ಥರು



ಮೈಸೂರು, ಅ.1(ಎಂಟಿವೈ)–ಮೈಸೂರು ತಾಲೂಕು ಉಯಿಲಾಳು ಗ್ರಾಮದಲ್ಲಿ ಜಾನುವಾರುಗಳ ಮೇಲೆ ಆಗಾಗ ದಾಳಿ ಮಾಡಿ, ಉಪಟಳ ನೀಡುತ್ತಿದ್ದ ಚಿರತೆ ಬೋನಿಗೆ ಬಿದ್ದಿದೆ. ಗ್ರಾಮದ ಖಾಸಗಿ ಫಾರಂನಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನ್‌ಗೆ ಶನಿವಾರ ಸಂಜೆ ಎರಡೂವರೆ ವರ್ಷದ ಹೆಣ್ಣು ಚಿರತೆ ಸೆರೆಯಾಗಿದೆ. ಬೋನ್‌ನಲ್ಲಿದ್ದ ಕೋಳಿಯ ಬೇಟೆಗೆ ಮುಂದಾಗಿ ಸೆರೆ ಸಿಕ್ಕಿದೆ. ಆಡು, ಕುರಿ ಮೇಲೆ ದಾಳಿ ನಡೆಸಿ ಗ್ರಾಮಸ್ಥರಲ್ಲಿ ಆತಂಕವನ್ನುಂಟು ಮಾಡಿತ್ತು. ಸ್ಥಳೀಯರ ಮನವಿ ಮೇರೆಗೆ ಎರಡು ದಿನಗಳ ಹಿಂದಷ್ಟೇ ಬೋನ್ ಇಡಲಾಗಿತ್ತು. ಬೋನ್‌ಗೆ ಬಿದ್ದ ಚಿರತೆ ನೋಡಲು ಗ್ರಾಮಸ್ಥರು ಮುಗಿ ಬಿದ್ದಿದ್ದರು. ಅರಣ್ಯ ಸಿಬ್ಬಂದಿ, ಬೋನ್‌ನಲ್ಲಿದ್ದ ಚಿರತೆಯನ್ನು ಹಿರಿಯ ಅಧಿಕಾರಿಗಳ ಸಲಹೆ ಮೇರೆಗೆ ಅರಣ್ಯ ಪ್ರದೇಶದಲ್ಲಿ ಸುರಕ್ಷಿತವಾಗಿ ಬಿಡುಗಡೆ ಮಾಡಿದ್ದಾರೆ. ಚಿರತೆ ಸೆರೆ ಸಿಕ್ಕಿದ್ದರಿಂದ ಉಯಿಲಾಳು ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ.

ತಮಿಳುನಾಡಿನಲ್ಲಿ ನಾಲೆಗೆ ಬಿದ್ದ ಬಸ್; 8 ಜನರ ಸಾವು

ಚೆನ್ನೈ, ಅ.1– ತಮಿಳುನಾಡಿನ ನೀಲಗಿರಿ ಬೆಟ್ಟದಲ್ಲಿ ಶನಿವಾರ ಪ್ರವಾಸಿ ಬಸ್ ನಾಲೆಗೆ ಬಿದ್ದಿದೆ. ಈ ಅಪಘಾತದಲ್ಲಿ 8 ಮಂದಿ ಸಾವನ್ನಪ್ಪಿದ್ದು, 25 ಮಂದಿ ಗಾಯಗೊಂಡಿದ್ದಾರೆ. ಮೃತರಲ್ಲಿ 4 ಮಹಿಳೆಯರು ಮತ್ತು ಒಂದು ಮಗು ಸೇರಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಮೃತರು ತೆಂಕಶಿ ಜಿಲ್ಲೆಯ ಕಡಯಂ ನಿವಾಸಿಗಳು. ಅವರು ಮನೆಗೆ ಹಿಂದಿರುಗುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಚಾಲಕನ ನಿಯಂತ್ರಣ ತಪ್ಪಿದ ನಂತರ ಬಸ್ ನಾಲೆಗೆ ಬಿದ್ದಿದ್ದು, ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ತಲುಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಅಪಘಾತದಲ್ಲಿ ಮಹಿಳೆ ಸಾವು; ಪತಿ ಗಂಭೀರ ಗಾಯ

ನಟ ನಾಗಭೂಷಣ್ ವಿರುದ್ಧ ಕೇಸ್ ದಾಖಲು



ಬೆಂಗಳೂರು, ಅ.1– ಸ್ಯಾಂಡಲ್‌ವುಡ್‌ನಲ್ಲಿ ಇತ್ತೀಚೆಗೆ ತಮ್ಮ ಮನೋಜ್ಞ ಅಭಿನಯದ ಮೂಲಕ ಪ್ರೇಕ್ಷಕರ ಮೆಚ್ಚುಗೆ ಗಳಿಸಿರುವ ನಟ ನಾಗಭೂಷಣ್ ವಿರುದ್ಧ ಕೇಸು ದಾಖಲಾಗಿ ಪೊಲೀಸರು ಅವರನ್ನು ವಿಚಾರಣೆ ನಡೆಸುತ್ತಿದ್ದಾರೆ.

ಕಳೆದ ರಾತ್ರಿ ಬೆಂಗಳೂರಿನಲ್ಲಿ ನಟ ನಾಗಭೂಷಣ್ ಕಾರು ಕನಕಪುರ ರಸ್ತೆಯ ವಸಂತಪುರ ರಸ್ತೆಯ ಅಪಾರ್ಟ್‌ಮೆಂಟ್ ಬಳಿ ಅಪಘಾತವಾಗಿದ್ದು, ಫುಟ್‌ಪಾತ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದ 48 ವರ್ಷದ ಪ್ರೇಮಾ ಎಂಬ ಮಹಿಳೆ ಮೃತಪಟ್ಟರೆ, ಅವರ ಪತಿ ಗಂಭೀರ ಗಾಯಗೊಂಡಿದ್ದಾರೆ. ಉತ್ತರಹಳ್ಳಿಯ ಕೆಎಸ್.ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ತನಿಖೆ ನಡೆಯುತ್ತಿದೆ.

ಖಾಸಗಿ ವಾಹಿನಿಯ ಕಾರ್ಯಕ್ರಮ ಮುಗಿಸಿ ಬರುವ ವೇಳೆ ನಾಗಭೂಷಣ್ ಅವರು ಕಾರು ಅಪಘಾತಕ್ಕೀಡಾಗಿದೆ. ಗಾಯಾಳುಗಳನ್ನು ನಾಗಭೂಷಣ್ ಅವರು ಆಸ್ಪತ್ರೆಗೆ ಸೇರಿಸಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ಪ್ರೇಮ ಎಸ್. ಮೃತಪಟ್ಟಿದ್ದಾರೆ.

ನಾಗಭೂಷಣ್ ಅವರು ಕಳೆದ ರಾತ್ರಿ ಕಾರನ್ನು ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಫುಟ್‌ಪಾತ್‌ನಲ್ಲಿ ನಡೆದು ಹೋಗುತ್ತಿದ್ದ ಕೃಷ್ಣ ಬಿ (58) ಮತ್ತು ಅವರ ಪತ್ನಿ ಎಸ್ ಪ್ರೇಮ ಅವರಿಗೆ ಡಿಕ್ಕಿ ಹೊಡೆಸಿದ್ದಾರೆ. ಫುಟ್ ಪಾತ್‌ಗೆ ಬಂದ ಕಾರು ನಂತರ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದೆ ಪ್ರೇಮ ಅವರ ಮುಖ, ತಲೆಗೆ ಗಾಯವಾಗಿ ತೀವ್ರ ರಕ್ತಸ್ರಾವವಾಗಿ ಆಸ್ಪತ್ರೆಗೆ ಕರೆದೊಯ್ಯುವಾಗಲೇ ಮೃತಪಟ್ಟಿದ್ದಾರೆ.

ಕೊಡಗಿನಲ್ಲಿ ಭಾರೀ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ಭಾಗಮಂಡಲ ಸೇರಿದಂತೆ ಬಹುತೇಕ ಕಡೆ ಮಳೆ ಮುಂದುವರಿದಿದ್ದು, ಇಲ್ಲಿನ ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ 3 ಸಾವಿರ ಕ್ಯೂಸೆಕ್ ದಾಟಿದೆ. ನಾಪೋಕ್ಲು ಸಮೀಪದ ಬಲಮುರಿ ಗ್ರಾಮದ ಕಿರುಸೇತುವೆ ಭಾನುವಾರ ಮುಳುಗಡೆಯಾಗಿದೆ. ಭಾಗಮಂಡಲ ಹೋಬಳಿ ವ್ಯಾಪ್ತಿಯಲ್ಲಿ ಹಾಗೂ ಘಟ್ಟ ಪ್ರದೇಶಗಳಲ್ಲಿ ಶನಿವಾರ ರಾತ್ರಿಯಿಡೀ ಭಾರಿ ಮಳೆ ಸುರಿದಿದ್ದು, ಸರಾಸರಿ 11 ಸೆಂ.ಮೀ.ನಷ್ಟು ಮಳೆ ದಾಖಲಾಗಿದೆ. ಗೋಣಿಕೊಪ್ಪಲು ಭಾಗದಲ್ಲೂ ಭಾರೀ ಮಳೆಯಾಗಿದೆ. ಮಡಿಕೇರಿ ನಗರದಲ್ಲೂ ಮಳೆ ಮುಂದುವರಿದಿದೆ. ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನ ಮತ್ತೂರಲ್ಲಿ ಮಳೆಯಿಂದ ಅಡಕೆ ಮರವೊಂದು ಉರುಳಿದ ಪರಿಣಾಮ ವಿದ್ಯುತ್ ತಂತಿಗಳು ತುಂಡಾಗಿ ಬಿದ್ದು ಹಸು ಮೃತಪಟ್ಟಿದೆ. ಕುಶಾಲನಗರ ಸೇತುವೆ ಬಳಿ ಮೂರು ಅಡಿ ನೀರು ಹೆಚ್ಚಾಗಿದ್ದು, ಮಳೆ ಮುಂದುವರಿದಿರುವುದರಿಂದ ಮತ್ತಷ್ಟು ಏರಿಕೆಯಾಗುವ ಸಂಭವವಿದೆ. ಈಗಾಗಲೇ ಜಲ ವಿವಾದದಿಂದ ತತ್ತರಿಸಿರುವ ಕಾವೇರಿ ಕಣಿವೆ ಜನ ವರುಣನ ಆರ್ಭಟದಿಂದ ಸ್ವಲ್ಪ ಮಟ್ಟಿಗೆ ಸಮಾಧಾನಪಡುಬಹುದಾದ ಪರಿಸ್ಥಿತಿ ಉಂಟಾಗಿದೆ. ಇದೇ ರೀತಿ ಮಳೆ ಮುಂದುವರೆದರೆ ಕಾವೇರಿ ಒಳಹರಿವಿನ ಪ್ರಮಾಣ ಹೆಚ್ಚಳವಾಗಿ ನೀರಿನ ಸಂಗ್ರಹ ಸುಧಾರಿಸಿದರೆ ಈಗಾಗಲೇ ಕಾವೇರಿರುವ ಜನ ಸಂಕಷ್ಟ ಸ್ವಲ್ಪಮಟ್ಟಿಗೆ ತಗ್ಗಬಹುದು.

ಹಾರಂಗಿ ಒಳ ಹರಿವು ಹೆಚ್ಚಳ



ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ ಏನೆಂದರೆ, ನಮ್ಮ ಕಕ್ಷಿದಾರರಾದ ಶ್ರೀ ಅವಿನಾಶ್ ಎಮ್ ಬಿನ್ ಮಹದೇವಪ್ಪ ಕೆ ಎಸ್ ಮನೆ ನಂ ಎಲ್.ಐ.ಜಿ–130, 3ನೇ ಕ್ರಾಸ್, ಗಂಗೋತ್ರಿ ಲೇಔಟ್, ಮೈಸೂರು – 570006 ಮೊ.9886732590 ಇವರುಗಳು ಷೆಡ್ಯೂಲ್‌ನಲ್ಲ ನಮೂದಿಸಿರುವ ಸ್ವತ್ತನ್ನು ಶ್ರೀಮತಿ ಅನುರಾಧ ರಾಮಮೂರ್ತಿ ಕೋ ಲೇಟ್ ಪೋಲಂಕಿ ರಾಮಮೂರ್ತಿ ಇವರ ವಾಸ ಕ್ರಮವಾಗಿ ಮನೆ ನಂ. 145, 1ನೇ ಕ್ರಾಸ್, 1ನೇ ಮೇನ್, ಗಂಗೋತ್ರಿ ಲೇಔಟ್, ಮೈಸೂರು – 570009 ಇವರುಗಳಿಂದ ಖರೀದಿಸಲು ಇಚ್ಛಿಸಿರುವುದರಿಂದ ಷೆಡ್ಯೂಲ್ ನಮೂದಿತ ಸ್ವತ್ತಿನಲ್ಲಿ ಸಾರ್ವಜನಿಕರಾದ ತಮಗೆ ಯಾವುದೇ ಹಕ್ಕು ಹಿತಾಸಕ್ತಿ ಇದ್ದಲ್ಲಿ ನಮ್ಮ ಕಕ್ಷಿದಾರರ ಪರವಾಗಿ ಈ ಕೆಳಗೆ ನಮೂದಿಸಿರುವ ವಕೀಲರಿಗೆ ಈ ನೋಟೀಸು ಪ್ರಕಟಗೊಂಡ 7 ದಿನಗಳ ಒಳಗೆ ತಮ್ಮ ಯಾವುದೇ ತಂಟೆ ತಕರಾರು, ಹಕ್ಕು ಹಿತಾಸಕ್ತಿ ಇದ್ದಲ್ಲಿ ಲಿಖಿತವಾಗಿ ಅಥವಾ ಇತರೆ ಯಾವುದೇ ಮಾಧ್ಯಮದಲ್ಲಿ ತಮ್ಮ ತಕರಾರನ್ನು ತಿಳಿಸಬೇಕೆಂದು ಹಾಗೂ ನಮ್ಮಿಂದ ಸ್ವೀಕೃತಿ ಪಡೆಯಬೇಕೆಂದು ಇಲ್ಲದೇ ಇದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಸ್ವತ್ತನ್ನು ಖರೀದಿಸುತ್ತಾರೆಂತಲೂ, ಖರೀದಿಸಿದ ನಂತರದಲ್ಲಿ ಮುಂದೆ ಉಂಟಾಗುವ ಯಾವುದೇ ತಂಟೆ ತಕರಾರಿಗೆ ನಮ್ಮ ಕಕ್ಷಿದಾರರು ಬಾಧ್ಯಸ್ಥರಲ್ಲ ವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್: ಮೈಸೂರು ತಾಲ್ಲೂಕು, ಕಸಬ ಹೋಬಳಿ, ಬೋಗಾದಿ ಗ್ರಾಮಕ್ಕೆ ಸೇರಿದ ಅನ್ಯಾಕ್ರಾಂತವಾಗಿದ್ದು ಸರ್ವೆ ನಂ. 348 ವಿಸ್ತೀರ್ಣ 1 ಎಕರೆ 10 ಗುಂಟೆ ಜಾಗಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂ. 320 ಸ್ವತ್ತು, ಪಶ್ಚಿಮಕ್ಕೆ : ನಾಲೆ, ಉತ್ತರಕ್ಕೆ : ಸರ್ವೆ ನಂ. 294ರ ಸ್ವತ್ತು, ದಕ್ಷಿಣಕ್ಕೆ: ನಾಲೆ

ಸಹಿ/– ಜ್ಞಾನೇಶ್, ಬಿ.ಎ., ಎಲ್.ಎಲ್.ಬಿ., ವಕೀಲರು, 1466/1, 3ನೇ ಕ್ರಾಸ್, ತ್ಯಾಗರಾಜ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು. 9945722353

ದಿನಾಂಕ: 01.10.2023, ಸ್ಥಳ : ಮೈಸೂರು

IN THE HON'BLE COURT OF PRINCIPAL SENIOR CIVIL JUDGE (Sr.Dn.) AT MYSORE

F.D.P. No.2/2022

Petitioner: Sri. Manjunath T.S, S/o Late Shivarudraswamy T.S Aged about 72 years, residing at Door No#279, 2nd Main, C Block, 3rd Stage, Vijayanagara, Devaraja Mohalla, Mysore V/s Respondents: 1.Smt. Shailaja T.S and another W/o M.C. Nataraj D/o Late shivarudraswamy T.S Aged about 50 years, Residing at Door No. 23, 3rd Stage, A-1, Block, 1st Main, Vijayanagara, Mysore.

NOTICE TO APPEAR

Whereas the Petitioner has filed the above said petition for final decree proceedings in respect of suit schedule property.

You being the Respondent No.1 is hereby summoned to appear before the court in person or through a pleader duly instructed and able to answer all material questions relating to the above said suit or who shall be accompanied by some persons able to answer all such questions, the 30 day of October 2023 at 11:00 A.M. In default of your appearance before the court on the day before mentioned, the suit will be heard and determined in your absence as ex-parte. Given under my hand and seal of the court on this the day of 30.09.2023.

SCHEDULE PROPERTY

Item No.1: All that piece and parcel of site property bearing Site No. 410, measuring East to West 15 Mtrs and North to South 24 Mtrs, Situated at 4th Stage, 3rd Phase, Vijayanagara, Mysuru and bounded on:East by: Site No.411, West by: Site No. 409, North by: Road, South by: Site No. 404 and 405

Item No.2: All piece and parcel of the House Property bearing Door No. 279, Measuring East to West 12 Mtrs and North to South 18 Mtrs, situated at 22nd Cross, "C" Block, 3rd Stage, Vijayanagara, Mysuru and bounded on East by: Property bearing No. 280, West by: Property bearing No. 278, North by: Road South by: Property bearing No. 252,

BY THE ORDER OF COURT
Sd/- Chief Ministerial officer
court of senior civil judge & CJM, Mysore
Date:-30-09-2023, Place: Mysore,

10ನೇ ವರ್ಷದ ಸವಿನೆನಪು



ಸದಾ ನಿಮ್ಮ ನೆನಪಿನಲ್ಲಿರುವ

ದುಃಖಿತರು

ಎಂ. ವಿಜಯಕುಮಾರ್

ಪತ್ನಿ: ಶಾಂತಿ ಎಸ್.ಆರ್.

ಮಗ: ಎಂ.ವಿ.ಪವನಕುಮಾರ್ ಮತ್ತು ಮಗಳು, ಮೊಮ್ಮಕ್ಕಳು

ನಂ.1015, 5ನೇ ಕ್ರಾಸ್ ಇರ್ವಿನ್ ರಸ್ತೆ, ಮೈಸೂರು

ಎಂ.ಡಿ. ಗಂಗಾಧರ ಕುಮಾರ

ಜನನ: 27.1.1953
ಮರಣ: 2.10.2013

8ನೇ ವರ್ಷದ ಸವಿನೆನಪು



ಶ್ರೀಮತಿ ಜಯಲಕ್ಷ್ಮಿರವರು

(ಲೇಟ್ ಎಂ.ಎಲ್.ಅಪ್ಪಾಜಿಗೌಡರ ಪತ್ನಿ)

ಮಾಲೀಕರು, ಸುಪ್ರಭಾತ ಬಾರ್ & ರೆಸ್ಟೋರೆಂಟ್

ಇಂತಿ ದುಃಖತಪ್ತರು: ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಹಾಗೂ ಕುಟುಂಬವರ್ಗದವರು.

7ನೇ ವರ್ಷದ ಪುಣ್ಯಸ್ಮರಣೆ



ನಿಮ್ಮ ಅಗಲಿಕೆಯ ನೋವು ಆರದಿದ್ದರೂ ನಿಮ್ಮ ಜೀವ ಜ್ಯೋತಿ ಸದಾ ನಮ್ಮೆಲ್ಲರ ಬಾಳಿಗೆ ಬೆಳಕಾಗಿದೆ ಎಂದು, ಸದಾ ನಿಮ್ಮ ನೆನಪಿನಲ್ಲಿರುವ ಧರ್ಮಪತ್ನಿ ಶ್ರೀಮತಿ ಪದ್ಮನಾರಾಯಣ್,
ಪುತ್ರ ಡಾ. ವಿನೋದ್.ಟಿ.ಎನ್.,
ಸೊಸೆ: ಕಾವ್ಯ
ಪುತ್ರಿ ತೇಜಸ್ವಿನಿ.ಟಿ.ಎನ್.,
ಅಳಿಯ: ಮದನ್,
ಕರಿಮಂಟಿ ತಿಮ್ಮೇಗೌಡರು ಹಾಗೂ
ದಳಪತಿ ರಾಮೇಗೌಡರು ಕುಟುಂಬ ವರ್ಗದವರು.

ಟಿ.ನಾರಾಯಣ್

(ರೈಲ್ವೆ)

ಆಫೀಸ್ ಸೂಪರಿಡೆಂಟ್, ಸದರನ್ ರೈಲ್ವೆ, ಮೈಸೂರು. ಅಧ್ಯಕ್ಷರು, ಮಂಡ್ಯ ಜಿಲ್ಲಾ ಯೂನಿಯನ್ ಕೋ–ಆಪರೇಟಿವ್ ಬ್ಯಾಂಕ್, ಮಂಡ್ಯ ಜೆಡಿಎಸ್ ಮುಖಂಡರು, ಪಾಲಹಳ್ಳಿ

10ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಎಂ.ಎನ್.ಚಂದ್ರಪ್ಪ

(ಅಸಿಸ್ಟೆಂಟ್ ಕಮೀಷನರ್ ಆಫ್ ಪೊಲೀಸ್)

ನಿಮ್ಮ ಅಗಲಿಕೆಯನ್ನು ಕೇವಲ ಪದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ನಿಮ್ಮ ಜೊತೆ ಕಳೆದ ಪ್ರತಿ ಕ್ಷಣಗಳನ್ನು ನಮ್ಮ ಹೃದಯದಲ್ಲಿ ಅತ್ಯಂತ ಗೌರವ ಮತ್ತು ಪ್ರೀತಿಯಿಂದ ನೆನೆಯುತ್ತೇವೆ. ಸಮಯ ಬದಲಾಗುತ್ತಾ ಹೋದರೂ... ನಮ್ಮ ಜೀವನದಲ್ಲಿ ನಿಮ್ಮ ಉಪಸ್ಥಿತಿ ಎಂದೂ ಅಳಿಯುವುದಿಲ್ಲ.

ಶ್ರೀಮತಿ. ವನಜಾ ಚಂದ್ರಪ್ಪ ಮತ್ತು ಮಕ್ಕಳು, ಸ್ನೇಹಿತರು ಹಾಗೂ ಕುಟುಂಬವರ್ಗದವರು